ಕನ್ನಡ ವಿಶ್ವವಿದ್ಯಾಲಯ ಹಂಪಿ

ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್ ಪದವಿಗಾಗಿ ಸಲ್ಲಿಸಿದ ಸಂಶೋಧನಾ ಪ್ರಬಂಧ

‘ಡಾ.ರಂಗಾರೆಡ್ಡಿ ಕೋಡಿರಾಂಪುರ ಅವರ ಸಾಹಿತ್ಯ ಅಧ್ಯಯನ’

ಮಮತ.ವಿ

ಸಂಶೋಧನಾ ವಿದ್ಯಾರ್ಥಿ

ರಿ.ನಂ: ಕ.ಸಾ.ಪ.-೧೬೨೦೦೧೦೩೦೦೬೮-೨೦೧೭

ಮಾರ್ಗದರ್ಶಕರು

ಡಾ.ಹನುಮಂತರಾಯಪ್ಪ.ಎಚ್

ಪ್ರಾಧ್ಯಾಪಕರು, ಕನ್ನಡ ವಿಭಾಗ

ಸರ್ಕಾರಿ ಕಲಾ ಕಾಲೇಜು

ಬೆಂಗಳೂರು

ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು

೨೦೧೬-೨೦೧೭

ದೃಢೀಕರಣ ಪತ್ರ

ಮಮತ.ವಿ ಇವರು **‘ ಡಾ.ರಂಗಾರೆಡ್ಡಿ ಕೋಡಿರಾಂಪುರ ಅವರ ಸಾಹಿತ್ಯ ಅಧ್ಯಯನ’** ಎಂಬ ಶೀರ್ಷಿಕೆಯ ಎಂ.ಫಿಲ್ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸ್ವತಂತ್ರ ಅಧ್ಯಯನದ ಮೂಲಕ ಸಿದ್ಧಪಡಿಸಿರುತ್ತಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ನಿಬಂಧವನ್ನು ಈ ಮೊದಲು ವಿಶ್ವವಿದ್ಯಾಲಯದ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ಡಾ.ಹನುಮಂತರಾಯಪ್ಪ. ಎಚ್

Dr. H. Hanumantharayappa
M.A., Ph.D.,
Associate Professor in Kannada
Govt. Arts College

ಪ್ರಾಧ್ಯಾಪಕರು, ಕನ್ನಡ ವಿಭಾಗ

ಸರ್ಕಾರಿ ಕಲಾ ಕಾಲೇಜು

ಬೆಂಗಳೂರು

ದಿನಾಂಕ:
ಸ್ಥಳ:

ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ **'ಡಾ.ರಂಗಾರೆಡ್ಡಿ ಕೋಡಿರಾಂಪುರ ಅವರ ಸಾಹಿತ್ಯ ಅಧ್ಯಯನ'** ಎಂಬ ಶೀರ್ಷಿಕೆಯ ಎಂ.ಫಿಲ್ ನಿಬಂಧವನ್ನು ಡಾ.ಹನುಮಂತರಾಯಪ್ಪ.ಎಚ್ ಪ್ರಾಧ್ಯಾಪಕರು, ಕನ್ನಡ ವಿಭಾಗ ಸರ್ಕಾರಿ ಕಲಾ ಕಾಲೇಜು ಬೆಂಗಳೂರು ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ನಿಬಂಧವನ್ನು ಈ ಮೊದಲು ವಿಶ್ವವಿದ್ಯಾಲಯದ ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗಾಗಲಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಶೋಧನಾ ವಿದ್ಯಾರ್ಥಿ

Mamatha. V

ಮಮತ.ವಿ

ದಿನಾಂಕ: 18/7/2017

ಸ್ಥಳ: ಬೆಂಗಳೂರು.

ಪರಿವಿಡಿ

ಡಾ.ರಂಗಾರೆಡ್ಡಿ ಕೋಡಿರಾಂಪುರ ಅವರ ಸಾಹಿತ್ಯ ಅಧ್ಯಯನ

ಅಧ್ಯಾಯ: ೧

ಅಧ್ಯಯನದ ಸ್ವರೂಪ, ಉದ್ದೇಶ ಮತ್ತು ವ್ಯಾಪ್ತಿ

'ಡಾ.ರಂಗಾರೆಡ್ಡಿ ಕೋಡಿರಾಂಪುರ ಅವರ ಸಾಹಿತ್ಯದ ಅಧ್ಯಯನ' ಈ ವಿಷಯವನ್ನು ನನ್ನ ಸಂಶೋಧನ ಅಧ್ಯಯನದ ವಿಷಯವಾಗಿ ಆಯ್ಕೆ ಮಾಡಿಕೊಂಡಿದ್ದೇನೆ. ರಂಗಾರೆಡ್ಡಿಯವರು ಸಾಹಿತ್ಯಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಹಾಗೆಯೇ ಇವರ ಸಾಹಿತ್ಯದ ಅಧ್ಯಯನ ಮಾಡುವುದರಿಂದ ಹೊಸ ವಿಚಾರಗಳ ಅರಿವು ನಮಗಾಗುತ್ತದೆ, ಕವಿಯಾಗಿ, ವಿಮರ್ಶಕರಾಗಿ, ಜನಪದ ತಜ್ಞರಾಗಿ ಹಾಗೂ ಸಂಪಾದಕರಾಗಿ ಸಾಹಿತ್ಯ ಸೇವೆಯನ್ನು ಮಾಡಿದ್ದಾರೆ. ಅದರಲ್ಲೂ ರಂಗಾರೆಡ್ಡಿಯವರು ಜಾನಪದ ಕ್ಷೇತ್ರಕ್ಕೆ ಕೊಟ್ಟ ಕೊಡುಗೆ ಅಪಾರ.

ಕನ್ನಡ ಸಾಹಿತ್ಯದಲ್ಲಿ ಜಾನಪದ ವಲಯಕ್ಕೆ ಸುಧೀರ್ಘವಾದ ಪರಂಪರೆಯಿದೆ. ಭಾರತ ದೇಶದಲ್ಲಿ ನಮ್ಮ ಕರ್ನಾಟಕದ ಜನಪದ ಸಂಸ್ಕೃತಿ ಅತ್ಯಂತ ಶ್ರೀಮಂತವಾಗಿದೆ. ಕಲೆ, ಸಾಹಿತ್ಯ, ನೃತ್ಯ (ಡೊಳ್ಳು ಕುಣಿತ, ಕಂಸಾಳೆ, ಕರಡಿ ಮಜಲು, ವೀರಗಾಸೆ, ನಂದಿಕೋಲು ಕುಣಿತ, ಇತ್ಯಾದಿ) ನಾಟಕ (ಬಯಲಾಟ, ದೊಡ್ಡಾಟ, ಶ್ರೀ ಕೃಷ್ಣ ಪಾರಿಜಾತ, ಯಕ್ಷಗಾನ) ಮುಂತಾದ ವಿವಿಧ ಪ್ರಕಾರಗಳನ್ನು ನಮ್ಮ ಕನ್ನಡ ಜಾನಪದ ಸಂಸ್ಕೃತಿಯಲ್ಲಿ ಕಾಣಬಹುದು. ಕನ್ನಡ ಜಾನಪದ ಸಂಸ್ಕೃತಿಯ ಒಂದು ಭಾಗವಾದ ಜಾನಪದ ಗೀತೆಗಳು ಅತ್ಯಂತ ವೈವಿಧ್ಯಮಯವಾಗಿವೆ. ಈ ಜಾನಪದ ಗೀತೆಗಳು ನಮ್ಮ ಕನ್ನಡ ನಾಡಿನ ವಿವಿಧ ಪ್ರದೇಶಗಳ ಪ್ರಾದೇಶಿಕ ಸೊಗಡುಗಳನ್ನು ನಮ್ಮ ಮುಂದಿನ ಪೀಳಿಗೆಗೆ ಜೋಪಾನ ಮಾಡಿವೆ ಎಂದರೆ ತಪ್ಪಲ್ಲ. ಇಂದಿನ ಪಾಶ್ಚಾತ್ಯ ಶೈಲಿಯ ಸಂಗೀತದ ಮಧ್ಯೆ ಜಾನಪದ ಗೀತೆಗಳು ತನ್ನ ಹಿಂದಿನ ವೈಭವವನ್ನು ಸ್ವಲ್ಪಮಟ್ಟಿಗೆ ಕಳೆದು ಕೊಂಡಿವೆ ಎಂದೆನಿಸಿದರೂ ತನ್ನ ಮೂಲ ನೆಲೆಯಾದ ಹಳ್ಳಿಗಳಲ್ಲಿ ಇನ್ನೂ ತನ್ನ ಅಸ್ತಿತ್ವವನ್ನು ಭದ್ರವಾಗಿ ಉಳಿಸಿಕೊಂಡಿರುವುದು ಸಮಾಧಾನ ತರುವ ಸಂಗತಿಯಾಗಿದೆ. ಕಂಸಾಳೆ ಪದ, ಗೀಗೀ ಪದ, ಕೋಲಾಟದ ಪದ, ರಾಗಿ ಬೀಸೋಪದ, ಸುಗ್ಗಿ ಹಾಡುಗಳು ಹೀಗೆ ಇನ್ನೂ ಅನೇಕ ವಿವಿಧ ಬಗೆಯ ಜಾನಪದ ಗೀತೆಗಳು ಆಯಾ ಪ್ರದೇಶದ ಜನರ ದೈನಂದಿನ ಚಟುವಟಿಕೆಗಳನ್ನು ಕೌಟುಂಬಿಕ ಜೀವನವನ್ನು, ಸಂಬಂಧಗಳನ್ನು, ದೇವರುಗಳನ್ನು ಹಾಗೂ ಧಾರ್ಮಿಕ ಆಚರಣೆಗಳನ್ನು

ನಮ್ಮ ಮುಂದೆ ತೆರೆದಿಡುತ್ತವೆ. ಈ ಜಾನಪದ ಗೀತೆಗಳನ್ನು ಸೃಷ್ಟಿಸಿದವರು ಯಾರೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಇವು ಹಳ್ಳಿಯ ಸಾಮಾನ್ಯ ಜನರ ನಡುವೆ ಹುಟ್ಟಿ ಬಾಯಿಂದ ಬಾಯಿಗೆ ಹರಿದು ಬಂದಿರುವ ಸಿರಿನುಡಿಗಳು ಎನ್ನಬಹುದು.

ರಂಗಾರೆಡ್ಡಿಯವರು ಜಾನಪದ ವಲಯಕ್ಕೆ ಹೆಚ್ಚು ಒತ್ತು ನೀಡಿದ್ದರಿಂದ, ಪಾರಂಪರಿಕವಾಗಿ ಬಂದ ಭಾರತೀಯ ಜಾನಪದ ವ್ಯವಸ್ಥೆಯನ್ನು ಮನುಷ್ಯನ ಅಸ್ತಿತ್ವದ ತಳಹದಿಯೆಂಬಂತೆ ಚಿತ್ರಿಸಿದ್ದಾರೆ. ಏಕೆಂದರೆ ಜಾನಪದ ಸಾಹಿತ್ಯವು ಭಾರತೀಯ ಮನುಷ್ಯನ ಬದುಕನ್ನು ರೂಪಿಸುವ, ಅವನ ಬದುಕಿನ ಆಧಾರವನ್ನು ಕಲ್ಪಿಸುವ, ಬದುಕಿಗೊಂದು ಅರ್ಥವನ್ನು ತರುವ ಜಾನಪದ ಸಾಹಿತ್ಯ ಮನುಷ್ಯನ ಹುಟ್ಟಿನಿಂದ ಸಾವಿನವರೆಗೆ ತನ್ನ ಜೀವನದ ಪ್ರತಿಯೊಂದು ಘಳಿಗೆಗೆ ಸಾಕ್ಷಿಯಾಗುವುದೇ ಜಾನಪದ. ರಂಗಾರೆಡ್ಡಿಯವರ ಸಾಹಿತ್ಯವು ಹೊಸಕಾಲದ ಸವಾಲುಗಳಿಗೆ ಗತಕಾಲದ ಚರಿತ್ರೆಯನ್ನು ಪ್ರೇರಣೆಯನ್ನಾಗಿಸಿಕೊಂಡು, ಅವುಗಳನ್ನು ಎದುರಿಸಬೇಕಾದ ತುರ್ತು ಇಂದಿನ ನವ ಆಧುನಿಕ ಕಾಲಕ್ಕೆ ಪ್ರೇರಣೆ ನೀಡಬಲ್ಲ ಶಕ್ತಿಯನ್ನು ಒದಗಿಸುವಂತಿದೆ. ಹಾಗಾಗಿ ಬದುಕನ್ನು ಪ್ರೀತಿಸುತ್ತಲೇ, ಬದುಕಿನ ವಿವಿಧ ಆಯಾಮಗಳನ್ನು ಇವರ ಕೃತಿಗಳು ಪರಿಚಯಿಸಿದವು. ರಂಗಾರೆಡ್ಡಿಯವರ ಸಾಹಿತ್ಯದಿಂದ ಕೆಲವು ಪ್ರಮುಖ ಅಂಶಗಳನ್ನು ಕಲೆಹಾಕಿ, ಅವುಗಳನ್ನು ಶಿಸ್ತುಬದ್ಧವಾದ ಅಧ್ಯಯನಕ್ಕೆ ಒಳಪಡಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಡಾ.ರಂಗಾರೆಡ್ಡಿಯವರು ಜಾನಪದ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡ ವಿದ್ವಾಂಸರಲ್ಲಿ ಒಬ್ಬರು. ಕೋಲಾರ ಜಿಲ್ಲೆಯ ಜಾನಪದ ಕಲೆಗಳ ಸಮಗ್ರ ಅದ್ಯಯನ ನಡೆಸಿ ಅವುಗಳ ಬಗ್ಗೆ ಮಾತನಾಡಬಲ್ಲ ಸಾಮರ್ಥ್ಯವನ್ನು ಪಡೆದಿದ್ದಾರೆ. ಇಂತಹ ವ್ಯಕ್ತಿಯ ಕೃತಿಗಳನ್ನು ಕುರಿತು ಅವಲೋಕಿಸುವ ಕೆಲಸವನ್ನು ನನ್ನ ಅಧ್ಯಯನದಲ್ಲಿ ಮಾಡಲಾಗುವುದು.

ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಶ್ರೀಯುತರು ಲಿಖಿತ ಜಾನಪದ, ಜನಪದಸಂಸ್ಕೃತಿ, ಬಂಡಾಯ ಜಾನಪದ, ಗಂಧದ ಮಡುವ ಕಲಕೂತ, ನೆಲದೊಡಲಪ್ರೀತಿ ಇಂತಹ ಕೃತಿಗಳನ್ನು ರಚಿಸಿದ್ದಾರೆ. ಈ ಕೃತಿಗಳ ಸಂಕ್ಷಿಪ್ತ ವಿವರಣಾತ್ಮಕ ವಿಶ್ಲೇಷಣೆಯನ್ನು ಮಾಡುವ ಪ್ರಯತ್ನ ಮಾಡಲಾಗುವುದು.

ಜಾನಪದ ಕ್ಷೇತ್ರದಲ್ಲಿ ಮೂಲ ಸಂಸ್ಕೃತಿಯನ್ನು ಹಾಗೂ ಆಧುನಿಕ ಜನಪದ ಸಂಸ್ಕೃತಿಯ ಹಲವಾರು ವಿಚಾರಗಳನ್ನು ಕಾಣಬಹುದು. ಜನಪದ ಎಂಬುದು ನಿರಂತರವಾದುದು, ಸೃಜನಾತ್ಮಕವಾದುದು. ರಂಗಾರೆಡ್ಡಿಯವರ ಜಾನಪದ ಕೃತಿಗಳ ಅಧ್ಯಯನದಿಂದ ಹಲವಾರು ಹೊಸ ವಿಚಾರಗಳನ್ನು ತಿಳಿಯಬಹುದು. ಹಾಗಾಗಿ ಜಾನಪದ ಕೃತಿಗಳ ಅಧ್ಯಯನವನ್ನು ನನ್ನ ಅಧ್ಯಯನದ ವ್ಯಾಪ್ತಿಯಲ್ಲಿ ಮಾಡಲಿದ್ದೇನೆ.

ರಂಗಾರೆಡ್ಡಿಯವರ ಸಾಹಿತ್ಯ ಕೃತಿಗಳನ್ನು ಗಮನಿಸಿದಾಗ ಶ್ರೀಶ್ರೀ, ಗುಬ್ಬೀವೀರಣ್ಣ, ನನ್ನೂರಹಾಡು, ಅಲ್ಲಮಪ್ರಭು ಮುಂತಾದ ಕೃತಿಗಳನ್ನು ಕಾಣಬಹುದು. ಈ ಸಾಹಿತ್ಯ ಕೃತಿಗಳ ಅಧ್ಯಯನದ ಅವಲೋಕನವನ್ನು ನನ್ನ ಅಧ್ಯಯನ ವ್ಯಾಪ್ತಿಯಲ್ಲಿ ಕೈಗೊಳ್ಳಲಿದ್ದೇನೆ. ಈ ಕೃತಿಗಳಲ್ಲಿ ಪ್ರಮುಖವಾಗಿ ನನ್ನೂರುಹಾಡು ಕವನ ಸಂಕಲನವು ಶ್ರೇಷ್ಠ ಕೃತಿಯಾಗಿದ್ದು, ಆ ಕವಿತೆಗಳ ಬಗ್ಗೆ ಮುಂದೆ ವಿವರವಾಗಿ ಬರೆಯಲು ಇಚ್ಚಿಸಿದ್ದೇನೆ.

ರಂಗಾರೆಡ್ಡಿಯವರು 'ಸೊಲ್ಲು ಸೊಲ್ಲೆಲ್ಲ ಅಪರಂಜಿ' ಎಂಬ ವಿಮರ್ಶಾ ಕೃತಿಯನ್ನು ರಚನೆ ಮಾಡಿದ್ದಾರೆ. ಈ ಕೃತಿಯಲ್ಲಿ ಮಧ್ಯಕಾಲೀನ ಸಾಹಿತ್ಯದ ಬಗ್ಗೆ ಹಲವಾರು ವಿಮರ್ಶಾ ಲೇಖನಗಳಿದ್ದು, ಬಹಳ ವಿಶಿಷ್ಟವಾಗಿವೆ. ಹಾಗೆಯೇ ದೇವನೂರರ 'ಒಡಲಾಳ', ನಾಗೇಗೌಡರ 'ದೊಡ್ಡಮನೆ' ಕಾದಂಬರಿಗಳ ಬಗ್ಗೆ ಉತ್ತಮ ವಿಮರ್ಶೆಗಳಿದ್ದು, ಇಂತಹ ಉತ್ತಮ ವಿಮರ್ಶಾಕೃತಿಯ ಬಗ್ಗೆ ನನ್ನ ಅಧ್ಯಯನದಲ್ಲಿ ಅಧ್ಯಯನ ಮಾಡುತ್ತೇನೆ. ಇವುಗಳಷ್ಟೇ ಅಲ್ಲದೆ ತೇರು ಹರಿದಾವು, ಬಯಲು ಸೀಮೆ ಭಾಷಾವೈವಿಧ್ಯ ಇತರೆ ಕೃತಿಗಳ ವಸ್ತು ವಿಷಯ ಉಲ್ಲೇಖವನ್ನು ನನ್ನ ಅಧ್ಯಯನದಲ್ಲಿ ಕೈಗೆತ್ತಿಕೊಳ್ಳಲಾಗುವುದು.

ಕೇವಲ ಜಾನಪದ ಸಾಹಿತ್ಯ, ವಿಮರ್ಶೆ, ಬರವಣಿಗೆಯ ಸಾಹಿತ್ಯಕ್ಕೆ ಸೀಮಿತವಾಗಿರದೆ, ರಂಗಾರೆಡ್ಡಿಯವರು ಸಾಹಿತ್ಯೇತರ ಸಾಧನೆಯಲ್ಲಿಯೂ ತೊಡಗಿದ್ದಾರೆ. ಹಲವಾರು ಚಳುವಳಿಗಳ ಜೊತೆ ಸಂಬಂಧವನ್ನು ಉಳಿಸಿಕೊಂಡಿದ್ದಾರೆ. ಅವುಗಳೆಂದರೆ ಬೀದಿನಾಟಕ, ದಲಿತ ಚಳುವಳಿ, ವಿದುರಾಶ್ವತ್ಥ ಅಭಿವೃದ್ಧಿ, ಮರಳು ಉಳಿಸುವ ಹೋರಾಟಗಳೂ ಸಹ ಪ್ರಭಾವಯುತವಾದುವು. ಆದ್ದರಿಂದ

'ಸಾಹಿತ್ಯೇತರ ಸಾಧನೆ'ಎಂಬ ಅಧ್ಯಾಯ ನನ್ನ ಅಧ್ಯಯನದ ಪರಿವಿಡಿಯಲ್ಲಿದ್ದು, ಬರವಣಿಗೆಯನ್ನು ಹೊರುತುಪಡಿಸಿ ಸಾಧಿಸಿದ ಸಾಧನೆಯನ್ನು ಕುರಿತು ವಿವರಣಾತ್ಮಕವಾಗಿ ವಿಶ್ಲೇಷಣೆಯನ್ನು ಮಾಡಿರುತ್ತೇನೆ. ಸಾಹಿತ್ಯೇತರ ಸಾಧನೆಯಲ್ಲಿ ಸಮಾಜಪರವಾದ ಹಲವು ಚಳುವಳಿ ಹಾಗೂ ಹೋರಾಟಗಳ ಬಗೆಗಿನ ಮಾಹಿತಿಯನ್ನು ಸಂಗ್ರಹಿಸಿ, ಹೆಚ್ಚು ಜನಪ್ರಿಯರಾದ ರಂಗಾರೆಡ್ಡಿಯವರನ್ನು ನನ್ನ ಬರವಣಿಗೆಯ ವ್ಯಾಪ್ತಿಯಲ್ಲಿ ಕಾಣಿಸಲು ಪ್ರಯತ್ನಿಸುತ್ತೇನೆ. ಅದೇ ರೀತಿ ಸಾಹಿತ್ಯೇತರ ಸಾಧನೆಯಲ್ಲಿ ನಾಟಕಗಳ ಪ್ರಭಾವ ಹೆಚ್ಚಾಗಿದ್ದು ನಾಟಕಗಳ ಪ್ರಭಾವದಿಂದ ಆದ ಬದಲಾವಣೆ ಹಾಗೂ ಪರಿಣಾಮಗಳು ಜೀವಂತ ಸಾಕ್ಷಿಗಳಾಗಿ ಉಳಿದಿವೆ. ಅಂತಹವುಗಳ ಬಗ್ಗೆ ಸ್ಪಷ್ಟ ಮಾಹಿತಿ ಚಿತ್ರಣ ನೀಡಬಯಸುತ್ತೇನೆ.

ರಂಗಾರೆಡ್ಡಿಯವರು ಕೇವಲ ಪ್ರಾಧ್ಯಾಪಕರಾಗಿ ಮಾತ್ರವಲ್ಲದೆ ಇತರೆ ಸಂಸ್ಥೆ, ಇಲಾಖೆಗಳಲ್ಲಿ ವಿಭಿನ್ನ ಸ್ಥಾನಗಳಲ್ಲಿ ಪ್ರವೃತ್ತಿಯಿಂದ ದುಡಿದಿದ್ದಾರೆ. ಅವರ ಸ್ಥೂಲ ಪರಿಚಯದ ಪಕ್ಷಿ ನೋಟವನ್ನು ಇಲ್ಲಿ ನೀಡಲಾಗುತ್ತದೆ. ಹಾಗೆಯೇ ಇಂತಹ ಶ್ರೇಷ್ಟ ವ್ಯಕ್ತಿಯಾದ ರಂಗಾರೆಡ್ಡಿಯವರು ಸಾಹಿತ್ಯಕ್ಷೇತ್ರದಲ್ಲಿ ಖ್ಯಾತಿ ಪಡೆದ ಶ್ರೇಷ್ಠ ವಿಮರ್ಶಕರು, ಉತ್ತಮ ಪ್ರಭಾವಿ ಚಿಂತಕರೂ ಆದ ಇವರ ಬಗ್ಗೆ ಹಲವು ವಿಮರ್ಶಕರು ಅಭಿಪ್ರಾಯಗಳನ್ನು ನೀಡಿದ್ದಾರೆ. ಅದನ್ನು ನನ್ನ ಅಧ್ಯಯನದ ವ್ಯಾಪ್ತಿಯಲ್ಲಿ ಅಳವಡಿಸಿಕೊಂಡಿದ್ದೇನೆ.

ಅಧ್ಯಾಯ: ೨

ರಂಗಾರೆಡ್ಡಿಯವರ ಜಾನಪದ ಕೃತಿಗಳು

ಜಾನಪದ ಇಂದು ನೆನ್ನೆಯದಲ್ಲ ಅದಕ್ಕೆ ಪ್ರಾಚೀನ ಕಾಲದಷ್ಟು ಇತಿಹಾಸವಿದೆ. ಜನರಿಗೆ ಸಂಬಂಧಿಸಿದ್ದು ಜನಪದ. ಮನುಷ್ಯ ಭೂಮಿಯ ಮೇಲೆ ಉಗಮವಾಗಿ ವಿಕಾಸದ ಹಾದಿಯನ್ನು ಅರಿತಂತೆಲ್ಲಾ ತನ್ನ ಬದುಕಿನ ಬಗೆಗೆ ಆಲೋಚನ ಪರನಾಗಿ ರೂಢಿಸಿಕೊಂಡ ಅಂಶಗಳೆಲ್ಲವೂ ಜನಪದ ಸಂಸ್ಕೃತಿ ಎಂದೆನಿಸಿಕೊಳ್ಳುತ್ತವೆ. ಅಂದರೆ ಪ್ರಾಚೀನಕಾಲದ ಸಂಪ್ರದಾಯಬದ್ಧ ಸಂಸ್ಕೃತಿಯ ಅಮೂಲ್ಯ ಅಂಶಗಳನ್ನು ಅರ್ಥಪೂರ್ಣವಾಗಿ ಕ್ರೂಡೀಕರಿಸಿಕೊಂಡಿರುವಂತದ್ದು ಈ ಜನಪದ. ಹಾಮಾ ನಾಯಕರು ೧೯೬೬ ರಲ್ಲಿ folklore ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಜಾನಪದ ಎಂಬ ಶಬ್ಧ ಬಳಕೆಗೆ ತಂದರು. ಜನಪದರ ಸಾಹಿತ್ಯ ಸಂಗೀತ, ನೃತ್ಯ, ಗಾದೆ, ಒಗಟು, ಲಾವಣಿ ಆಚರಣೆ, ನಂಬಿಕೆ, ಈ ಎಲ್ಲವನ್ನು ಒಳಗೊಂಡಿದ್ದೇ ಜಾನಪದವೆಂದು ಹೇಳಬಹುದು.

ಜಾನಪದದ ಬಗ್ಗೆ ವ್ಯಾಖ್ಯಾನಗಳು:-

೧) ಬಿ.ಎ.ಬಾಟ್ಕಿನ್:- "ಶುದ್ಧ ಮೌಖಿಕ ಸಂಸ್ಕೃತಿಯಲ್ಲಿ ಪ್ರತಿಯೊಂದು ಜಾನಪದವೇ"[೧]

೨) ಮ್ಯಾಕ್ ಎಡ್ವರ್ಡ್ ಲೀಚ್:- "ಸಂಗ್ರಹಗೊಂಡ ಅನುಭವ ಭಂಡಾರವೇ ಜಾನಪದ"[೨]

೩) ಸಿ.ಎಫ್.ಪಾಟರ್:- "ಜಾನಪದ ಸಾಯಲು ಇಷ್ಟ ಪಡದ ಜೀವಂತ ಪಳೆಯುಳಿಕೆ"[೩]

೪) ಜೋನಾಸ್ ಜ್ಯಾಲಿಸ್:- ಜಾನಪದವು ಸಾಂಪ್ರದಾಯಿಕ ವಿಷಯಗಳನ್ನು ಅಧ್ಯಯನ ಮಾಡುವ ವಿಜ್ಞಾನ"[೪]

೫) ಆರ್ಚರ್ ಟೇಯ್ಲರ್:- "ಜಾನಪದ ಕರ್ತೃವಿಲ್ಲದ ಪರಂಪರಾನುಗತ ವಸ್ತುಗಳನ್ನು ತಲೆಮಾರಿನಿಂದ ತಲೆಮಾರಿಗೆ ಹಸ್ತಾಂತರಿಸುತ್ತದೆ"[೫]

ಈ ಮೇಲಿನ ಎಲ್ಲಾ ವ್ಯಾಖ್ಯಾನಗಳ ಹಿನ್ನಲೆಯಲ್ಲಿ ಜನಪದ ಸಾಹಿತ್ಯದ ಹರಹು, ಸ್ವರೂಪ ವ್ಯಾಪ್ತಿಯನ್ನು ತಿಳಿದುಕೊಳುತ್ತಾ ಇವುಗಳ ನೆರಳಿನಲ್ಲಿ ರಂಗಾರೆಡ್ಡಿಯವರ ಜನಪದ ಸಾಹಿತ್ಯವನ್ನು ತಿಳಿಯುವ ಪ್ರಯತ್ನ ಮಾಡಬೇಕಾಗುತ್ತದೆ.

ಜಾನಪದದ ಅಧ್ಯಯನದ ಇತಿಹಾಸ ಆರಂಭವಾಗುವುದು ಮೊದಲಿಗೆ ಪಾಶ್ಚಾತ್ಯರಿಂದಲೇ. ಹತ್ತೊಂಬತ್ತನೆಯ ಶತಮಾನದಲ್ಲಿ ಕಂಡುಬರುವ ಪಾಶ್ಚಾತ್ಯ ವಿದ್ವಾಂಸರು ಹಾಗೂ ಮಿಷನರಿಗಳು ಜಾನಪದದ ಸಂಗ್ರಹ ಕಾರ್ಯದಲ್ಲಿ ತೊಡಗಿದರು. ಅಂತಹ ಪ್ರಮುಖರೆಂದರೆ ಜಾನ್‌ಲೇಡನ್, ಅಬ್ಬೆದುಬಾಯ್, ಚಾರ್ಲ್ಸ್.ಇ.ಗೋವರ್, ಮೇರಿಫ್ರೀರೆ, ಫ್ಲೀಟ್, ಕಿಟೆಲ್ ಮುಂತಾದವರು. ಕರ್ನಾಟಕ ಜಾನಪದ ಅಧ್ಯಯನ ಸಾರ್ಥಕವಾದ ರೀತಿಯಲ್ಲಿ ಹೆಜ್ಜೆ ಇಟ್ಟಿದ್ದು ೧೯೨೪ರಲ್ಲಿ. ಜನಪದ ಸಾಹಿತ್ಯ ಪ್ರಚಾರಕ್ಕೆ ನಾಂದಿಯಾಡಿದ ಹಲಸಂಗಿ ಗೆಳೆಯರ ಗುಂಪಿನ ಮದುರ ಚೆನ್ನ, ಕಾಪಸೆ ರೇವಪ್ಪ, ಮತ್ತು ಸಿಂಪಿ ಲಿಂಗಣ್ಣನವರು ಕೂಡಿ ೧೯೩೧ರಲ್ಲಿ ಸಂಪಾದಿಸಿ ಹೊರತಂದ 'ಗರತಿಹಾಡು' ಅದ್ವಿತೀಯ ಕೃತಿಯಾಗಿ ಪರಿಣಮಿಸಿತು. ೧೯೪೦ ರಿಂದೀಚೆಗೆ ಜನಪದ ಸಾಹಿತ್ಯ ಸಂಗ್ರಹದ ಪ್ರಕಟಣೆ ಕಡಿಮೆಯಾದರೂ ವೈವಿಧ್ಯತೆ ಮತ್ತು ಮಹತ್ವದ ದೃಷ್ಟಿಯಿಂದ ಉಪಯುಕ್ತವಾದುದಾಗಿದೆ.

ಕರ್ನಾಟಕದ ಜಾನಪದ ಅಧ್ಯಯನದ ಕ್ರಮ ವೈಜ್ಞಾನಿಕವಾಗಿ ಆರಂಭವಾದುದು ಸ್ವಾತಂತ್ರ್ಯ ನಂತರವೇ ಆಗಿದೆ. ಕಾಳಿಂಗರಾವ್, ಕೆ.ಆರ್.ಲಿಂಗಪ್ಪ, ಕರೀಂಖಾನ್ ಮುಂತಾದವರು ಜನಪದ ಗೀತೆಗಳನ್ನು ಹಾಡಿ, ನಾಡಿನಾದ್ಯಂತ ಅವುಗಳಿಗೆ ಒಳ್ಳೆಯ ಜನಪ್ರಿಯತೆಯನ್ನು ದೊರಕಿಸಿಕೊಟ್ಟ ಕಾರಣದಿಂದ ಜನತೆ ಈ ಕಡೆಗೆ ಹೆಚ್ಚು ಗಮನಹರಿಸಿದರು. ೧೯೫೦ರ ನಂತರ ಡಾ.ಗದ್ದಿಗೀಮಠ, ಜೀ.ಶಂ.ಪರಮಶಿವಯ್ಯ, ಸಿ.ಪಿ.ಕೆ. ಕ.ರಾ.ಕೃಷ್ಣಸ್ವಾಮಿ, ಜಿ.ಆರ್.ತಿಪ್ಪೇಸ್ವಾಮಿ ಇನ್ನು ಮುಂತಾದವರು, ಜಾನಪದ ಕ್ಷೇತ್ರದಲ್ಲಿ ಅಧ್ಯಯನವನ್ನು ಕೈಗೊಂಡು ಕನ್ನಡ ಸಾಹಿತ್ಯಕ್ಕೆ ಉತ್ತಮ ಕೊಡುಗೆ ನೀಡಿದ್ದಾರೆ.

ಜನಪದ ಕ್ಷೇತ್ರಕ್ಕೆ ಸೇವೆ ಸಲ್ಲಿಸಿದ ಹಲವು ಮಹಾನಾಯಕರ ಸಾಲಿಗೆ ಸೇರುವ ಹಿಂದಿನ ತಲೆಮಾರಿನ ಜಾನಪದ ತಜ್ಞರಲ್ಲಿ ದೇ.ಜ.ಗೌ., ಜೀ.ಶಂ.ಪ., ಕಾಳೇಗೌಡ ನಾಗವಾರ, ಡಿ.ಲಿಂಗಯ್ಯ ಕಂಬಾರರು ಇನ್ನೂ ಮುಂತಾದವರು ಇತ್ತೀಚಿನ ಜಾನಪದ ತಲೆಮಾರಿನ ಪೈಕಿ ಡಾ.ರಂಗಾರೆಡ್ಡಿ ಕೂಡ

ಒಬ್ಬರಾಗಿ ಬಹಳ ಶ್ರಮವಹಿಸಿ ತಮ್ಮದೇ ಆದ ಕೊಡುಗೆಯನ್ನು ನೀಡುವುದರ ಮೂಲಕ ಹಲವು ಜಾನಪದ ಕೃತಿಗಳನ್ನು ರಚನೆ ಮಾಡಿದ್ದಾರೆ.

೨.೧ ಲಿಖಿತ ಜಾನಪದ

ಜಾನಪದ ಎನ್ನುವಂತಹದ್ದು ನಶಿಸಿ ಹೋಗುವಂತಹದ್ದಲ್ಲ. ಜೀವನದ ಶೈಲಿಯಲ್ಲಿ ಬದಲಾವಣೆಯಾದಂತೆಲ್ಲಾ ಹೊಸ ವಿಚಾರಗಳು ಹುಟ್ಟಿಕೊಳ್ಳುತ್ತವೆ. ಹಾಗೂ ಬೇರೆ ಬೇರೆ ರೂಪಗಳಲ್ಲಿ ತಲೆ ಎತ್ತುತ್ತಿರುತ್ತವೆ. ಇದಕ್ಕೆ ರಂಗಾರೆಡ್ಡಿಯವರ 'ಲಿಖಿತ ಜಾನಪದ'ವೇ ಸಾಕ್ಷಿಯಾಗಿದೆ ಎಂದರೆ ತಪ್ಪಾಗಲಾರದು. ಏಕೆಂದರೆ ಗೋಡೆ ಬರಹಗಳು, ಆಟೋಗ್ರಾಪ್‌ಗಳು ಎಲ್ಲರಿಗೂ ಗೊತ್ತಿರುವಂತಹ ವಿಚಾರಗಳೇ, ಆದರೆ ಅಂತಹ ಬರಹಗಳನ್ನು ಲಿಖಿತ ಜಾನಪದ ಸಂಸ್ಕೃತಿಗೆ ಒಳಪಡಿಸಿದ್ದಾರೆ. ಇದು ವಿಶಿಷ್ಟವಾಗಿದ್ದು ಹೊಸ ಸೃಷ್ಟಿಯ ದಾಖಲೆಯಾಗಿದೆ ಎಂದು ಹೇಳಬಹುದು.

ವಿದ್ಯಾರ್ಥಿ ಸಮುದಾಯವನ್ನು ಕುರಿತು ನೋಡಿದಾಗ ಅವರಲ್ಲಿಯೂ ಕೂಡ ಕಥೆ, ಗೀತೆ, ಗಾದೆ, ಒಗಟು, ಹಾಸ್ಯ, ಎಲ್ಲವೂ ಇರುತ್ತದೆ. ಇದರ ಜೊತೆಗೆ ಮತ್ತೊಂದು ಗಮನಿಸಬೇಕಾದ ಅಂಶವೆಂದರೆ, ಬರವಣಿಗೆಯ ಮೂಲಕ ತಮ್ಮ ಭಾವನೆಗಳನ್ನು, ವೈಯಕ್ತಿಕ ವಿಚಾರಗಳನ್ನು ಮನಬಿಚ್ಚಿ ಹೇಳುವ, ವ್ಯಕ್ತಪಡಿಸುವ ಪ್ರಕಾರಗಳಲ್ಲಿ 'ಕಕ್ಕಸಿನ ಗೋಡೆ ಬರಹಗಳು' 'ಆಟೋಗ್ರಾಪ್‌ಗಳು' ನಿಜಕ್ಕೂ ವಿಶಿಷ್ಟವಾಗಿವೆ. ಇಂತವುಗಳು ರಂಗಾರೆಡ್ಡಿಯವರ 'ಲಿಖಿತ ಜಾನಪದ'ದ ಪುಸ್ತಕದಲ್ಲಿಯೂ ಬಹಳ ವಿಶಿಷ್ಟವಾಗಿ ಮೂಡಿಬಂದಿದೆ.

'ಕಕ್ಕಸಿನ ಗೋಡೆ ಬರಹಗಳು' ಲೇಖನದಲ್ಲಿ ಕಾಲೇಜಿನ ಅಪ್ರಾಪ್ತ ಮಕ್ಕಳು ತಮ್ಮ ಭಾವನೆಗಳು ಅದುಮಿಟ್ಟುಕೊಳ್ಳಲಾಗದೆ ಹಾಗೂ ಅನುಭವಿಸಲು ಸಾಧ್ಯವಾಗದಿದ್ದನ್ನು ಗೋಡೆ ಬರಹಗಳ ಮೂಲಕ ಹೊರಹಾಕಿರುತ್ತಾರೆ. ಆ ಗೋಡೆ ಬರಹಗಳಲ್ಲಿ ಎರಡು ಪ್ರಕಾರಗಳನ್ನಾಗಿ ಗುರ್ತಿಸಲಾಗಿದೆ.

೧) ಕಾಮಕ್ಕೆ ಸಂಬಂಧಿಸಿದ ಬರಹಗಳು

೨) ಕಾಮಕ್ಕೆ ಹೊರತಾದ ಬರಹಗಳು

ಮತ್ತೆ ಅವುಗಳಲ್ಲಿ ಹಲವಾರು ಭಾಗಗಳಾಗಿ ವರ್ಗೀಕರಿಸಿ ಎಲ್ಲಾ ವಿಧಾನಗಳ ಬಗ್ಗೆ ವಿವರಣೆಯನ್ನು ನೋಡಬಹುದು. ಅವುಗಳಿಗೆ ಕಾರಣಗಳನ್ನು ಸಹ ತಿಳಿಯುತ್ತಾ ಹೋಗುತ್ತೇವೆ. ಮೊದಲನೆಯದಾಗಿ ಸಮಾಜದಲ್ಲಿ ಬಡವ ಮತ್ತು ಶ್ರೀಮಂತರ ನಡುವಿನ ಅಂತರ. ಬಡವರು ಉತ್ತಮ ಶಾಲೆಗಳಲ್ಲಿ ಓದಿಸಲಾಗದೆ ಹಳ್ಳಿಯಲ್ಲಿ ಓದಿಸುತ್ತಾರೆ. ಅಲ್ಲಿ ಉತ್ತಮ ಶಿಕ್ಷಣ ತಿಳುವಳಿಕೆಯನ್ನು ಪಡೆಯದೆ ಹೀಗೆ ಸರಿಯಾದ ತಿಳುವಳಿಕೆಯಿಲ್ಲದೆ, ಈ ಬರಹಗಳಿಗೆ ಗಮನ ನೀಡುವ ಸಾಧ್ಯತೆ ಹೆಚ್ಚಾಗಿರುತ್ತದೆ. ಅದರ ಜೊತೆಗೆ ಕಾಲೇಜಿನ ಹಂತದಲ್ಲಿದ್ದಾಗ ಮಕ್ಕಳಿಗೆ ದೈಹಿಕವಾಗಿ, ಮಾನಸಿಕವಾಗಿ, ಬೆಳವಣಿಗೆಯ ಹಾಗೂ ಬದಲಾವಣೆಯ ಬಗ್ಗೆ ತಿಳುವಳಿಕೆ ನೀಡದಿದ್ದಾಗ ವಿದ್ಯಾರ್ಥಿಗಳು ಬೇರೆ ದಿಕ್ಕಿನಲ್ಲಿ ಸಾಗುತ್ತಾರೆ. ಅದಲ್ಲದೆ ಶಾಲೆಗಳಲ್ಲಿನ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಜಾಗೃತಿಯನ್ನು ಮೂಡಿಸಬೇಕು. ತಿಳುವಳಿಕೆ ನೀಡದೆ ಇರುವುದರಿಂದಲೇ, ಈ ತೊಂದರೆಗೆ ಕಾರಣವಾಗಿದೆ. ಹಾಗಾಗಿ ಈ ವಿಚಾರವನ್ನು ಕುರಿತು ರಂಗಾರೆಡ್ಡಿಯವರು ತಿಳುವಳಿಕೆ ನೀಡುವ ವ್ಯವಸ್ಥೆ ಇಲ್ಲದಿರುವುದೇ ಒಂದು ದೊಡ್ಡ ಕೊರತೆ ಎಂದಿದ್ದಾರೆ.

ಒಟ್ಟಾರೆ ಲೇಖಕರು ಈ 'ಗೋಡೆ ಬರಹಗಳು' ವಿಷಯದ ಅಧ್ಯಯನದಿಂದ ಯುವಕರ ಮನೋಭಾವವನ್ನು ತಿಳಿಯಬಹುದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಹಾಗೆಯೇ ಇನ್ನೊಂದು ಅಂಶವೆಂದರೆ ಇಂದಿನ ಶಿಕ್ಷಣದಲ್ಲಿ ದೈಹಿಕ ಶಿಕ್ಷಣದ ಅವಶ್ಯಕತೆಯಿದೆ. ಇದಕ್ಕೆ ಇಂತಹವರೇ ಕಾರಣವೆಂದು ಹೇಳಲಾಗುವುದಿಲ್ಲ. ಇಡೀ ವ್ಯವಸ್ಥೆಯ ಗೊಂದಲಗಳಿಂದ ಇಂತಹ ಗೋಡೆ–ಬರಹಗಳಿಗೆ ಇಂಬು ದೊರೆತಂತಾಗಿದೆ ಎಂಬುದನ್ನು ತಮ್ಮ ಲೇಖನದ ಮೂಲಕ ಹೊರಹಾಕಿ ಒಂದು ವ್ಯವಸ್ಥೆಯ ಬದಲಾವಣೆ, ದೈಹಿಕ ಶಿಕ್ಷಣದ ಅವಶ್ಯಕತೆಯ ಕಡೆಗೆ ಗಮನಹರಿಸಬೇಕೆಂದು ಎಚ್ಚರಿಸಿದ್ದಾರೆ. ಕೊನೆಯ ಅಂಶವಾಗಿ ಹೇಳುವುದಾದರೆ 'ಕಕ್ಕಸಿನ ಗೋಡೆ ಬರಹಗಳು' ಎಂಬುದನ್ನು ಲಿಖಿತ ಜಾನಪದ ಅಧ್ಯಯನದಲ್ಲಿ ತಂದಿರುವುದು ಬಹಳ ವಿಶಿಷ್ಟವಾಗಿದೆ.

'ಲಿಖಿತ ಜಾನಪದ' ಕೃತಿಯಲ್ಲಿ ಬರುವ ಇನ್ನೊಂದು ಲೇಖನ ಆಟೋಗ್ರಾಫ್‌ಗಳು. ನಾವು ಗಮನಿಸಿರುವ ಹಾಗೆ ಆಟೋಗ್ರಾಫ್‌ಗಳನ್ನು ಸಂಗ್ರಹಿಸುವುದು ಒಂದು ಆಸಕ್ತಿಯುತವಾದ ಅಭ್ಯಾಸವಾಗಿದೆ. ಅದರಲ್ಲಿಯೂ ವಿದ್ಯಾರ್ಥಿಗಳಲ್ಲಿ ಹೆಚ್ಚಾಗಿಯೇ ಕಂಡು ಬರುತ್ತದೆ. ಶಾಲೆಯ ದಿನಗಳು

ಅಂದರೆ ಎಸ್.ಎಸ್.ಎಲ್.ಸಿ. ಕೊನೆಗೊಂಡಾಗ ಈ ಆಟೋಗ್ರಾಫ್‌ಗಳು ಮೊದಲುಗೊಂಡು ಪ್ರತಿಯೊಬ್ಬರೂ ತಮ್ಮ ಸಹಪಾಠಿಗಳು, ಗೆಳೆಯರು, ಆತ್ಮೀಯರು, ಪ್ರಸಿದ್ಧ ವ್ಯಕ್ತಿಗಳು, ಶಿಕ್ಷಕರು, ಸಿನೆಮಾ ತಾರೆಯರು, ಸಾಹಿತಿಗಳು, ಮುಂತಾದವರಿಂದ ಹಸ್ತಾಕ್ಷರ ಪಡೆಯುತ್ತಿರುತ್ತಾರೆ. ಇದು ಆಸಕ್ತಿಯ ವಿಷಯದ ಜೊತೆಗೆ ಪ್ಯಾಷನ್ ಕೂಡ ಆಗಿದೆ. ರಂಗಾರೆಡ್ಡಿಯವರು ಇದರ ಬಗ್ಗೆ ಗಮನಹರಿಸಿ ಅದನ್ನು ಲಿಖಿತ ಜಾನಪದದಲ್ಲಿ ಬಳಕೆ ಮಾಡಿದ್ದಾರೆ.

ಗೋಡೆ ಬರಹಗಳಿಂದ ವಿದ್ಯಾರ್ಥಿಗಳ ಭಾವನೆಗಳನ್ನು ಅರ್ಥಮಾಡಿಕೊಳ್ಳುವಂತೆ, ಆಟೋಗ್ರಾಫ್‌ನಲ್ಲಿಯೂ ವಿದ್ಯಾರ್ಥಿಗಳ ಒಳ ಮನಸ್ಸಿನ ಒಂದು ಸ್ಥೂಲ ಪರಿಚಯ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಅಲ್ಲದೆ ಈ ಲೇಖನದಲ್ಲಿ ಆಟೋಗ್ರಾಫ್‌ನಲ್ಲಿನ ಬರವಣಿಗೆಯ ಪ್ರಕಾರಗಳು, ಸ್ವರೂಪ, ಲಕ್ಷಣ, ಆಟೋಗ್ರಾಫ್ ಪುಸ್ತಕದ ಬಣ್ಣ, ಪುಸ್ತಕವನ್ನು ಸೂಕ್ತವಾಗಿ ಇಟ್ಟುಕೊಳ್ಳುವ ರೀತಿ, ಅಲ್ಲದೆ ವಿವಿಧ ವ್ಯಕ್ತಿಗಳು ನೀಡುವ ವಿಭಿನ್ನ ಬಗೆಯ ಆಟೋಗ್ರಾಫ್‌ಗಳು ಇವೆಲ್ಲವುಗಳ ಬಗ್ಗೆ ಮಾಹಿತಿಯಿದೆ. ಈ ಆಟೋಗ್ರಾಫ್‌ಗಳಿಗೆ ಸಂಬಂಧಿಸಿದ ಸಾಲುಗಳನ್ನು ಗಮನಿಸಬಹುದು.

ಒಬ್ಬ ಸಾಹಿತಿಯಾದ ವ್ಯಕ್ತಿ ನೀಡುವ ಆಟೋಗ್ರಾಫ್

"ಎಲ್ಲಾದರೂ ಇರು ಎಂತಾದರೂ ಇರು

ಎಂದೆಂದಿಗೂ ನೀ ಕನ್ನಡವಾಗಿರು"[೬]

ಸ್ನೇಹಿತರು ಬರೆಯುವ ಆಟೋಗ್ರಾಫ್

"SOME LIKE GOLDEN SHIP

SOME LIKE SILVER SHIP

BUT I LIKE ONLY FRIENDSHIP"[೭]

ಈ ರೀತಿಯಾಗಿ ರಂಗಾರೆಡ್ಡಿಯವರು ಆಟೋಗ್ರಾಪ್‌ನ್ನು ಲಿಖಿತ ಜನಪದ ದೃಷ್ಟಿಯಿಂದ ಜಾನಪದದ ಅಧ್ಯಯನದಲ್ಲಿ ಒಳಪಡಿಸಿರುವುದು ಹೊಸದಾಗಿಯೂ ವಿಶಿಷ್ಟವಾಗಿಯೂ ಕಂಡು ಬಂದಿದೆ.

೨.೨ ಬಂಡಾಯ ಜಾನಪದ

ಜಾನಪದ ಲೇಖನಗಳ ಎರಡನೇ ಪುಸ್ತಕ ಇದಾಗಿದೆ. ಇದು ಒಂದು ಅಪೂರ್ವ ಕೃತಿಯಾಗಿದೆ. ರಂಗಾರೆಡ್ಡಿಯವರು ತಮ್ಮ ಬರವಣಿಗೆಯಲ್ಲಿ ಬಂಡಾಯ ಧೋರಣೆಯನ್ನು ತೋರುತ್ತಾ, ಜಾನಪದವನ್ನು ಅರ್ಥೈಸಿದವರಲ್ಲಿ ಇವರು ಬಹಳ ಪ್ರಮುಖರಾಗಿದ್ದಾರೆ. ಬಂಡಾಯ ಜಾನಪದ ಕೃತಿಯು ಕನ್ನಡ ಜಾನಪದಕ್ಕೆ ಹೊಸ ಪರಿಕಲ್ಪನೆಯಾಗಿದ್ದು, ಮುಂದಿನ ದಿನಗಳಲ್ಲಿ ಈ ಕ್ಷೇತ್ರದ ಅಧ್ಯಯನ ಮಾಡುವವರಿಗೆ ಒಂದು ಆಕರಗ್ರಂಥವಾಗಿದೆ. ಈ ಕೃತಿಯು ವಿಭಿನ್ನ ಲೇಖನಗಳನ್ನು ಒಳಗೊಂಡಿದ್ದು, ಜಾನಪದ ಸಂಶೋಧನೆಗಳ ಗ್ರಂಥಗಳ ಸಾಲಿನಲ್ಲಿ ಒಂದು ಅತ್ಯುತ್ತಮ ಕೊಡುಗೆಯಾಗಿ ನಿಲ್ಲುತ್ತದೆ. ಬಂಡಾಯ ಜಾನಪದ ಕೃತಿಯಲ್ಲಿನ 'ಜಾನಪದದ ಮೇಲೆ ಆಧುನಿಕತೆಯ ಪ್ರಭಾವ' ಎಂಬ ಲೇಖನದಲ್ಲಿ ಜಾನಪದ ಎನ್ನುವಂತಹದ್ದು ಕೇವಲ ಹಳ್ಳಿಗೆ ಮಾತ್ರ ಸೀಮಿತವಾಗಿರದೆ, ಅದು ಕೆಳಸ್ತರಕ್ಕೆ ಮಾತ್ರ ಸೇರಿದುದು ಅಲ್ಲ. ಜಾನಪದ ಎನ್ನುವುದು ಸಹ ಚಲನಾಶೀಲವಾದುದು. ಈ ಬದಲಾವಣೆಯಿಂದಲೇ ಹೊಸದೊಂದು ಸಂಸ್ಕೃತಿ ಆ ಜಾಗದಲ್ಲಿ ಸೃಷ್ಟಿಯಾಗಲು ಸಾಧ್ಯವಾಗುತ್ತದೆ. ಆಧುನಿಕತೆ ಎನ್ನುವುದು ಯಾವುದೇ ಕಾರಣಕ್ಕೂ ಜಾನಪದ ಬೆಳವಣಿಗೆಗೆ ಅಡ್ಡಿಯಾಗುವುದಿಲ್ಲ. ಕೀಳಾಗಿ ಕಾಣುವುದೇ ಅದರ ನಿಜವಾದ ಬೆಳವಣಿಗೆಗೆ ಅಡ್ಡಿಯಾಗಿದೆ ಎಂಬ ಅಂಶವನ್ನು ರಂಗಾರೆಡ್ಡಿಯವರು ಮನವರಿಕೆ ಮಾಡಿಕೊಟ್ಟಿದ್ದಾರೆ.

'ಜನಪದ ಸಾಹಿತ್ಯದಲ್ಲಿ ಬಂಡಾಯ ಧೋರಣೆ' ಎಂಬ ಲೇಖನದಲ್ಲಿ ಆಳುವ ವರ್ಗ ಶ್ರಮಿಕರ ಮೇಲೆ ಮಾಡುವ ಶೋಷಣೆ, ಹೆಣ್ಣಿನ ಮೇಲೆ ಆಗುವ ಶೋಷಣೆ, ಮೇಲ್ಜಾತಿಯವರು ಕೀಳುವರ್ಗದ ಮೇಲೆ ಮಾಡುವ ಶೋಷಣೆಯನ್ನು ಸಹಿಸಿಕೊಂಡು ಅದನ್ನು ಪ್ರಶ್ನಿಸುವಂತಹ, ವಿರೋಧಿಸುವ, ಬಂಡಾಯದ ಧೋರಣೆಯನ್ನು ಗಮನಿಸಬಹುದು.

ಶೋಷಣೆಯ ವರ್ಗ ತಮ್ಮ ವಿರೋಧವನ್ನು ನೇರವಾಗಿ ಪ್ರತಿಭಟಿಸಲು, ವ್ಯಕ್ತಪಡಿಸಲು ಆಗದಿದ್ದರೂ, ಅದನ್ನು ಅಂದರೆ ತಮಗಾದ ನೋವು, ಅನುಭವಗಳು, ಅವಮಾನ, ಕಷ್ಟಗಳನ್ನು ಗೀತೆಗಳಲ್ಲಿ, ಕಥೆಗಳಲ್ಲಿ, ಗಾದೆಗಳಲ್ಲಿ ಹೊರಹಾಕಿದ್ದಾರೆ. ಹಾಗೂ ಈ ಸಾಹಿತ್ಯವೇ ಜನಪದ ಮಾಧ್ಯಮವಾಗಿದೆ. ಜನಪದ ಕಲೆಗಳು, ಜನಪದ ಸಾಹಿತ್ಯ ಹಾಗೂ ಪ್ರಧಾನ ಸಂಸ್ಕೃತಿ, ಪ್ರತಿ ಸಂಸ್ಕೃತಿ ನೆಲೆಗಳು, ಹಾಗೆಯೇ ಜನಪದ ಧರ್ಮಗಳು, ಜನಪದ ಸಾಹಿತ್ಯದಲ್ಲಿ ಅಸ್ಪೃಶ್ಯತೆ ಮೊದಲಾದ ವಿಷಯಗಳ ವಿಶ್ಲೇಷಣೆಯನ್ನು ಕುರಿತು ರಂಗಾರೆಡ್ಡಿಯವರ ಲೇಖನದಲ್ಲಿ ಕಾಣಬಹುದು.

'ಮಧ್ಯಕಾಲೀನ ಸಾಹಿತ್ಯದಲ್ಲಿ ಜಾನಪದೀಯ ಲಯ ಆಶಯ' ಎಂಬ ಲೇಖನದಲ್ಲಿ ಲಯವನ್ನು ಕುರಿತ ವಿಶ್ಲೇಷಣೆಯನ್ನು ಒಳಗೊಂಡಿದೆ. ಬಹಳ ಹಿಂದಿನ ಸಾಹಿತ್ಯವು ಎಲ್ಲರಿಗೂ ತಲುಪುವಂತದ್ದಾಗಿರಲಿಲ್ಲ. ಏಕೆಂದರೆ ರಾಜಾಶ್ರಯದಲ್ಲಿ ಕವಿಗಳು, ಲೇಖಕರು, ಸಾಹಿತ್ಯ ರಚನೆಯಾದ ಬಳಿಕ ಪಂಡಿತರು ಅದನ್ನು ಓದಿ ಹೇಳಿದಾಗ ಸೀಮಿತ ವರ್ಗಕ್ಕೆ ತಲುಪುತ್ತಿತ್ತು. ೧೨ನೇ ಶತಮಾನದಲ್ಲಿ ಹುಟ್ಟಿಕೊಂಡ ವಚನ ಸಾಹಿತ್ಯದಿಂದ ಸರಳವಾದ ಸಾಹಿತ್ಯ ರಚನೆಯಾಗಿ ಎಲ್ಲರಿಗೂ ಸಾಹಿತ್ಯ ಅಭಿರುಚಿಯನ್ನು ಸವಿಯಲು ಸಾಧ್ಯವಾಯಿತು. ವಚನಗಳನ್ನು ಹಾಡಿನ ರೂಪದಲ್ಲಿಯೂ ಹಾಡಲಾಯಿತು. ಅಲ್ಲಿಂದ ಸಾಹಿತ್ಯದಲ್ಲಿ ಲಯವು ಕಾಣಿಸಿಕೊಂಡಿದೆ. ಹಾಗೆಯೇ ಸಾಹಿತ್ಯ ವಚನಕಾರರಿಂದ ರಚಿಸಲ್ಪಟ್ಟು ಹಾಡುತ್ತಿದ್ದರಿಂದ, ವಚನಸಾಹಿತ್ಯ ಜನಪದ ಸಾಹಿತ್ಯವನ್ನು ಹೋಲುತ್ತದೆ. ಎಂಬ ವಿಚಾರವನ್ನು ರಂಗಾರೆಡ್ಡಿಯವರು ಮಧ್ಯಕಾಲೀನ ಸಾಹಿತ್ಯದಲ್ಲಿ ಜಾನಪದೀಯ ಲಯ ಎಂಬುದಾಗಿ ಗುರ್ತಿಸಿದ್ದಾರೆ. ವಚನಸಾಹಿತ್ಯದಿಂದ ಪ್ರಾರಂಭವಾಗಿ ದಾಸಸಾಹಿತ್ಯದಲ್ಲಿ ಕೀರ್ತನೆಗಳಲ್ಲಿ ಲಯ, ಹರಿಹರನ ರಗಳೆಯಲ್ಲಿ ಲಯ, ಜನ್ನನ ಯಶೋಧರ ಚರಿತ್ರೆಯಲ್ಲಿ ಅಮೃತಮತಿ ಅಷ್ಟಾವಂಕನ ಗಾನಕ್ಕೆ ಒಲಿಯುವುದು ಕೂಡ ಜನಪದಲಯಕ್ಕೆ, ಹಾಗೆಯೇ ರಾಘವಾಂಕನ ಹರಿಶ್ಚಂದ್ರಕಾವ್ಯದಲ್ಲಿನ ಗಾನರಾಣಿಯರ ಪ್ರಸಂಗ, ಕುಮಾರವ್ಯಾಸನ-ಕುಮಾರವ್ಯಾಸ ಭಾರತ, ನಂಜುಂಡ ಕವಿಯ-ಕುಮಾರ ರಾಮ ಸಾಂಗತ್ಯ, ರತ್ನಾಕರವರ್ಣಿಯ-ಭರತೇಶ ವೈಭವ ಹೀಗೆ ಹಲವಾರು ಕವಿ-ಕೃತಿ ಪ್ರಸಂಗಗಳ ಉದಾಹರಣೆಗಳೊಂದಿಗೆ ಮಧ್ಯಕಾಲೀನ ಸಾಹಿತ್ಯದಲ್ಲಿ ಜಾನಪದೀಯ ಲಯ ಹೇಗೆ ಬಳಕೆಯಾಗಿದೆ ಎಂಬುದನ್ನು ರಂಗಾರೆಡ್ಡಿಯವರು ತಮ್ಮ ಲೇಖನದಲ್ಲಿ ಸ್ಪಷ್ಟೀಕರಿಸಿದ್ದಾರೆ.

'ನಟುವರು' ಎಂಬ ಲೇಖನದಲ್ಲಿ ಆಂಧ್ರ ಗಡಿಭಾಗದ ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ರೋಣೂರು ಎಂಬ ಊರಿನಲ್ಲಿರುವ 'ನಟುವರು' ಎನ್ನುವ ಜನಾಂಗದ ಪೂರ್ಣ ಇತಿಹಾಸವನ್ನು ರಂಗಾರೆಡ್ಡಿಯವರು ತಮ್ಮ ಲೇಖನದಲ್ಲಿ ಹಿಡಿದಿಟ್ಟಿದ್ದಾರೆ. ಸಮಾಜದಲ್ಲಿ ಇತ್ತೀಚಿನ ದಿನಗಳಲ್ಲಿ ತುಂಬಾ ಕೆಳಸ್ತರದಲ್ಲಿರುವ ಈ ಜನಾಂಗದವರು ಕೆಲವು ವೈಶಿಷ್ಟತೆಗಳನ್ನು ಒಳಗೊಂಡಿರುವುದು ಗಮನಾರ್ಹವಾದುದು. ನಟುವರ ವೃತ್ತಿಜೀವನದ ಆಚಾರ ವಿಚಾರಗಳು, ಬದುಕಿನ ರೀತಿನೀತಿಗಳು, ಮದುವೆ, ಮುಂಜಿ, ಮರಣ ನಂತರದ ಶಾಸ್ತ್ರಗಳು, ಸೇವೆಗಳು ಮುಂತಾದವುಗಳ ವಿವರಣೆ ರಂಗಾರೆಡ್ಡಿಯವರ ಜಾನಪದ ಕ್ಷೇತ್ರ ಅಧ್ಯಯನದ ಆಸಕ್ತಿ ಮತ್ತು ಸಂಶೋಧನೆಯಿಂದ ಬೆಳಕಿಗೆ ಬರಲು ಸಾಧ್ಯವಾಗಿದೆ.

'ಜನಪದ ಕರಕುಶಲ ಕಲೆಗಳು' ಎಂಬ ಲೇಖನದಲ್ಲಿ ಕರಕುಶಲ ಕಲೆಗಳು ಯಾವುದೇ ಲಾಭದ ಉದ್ದೇಶ ಮತ್ತು ಮತ್ತೊಬ್ಬರನ್ನು ಆಕರ್ಷಿಸುವ ಉದ್ದೇಶವಿಲ್ಲದೆ ಇರುವ ತೀವ್ರ ಅಭಿವ್ಯಕ್ತಿಯ ತುಡಿತದಿಂದ ಬರುವ ಕಾವ್ಯ ಕ್ರಿಯೆಯೇ 'ಕರಕುಶಲ ಕಲೆ' ಎಂದು ರಂಗಾರೆಡ್ಡಿಯವರು ಕರೆದಿದ್ದಾರೆ.

"ಹರ್ಸ್‌ಕೋವಿಟ್ಸ್‌ನ ಮಾತಿನಂತೆ ಕರಕುಶಲಕಲೆಗಳು ಜನತೆಯ ನೈಜಸಂಸ್ಕೃತಿಯ ತೆರೆದ ಗ್ರಂಥಗಳಾಗಿವೆ. ಅಷ್ಟೇ ಅಲ್ಲದೇ ನಿರ್ದಿಷ್ಟ ಜೀವನದ ರೀತಿ–ನೀತಿಯ ಸೂಕ್ಷ್ಮ ಚಿತ್ರಣವನ್ನು ಕೊಡುತ್ತವೆ"[೮]

ಈ ಮೇಲಿನ ಮಾತುಗಳು ಕರ ಕುಶಲ ಕಲೆಗಳ ಮಹತ್ವವನ್ನು ತಿಳಿಸಿಕೊಡುತ್ತವೆ.

ರಂಗಾರೆಡ್ಡಿಯವರು ಕರಕುಶಲ ಕಲೆಗಳಲ್ಲಿ ೩ ವಿಭಾಗಗಳನ್ನು ಮಾಡಿದ್ದಾರೆ.

೧) ಧಾರ್ಮಿಕ ಮೌಲ್ಯಗಳನ್ನು ಒಳಗೊಂಡ, ಪರಂಪರೆಯಿಂದ ಹರಿದು ಬಂದು ಆಸ್ತಿಕ ಮನೋಭಾವಗಳನ್ನು ಪ್ರತಿಬಿಂಬಿಸುವಂತಹವು.

೨) ಲೈಂಗಿಕತೆಯ ಆಂಗಿಕ ಅಭಿನಯವನ್ನು ಒಳಗೊಂಡಿರುವಂತಹವು.

೩) ಮನರಂಜನೆ, ಸೌಂದರ್ಯವನ್ನು ಉದ್ದೇಶವಾಗಿರಿಸಿಕೊಂಡು ರಚನೆಯಾಗಿರುವಂತಹದು.

ಮಲೆನಾಡು ಮತ್ತು ಕರಾವಳಿ ಭಾಗದ ಕರಕುಶಲ ಕಲೆಗಳು ಮನೆಕಟ್ಟುವ ರೀತಿ, ಕಾಡಿನಲ್ಲಿ ಸಿಗುವ ಬಿದಿರಿನಿಂದ ಮಾಡುವ ನಾನಾ ಸಲಕರಣೆಗಳು, ಕೆತ್ತನೆಗಳು, ಶಿಲ್ಪಗಳು, ಒಡವೆಗಳು, ಮಡಿಕೆ ಕುಡಿಕೆಗಳು, ಎಲ್ಲಕಿಂತ ಹೆಚ್ಚಾಗಿ ಕಸೂತಿ ಕೆಲಸ, ಮನೆಗಳನ್ನು ಅಲಂಕರಿಸುವುದು, ರಂಗೋಲಿ, ಹಚ್ಚೆ ಹಾಕುವುದರ ಬಗ್ಗೆ ಅಧ್ಯಯನ ಮಾಡಿರುವ ರಂಗಾರೆಡ್ಡಿಯವರು ಬಯಲು ಸೀಮೆಗಿಂತ ಇವು ಭಿನ್ನವಾಗಿವೆ ಎಂಬ ವಿಚಾರವನ್ನು ಉಲ್ಲೇಖಿಸಿದ್ದಾರೆ. ಹಾಗೆಯೇ 'ಹಚ್ಚೆ' ಕಲೆಯ ಬಗ್ಗೆ ತಿಳಿಸುತ್ತಾ, ಅದನ್ನು ತಯಾರಿಸುವ ರೀತಿ ಹಾಗೂ ಅದಕ್ಕೆ ಬಳಕೆ ಮಾಡುವ ಭಿನ್ನ ರೀತಿಯ ಹಚ್ಚೆಯ ಸೊಪ್ಪುಗಳ ಬಗ್ಗೆ ತಿಳಿಸಿದ್ದಾರೆ. ವಿಭಿನ್ನ ರೀತಿಯ ಆಕಾರದಲ್ಲಿ ಹಚ್ಚೆಗಳನ್ನು ಹಾಕಿಸಿಕೊಳ್ಳುವ ವೈಷ್ಣವ ಮತ್ತು ಶೈವರು ಭಿನ್ನ-ಭಿನ್ನ ಹಚ್ಚೆ ಹಾಕಿಕೊಳ್ಳುವ ವಿಧಾನಗಳ ಬಗ್ಗೆ ಈ ಲೇಖನದಲ್ಲಿ ತಿಳಿಯಬಹುದು. ಮನೆಯನ್ನು ಕಟ್ಟುವಾಗ ಒಳಗಡೆ ಬಳಸುವ ಮರಮುಟ್ಟುಗಳಲ್ಲಿ ಕುಸುರಿ ಕೆಲಸ ತುಂಬಿರುತ್ತದೆ. ಬಾಗಿಲು, ಹೊಸ್ತಿಲುಗಳ ಮೇಲೆ ನಾನಾ ರೀತಿಯ ಅಲಂಕಾರಗಳು ಹೇರಳವಾಗಿರುತ್ತದೆ. ಕಾಡು ಪ್ರದೇಶ ಹೇರಳವಾಗಿರುವುದರಿಂದ ಬಿದಿರಿನ ಬುಟ್ಟಿಗೆಗಳು, ಕುರ್ಚಿಗಳು, ಮಂಕರಿಗಳು, ಸಿಬ್ಬಲು, ಮುಂತಾದ ರೀತಿಯ ಬಿದಿರಿನ ಕುಶಲ ಕಲೆಗಳನ್ನು ಕಾಣಬಹುದು. ಅರಸೀಕೆರೆ, ಚಿಕ್ಕನಾಯಕನಹಳ್ಳಿ, ತಿಪಟೂರು ಈ ಕಡೆ ಈಚಲು, ತೆಂಗು ಹೆಚ್ಚಾಗಿ ಬೆಳೆಯುವುದರಿಂದ ಇವುಗಳಿಂದ ಚಾಪೆ, ತಡಿಕೆ ಮಾಡುವ ಕುಶಲತೆ ಹೆಚ್ಚಾಗಿದ್ದು ಅದನ್ನು ಗುರುತಿಸಿದ್ದಾರೆ.

ಹೀಗೆ ಹಲವು ಪ್ರದೇಶಗಳಲ್ಲಿನ ಕರ ಕುಶಲ ಕಲೆಗಳ ಬಗ್ಗೆ ಅಧ್ಯಯನ ಮಾಡಿ ಆ ಕುಶಲ ಕಲೆಗಳಿಂದ ಒಂದು ಸಂಸ್ಕೃತಿಯನ್ನು ಅರಿಯುವ ಹಾಗೂ ಅದನ್ನು ಗುರುತಿಸುವ ಕೆಲಸವನ್ನು ರಂಗಾರೆಡ್ಡಿಯವರು ಮಾಡಿದ್ದಾರೆ. ಜಾನಪದ ಕ್ಷೇತ್ರದಲ್ಲಿ ಇವರ ಅಧ್ಯಯನ ಅಪಾರವಾದುದು ಎಂಬುದನ್ನು ಈ ಬಂಡಾಯ ಜಾನಪದ ಕೃತಿಯಿಂದಲೂ ನಾವು ಅರಿಯಬಹುದು. ಅವರ ಕೊಡುಗೆ ಮೆಚ್ಚುವಂತದ್ದಾಗಿದೆ. ಇಷ್ಟೇ ಅಲ್ಲದೇ ಹಳ್ಳಿಯ ಮನೆಗಳ ನಿರ್ಮಾಣ ಎಂಬ ಲೇಖನದಲ್ಲಿ ಜನಪದರ ಸಂಸ್ಕೃತಿ, ವೃತ್ತಿಜೀವನ ಶೈಲಿ ಹಾಗೂ ಕಲೆಗಳನ್ನು ಮುಂತಾದ ವಿಚಾರಗಳನ್ನು ಅವರ ಬರಹಗಳಲ್ಲಿ ಕಾಣಬಹುದು.

೨.೩ ಗಂಧದ ಮಡುವ ಕಲಕೂತ

ಕನ್ನಡ ಜಾನಪದ ಲೋಕದ ಅನೇಕ ಮಗ್ಗಲುಗಳನ್ನು 'ಗಂಧದ ಮಡುವ ಕಲಕೂತ' ಕೃತಿಯಲ್ಲಿ ಅಧ್ಯಯನಕ್ಕೆ ಒಳಪಡಿಸಿದ್ದಾರೆ ಇದರಿಂದ ಓದುಗರಿಗೆ ಜಾನಪದವನ್ನು ಕುರಿತಂತೆ ಒಳ್ಳೆಯ ಅರ್ಥ ವಿಸ್ತಾರಗಳು ದೊರಕಿವೆ ಎಂದರೆ ತಪ್ಪಾಗಲಾರದು ಏಕೆಂದರೆ ರಂಗಾರೆಡ್ಡಿಯವರು ಸಾಹಿತ್ಯವನ್ನು ಜಾನಪದ ಸಾಹಿತ್ಯವನ್ನು ಕ್ರಮಬದ್ಧವಾಗಿ ಆಸಕ್ತಿಯಿಂದ ಅಭ್ಯಾಸ ಮಾಡಿಕೊಂಡು ಬಂದವರು. ರಂಗಾರೆಡ್ಡಿಯವರ ಸಾಹಿತ್ಯದಲ್ಲಿ ನಾವು ಒಂದು ಹೊಸತನ ಸೃಜನಶೀಲತೆಯನ್ನು ಗುರುತಿಸಬಹುದು. ಜಾನಪದದ ಆಧುನಿಕ ಸ್ವರೂಪಗಳ ಬಗ್ಗೆ ಕುತೂಹಲ ಹೊಂದಿರುವ ಕೋಡಿರಾಂಪುರ ರಂಗಾರೆಡ್ಡಿಯವರು ನಿರಂತರತೆಯಲ್ಲಿ ಬದಲಾವಣೆ, ಬದಲಾವಣೆಯಲ್ಲಿ ಹೊಸಹುಟ್ಟು ಎಂಬುದರಲ್ಲಿ ನಂಬಿಕೆಯಿಟ್ಟು ಜಾನಪದವೆಂಬುದು ಕೇವಲ ಹಾಡು, ಕುಣಿತವಲ್ಲ ಅದು ಜೀವನದ ಸಮಸ್ತ ಅಂಶವನ್ನು ವ್ಯಾಪಿಸಿಕೊಂಡಿರುವಂತಹದ್ದು ಎಂಬ ಲೇಖಕರ ಅಭಿಪ್ರಾಯ ಉತ್ತಮವಾದುದು 'ಗಂಧದ ಮಡುವ ಕಲಕೂತ' ಎಂಬ ಕೃತಿಯಲ್ಲಿ ಹತ್ತು ಹದಿನೈದಕ್ಕೂ ಹೆಚ್ಚು ಲೇಖನಗಳಿವೆ. ಅವುಗಳಲ್ಲಿ ಜಾಗತೀಕರಣ ಮತ್ತು ಸಂಸ್ಕೃತಿ, ಜಾನಪದ ಮತ್ತು ಕಲೆಗಳು, ರಂಗರೂಪದ ಜಾನಪದ ಕಲೆಗಳು, ಜೈನಕಥೆಗಳ ಮೇಲೆ ಜಾನಪದ ಪ್ರಭಾವ, ಜನಪದ ದೈವಸತಿ ಹೀಗೆ ಇನ್ನು ಹಲವು ಲೇಖನಗಳಿವೆ.

ಜಾನಪದವನ್ನು ತಮ್ಮ ಜೀವನವನ್ನಾಗಿಸಿಕೊಂಡಿರುವ ರಂಗಾರೆಡ್ಡಿಯವರು ಜಾನಪದ ಕ್ಷೇತ್ರದಲ್ಲಿ ಕೈಗೊಂಡಿರುವ ಕಾರ್ಯ ಅಷ್ಟಿಷ್ಟಲ್ಲ. ಈ ಲೇಖನಗಳನ್ನು ನೋಡಿದಾಗ ಅವರ ಶ್ರಮ ನಮಗೆ ಅರಿವಾಗುತ್ತದೆ. 'ಜಾನಪದ ಕಲೆಗಳು'ಎಂಬ ಲೇಖನದಲ್ಲಿ ಜಾನಪದದಿಂದ ಮಾಡಿದ ಪ್ರದರ್ಶಕ ಮತ್ತು ಪ್ರದರ್ಶಕವಲ್ಲದ ಕುಶಲಕಲೆಗಳ ರಾಶಿಯೇ ಜನಪದದಲ್ಲಿದೆ ಎಂಬುದನ್ನು ತಿಳಿಸಿದ್ದಾರೆ. ಮನುಷ್ಯ ಭೂಮಿಯ ಮೇಲೆ ಜೀವಿಸಲು ಪ್ರಾರಂಭಮಾಡಿದಾಗಿನಿಂದ ಹೇಗೆ ಒಂದೊಂದಾಗಿ ಕಲೆಗಳು ಒಂದೊಂದು ರೀತಿಯಾಗಿ ಹುಟ್ಟಿಕೊಂಡಿವೆ ಎಂಬುದನ್ನು ತಿಳಿಸಿಕೊಟ್ಟಿದ್ದಾರೆ. ಹೀಗೆ ಜಾನಪದವು ಜನಪದ ಸಾಂಘಿಕ ಜೀವನದಿಂದ ಆರಂಭವಾಗಿ ಅದರಿಂದ ಹಲವಾರು ಕಲೆಗಳು ಹುಟ್ಟಿ ಅವೆಲ್ಲಾ ಶಿಷ್ಟ ಜನಪದದ ಕಲೆಗಳಾಗಿವೆ. ಅಂದರೆ ಜಾನಪದ ಮತ್ತು ಕಲೆಗಳ ಒಂದು ಜನಾಂಗದ ಸಂಸ್ಕೃತಿ ನಾಗರೀಕತೆಗಳ ವಿಕಾಸ ಇತಿಹಾಸವನ್ನು ತಿಳಿಸುತ್ತದೆ. ರಂಗಾರೆಡ್ಡಿಯವರು ತಮ್ಮ ಈ ಕೃತಿಯನ್ನು

ಜಾನಪದ ಸಂಸ್ಕೃತಿ, ಜಾನಪದ ಕಲೆಗಳು, ಸ್ಥಳನಾಮಗಳು, ರಂಗಕಲೆಗಳು, ಜಾನಪದ ಧರ್ಮಗಳು, ಪ್ರಾಣಿಪರಿಸರ, ಮುಂತಾದ ವಿಷಯಗಳನ್ನು ನೆನೆಯುತ್ತಾ ಅಧ್ಯಯನಕ್ಕೆ ಒಳಪಡಿಸಿ ಜನಪದ ಸಂಗತಿಗಳನ್ನು ಬಹಳ ಅಚ್ಚುಕಟ್ಟಾಗಿ ವಿಶ್ಲೇಷಿಸಿದ್ದಾರೆ. ವ್ಯಾಪಕ ಅಧ್ಯಯನ ಕ್ಷೇತ್ರಕಾರ್ಯದ ಅನುಭವವಿರುವ ಇವರು ಜಾನಪದದ ಬಗ್ಗೆ ಈ ಕೃತಿಯ ಮೂಲಕ ಓದುಗರಲ್ಲಿ ವಿಶೇಷ ಆಸಕ್ತಿ ಮೂಡುವಂತೆ ಮಾಡಿದ್ದಾರೆ.

೨.೪ ನೆಲದೊಡಲ ಪ್ರೀತಿ

ಈ ಕೃತಿಯಲ್ಲಿ ಹೊಸದನ್ನು ಕಾಣುವ ಒಂದು ಹೊಸ ಆಶಯ, ಉತ್ತಮ ಬೆಳವಣಿಗೆ ತುಡಿತ, ಹಳ್ಳಿಯ ಬದುಕಿನೊಳಗೆ ಅಡಗಿರುವ ಜನಪದರ ಆ ಸೃಜನಶೀಲ ಗುಣವನ್ನು ಗ್ರಹಿಸುವ ಹಂಬಲ, ಮನಸ್ಸು ಅವರ ಈ ಕೃತಿಯ ಲೇಖನಗಳಲ್ಲಿ ಅಡಗಿದೆ. ಈ ಕೃತಿಯಲ್ಲಿ ಹದಿನಾರು ಲೇಖನಗಳಿದ್ದು ಒಂದೊಂದು ಲೇಖನವೂ ಹೊಸ ವಿಚಾರಗಳನ್ನು ತಿಳಿಸುತ್ತದೆ. ಅದರಲ್ಲಿಯ 'ಜನಪದ ಪುರಾಣಗಳು' ಎಂಬ ಲೇಖನದಲ್ಲಿ ಸಮಾಜದಲ್ಲಿ ಆಗುವ ಬದಲಾವಣೆಯನ್ನು ಕೇವಲ ಭೌತಿಕ ವಿಷಯಗಳಿಗೆ ಮಾತ್ರ ಸಂಬಂಧಿಸಿರದೆ ಭೌದ್ಧಿಕ ಆಲೋಚನೆ ಹಾಗೂ ಮಾನಸಿಕ ವಿಕಾಸಕ್ಕೂ ಸಂಬಂಧಿಸಿರುತ್ತದೆ. ಹೊಸ ಹಳೆಯ ವಿಚಾರಗಳ ನಡುವೆ ಆಗುವ ಸಮನ್ವಯತೆಯನ್ನು 'ಚಲನಶೀಲತೆ' ಎಂದು ಕರೆದಿದ್ದಾರೆ. ಪುರಾಣಗಳಲ್ಲಿ ಅಭಿವ್ಯಕ್ತಿಗೊಳ್ಳುವ ನಾಯಕ, ದೇವರು, ಶಿಕ್ಷೆ, ರಾಜತ್ವ, ಆಳುವ ವರ್ಗ ಇವರುಗಳ ಹೆಸರಿನಿಂದ ಸ್ತ್ರೀಯರು, ಬಡವರು, ಕೀಳುಜಾತಿಯವರು ಇನ್ನೂ ಅನೇಕರು ಸಮಾಜದಲ್ಲಿ ಶೋಷಣೆಗೆ ಒಳಗಾಗಿ ಹಲವಾರು ಸಮಸ್ಯೆಗಳಿಗೆ ಕಾರಣವಾಗಿದ್ದು ಆದ್ದರಿಂದ ಸಮಾಜದ ಹಿತಕ್ಕಾಗಿ ಮತ್ತೊಂದು ನೆಲೆಯು ಕೂಡ ಪುರಾಣಗಳಲ್ಲಿ ಅಡಗಿದೆ ಎಂಬುದನ್ನು ಈ ಲೇಖನದಿಂದ ತಿಳಿಯಬಹುದಾಗಿದೆ. ಜನಪದ ಸಾಹಿತ್ಯ ಎಲ್ಲಿಂದ? ಹೇಗೆ? ಪ್ರಾರಂಭಗೊಂಡಿತು ಅದಕ್ಕೆ ಪ್ರೇರಣೆ ಯಾವುದು? ಈಗಿನ ಜನಪದ ಸಾಹಿತ್ಯದ ಸ್ಥಿತಿಗತಿಗಳು ಎಲ್ಲವನ್ನು ಕುರಿತ ಒಂದು ಚಿತ್ರಣ ಈ ಲೇಖನದಲ್ಲಿದೆ.

"ಜಾನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಆದ ಹೋರಾಟವನ್ನು 'ಸಂಸ್ಕೃತಿ ಭಾರತ' 'ಸಮಗ್ರ ಕರ್ನಾಟಕ' ಎಂದು ಡಾ.ಹಿ.ಜಿ ರಾಮಚಂದ್ರೇಗೌಡರು ಹೆಸರಿಸುತ್ತಾರೆ"[೯]. ಪುರಾಣಗಳು ಆಯಾ ದೇಶ ಭಾಷೆಯ ಸಾಂಸ್ಕೃತಿಕ ಸಂಘಟನೆಗೆ ಪೂರಕವಾಗಿ ಹಾಗೂ ಪ್ರೇರಣಶಕ್ತಿಯಾಗಿ ಶಕ್ತಿ ತುಂಬುತ್ತವೆ. ಆದ್ದರಿಂದ ಜನಪದ ಸಾಹಿತ್ಯ ಸಂಗ್ರಹಣೆಗೊಂಡು ಅದನ್ನು ಬಳಸಿಕೊಂಡು ಹೊಸ ಕಾವ್ಯ ಕಥೆಗಳು ಕಟ್ಟಿ ಸ್ಥಳಿಯ ಪುರುಷರು, ಇತಿಹಾಸ ಪುರುಷರನ್ನು ಇನ್ನಷ್ಟು ವೈಭವೀಕರಿಸದಂತಾಯಿತು. ಆಗ ವ್ಯಕ್ತಿ ವಾಸ್ತವಿಕ ನೆಲೆಯಿಂದ ಐತಿಹ್ಯದ ನೆಲೆಗೆ ಸ್ಥಳಾಂತರಗೊಳ್ಳುತ್ತಾನೆ.

ಅಕ್ಷರ ಬಲ್ಲವರು ಒಂದು ರೀತಿಯ ಕಥೆಗಳನ್ನು ಕಟ್ಟಿದರೆ ಅನಕ್ಷರಸ್ಥರು ಇನ್ನೊಂದು ರೀತಿ ಕಥೆ ಕಟ್ಟುತ್ತಾರೆ. ಈ ಎರಡೂ ನೆಲೆಗಳಲ್ಲಿ ಪುರಾಣಗಳು ಭಿನ್ನವಾಗಿ ಸೃಷ್ಟಿಯಾಗುತ್ತವೆ. ಮಲೆಮದೇಶ್ವೇರ ಕಥೆ, ಮಂಟೇಸ್ವಾಮಿ ಕಥೆ, ಮೈಲಾರಲಿಂಗನ ಕಥೆ ಮುಂತಾದ ಕಥೆ ಪುರಾಣಗಳಲ್ಲಿ ಪ್ರತಿ ಸಂಸ್ಕೃತಿಯ ನೆಲೆಯಲ್ಲೇ ಹುಟ್ಟಿ ಶಿಷ್ಟ ಪುರಾಣಗಳಿಗೆ ಆಳುವ ವರ್ಗದ ಮನೋಭಾವಗಳಿಗೆ ಪ್ರತಿಭಟನೆ ತೋರಿವೆ. ಅಂದರೆ ಪುರಾಣಗಳು ಸಹ ಶೋಷಣೆಯನ್ನು ಪ್ರತಿಭಟಿಸುತ್ತವೆ. ಹಾಗಾಗಿ ಸಂಸ್ಕೃತಿಯ ಬಹುಮುಖತೆಗೆ ಆ ಮೂಲಕ ಪ್ರಜಾತಾಂತ್ರಿಕ ಮೌಲ್ಯ ವ್ಯವಸ್ಥೆ ದನಿಕೊಟ್ಟಿದೆ. ಅಲ್ಲದೆ ದುರ್ಬಲರು, ಬಡವರು, ಅಂಗವಿಕಲರು, ಸ್ತ್ರೀಯರು, ಬಹಿಷ್ಕೃತರು, ತಿರಸ್ಕೃತರಾದ ವ್ಯಕ್ತಿಗಳ ಹಿತವನ್ನು ಬಯಸುವ ಸಮಾಜವಾದಿ ನೆಲೆಯೊಂದು ಈ ಪುರಾಣಗಳಲ್ಲಿ ಅಂತರ್ಗತವಾಗಿ ಹರಿಯುತ್ತಿದೆ ಎಂಬ ಅಂಶವನ್ನು ಈ ಲೇಖನದಲ್ಲಿ ಕಾಣಬಹುದು.

ಅದೇ ರೀತಿ ಮುಂದುವರೆದು 'ಜನಪದ ಸಾಹಿತ್ಯದಲ್ಲಿ ಮಾನವೀಯ ಶಿಕ್ಷಣ' ಎಂಬ ಲೇಖನದಲ್ಲಿ ಆಧುನಿಕ ಶಿಕ್ಷಣ ಎಷ್ಟೇ ಉನ್ನತ ಪ್ರಭಾವಯುತವಾಗಿದ್ದರೂ ಜಾನಪದ ಸಾಹಿತ್ಯದಲ್ಲಿ ಸಿಗುವಂತಹ ಮೌಲ್ಯಯುತವಾದ ಕೆಲವೊಂದು ನೀತಿಗಳನ್ನು ಪಡೆಯಲು ಸಾಧ್ಯವಾಗುವುದೇ ಇಲ್ಲ ಎಂಬ ವಿಚಾರ ಈ ಲೇಖನವನ್ನು ಓದಿದಾಗ ನನಗೆ ಅನ್ನಿಸಿತು. ಭ್ರಷ್ಟಾಚಾರ, ಅಜ್ಞಾನ, ಅನಕ್ಷರತೆ, ಹಂಚಿತಿನ್ನುವಿಕೆ ಮುಂತಾದ ಅಂಶಗಳನ್ನು ತಿಳಿಸಿ ಹೇಳುವ ಜನಪದ ಪದ್ಯಗಳ ಉದಾಹರಣೆಯನ್ನು ಇಲ್ಲಿ ಕಾಣಬಹುದು. ಬಡವ ಶ್ರೀಮಂತ ಎನ್ನುವ ಬೇಧ-ಭಾವ ಕುರಿತು ಈ ಪದ್ಯದಲ್ಲಿ

"ಬಂಗಾರ ಬಳೆಯಿಟ್ಟು ಬೈಬ್ಯಾಡ ಬಡವರನ

ಬಂಗಾರ ನಿನಗೆ ಸ್ಥಿರವಲ್ಲ! ಮಧ್ದಿನದ

ಹೊತ್ತು ಹೊರಳೋದು ತಡವಲ್ಲ"[೧೦]

ಈ ಜನಪದ ಪದ್ಯ ನಮಗೆ ಚಿರಪರಿಚಿತವಾದುದು. ಇದು ಶ್ರೀಮಂತಿಕೆ ಅನ್ನುವುದು ಶಾಶ್ವತವಲ್ಲ ಎಂಬುದನ್ನು ತಿಳಿಸುತ್ತದೆ. ಅದು ಮಧ್ಯಾಹ್ನದ ಹೊತ್ತು ಕಳೆದ ಹಾಗೆ ಕಳೆದು ಹೋಗುತ್ತದೆ ಜೊತೆಗೆ ಶ್ರೀಮಂತಿಕೆ ಇದ್ದಾಗ ಜನರು ದುಡಿಯದೆ ಸೋಮಾರಿಗಳಾಗಿ ಹಲವಾರು ರೋಗಗಳಿಗೆ ತುತ್ತಾಗುತ್ತಾರೆ. ಅಲ್ಲದೆ ಅನಾವಶ್ಯಕ ಹಣದ ಸಂಗ್ರಹಣೆಯಲ್ಲಿ ತೊಡಗುತ್ತಾರೆ. ಹೆಚ್ಚುವರಿ ಹಣ (ಸರ್‌ಪ್ಲಸ್‌ಮನಿ) ಸಂಗ್ರಹಣ ನೀತಿಯನ್ನು ವಿರೋಧಿಸುತ್ತದೆ ಎಂಬುದನ್ನು ಈ ಜನಪದ ಪದ್ಯ ಯಾವ ಶಿಕ್ಷಣವೂ ಇಲ್ಲದೆ ತಿಳಿಸಿಕೊಡುತ್ತದೆ ಎಂಬುದನ್ನು ರಂಗಾರೆಡ್ಡಿಯವರು ಈ ಲೇಖನದಲ್ಲಿ ಬಹಳ ಉತ್ತಮವಾಗಿ ತಿಳಿಸಿದ್ದಾರೆ. ಆಧುನಿಕ ಅಕ್ಷರಸ್ಥ ಸಮಾಜವೇ ಹೆಣ್ಣುಭ್ರೂಣ ಹತ್ಯೆಗೆ ಮುಂದಾಗಿದೆ. ಆದರೆ ಜನಪದ ಸಾಹಿತ್ಯ ಹೆಣ್ಣು ಎಷ್ಟು ನಿಸ್ವಾರ್ಥಿ, ಸ್ವಾಭಿಮಾನಿಯಾಗಿ, ಹೃದಯ ವೈಶಾಲಿ, ಉದಾರವಾದಿ ಎಂಬ ಎಲ್ಲಾ ಅಂಶಗಳನ್ನು ಜನಪದ ಸಾಹಿತ್ಯದಿಂದ ತಿಳಿಯಲಾಗುವುದು. ಹಾಗೆಯೇ ಹಂಚಿ ತಿನ್ನುವುದರ ಮಹತ್ವವನ್ನು ತಿಳಿಸಿಕೊಡುವ ಜನಪದ ಗಾದೆಯನ್ನು ಕಾಣಬಹುದು.

"ಹಣ್ಣನ್ನು ಹಂಚಿತಿನ್ನು ಹೂವನ್ನು ಹಂಚಿಮುಡಿ

ತಿರಕಂಡ್ ತಿಂದ್ರೂ ಕರ್‌ಕೊಂಡ್ ಉಣ್ಣು"[೧೧]

ಆಧುನಿಕ ಸಮಾಜದ ಜೀವನ ಶೈಲಿಯಲ್ಲಿ ಅವಿಭಕ್ತ ಕುಟುಂಬ, ಒಬ್ಬರಿಗೊಬ್ಬರು ಸಹಾಯ ಮಾಡುವಿಕೆ, ಕೂಡಿ ಬಾಳುವಿಕೆ, ಹಂಚಿ ತಿನ್ನುವಿಕೆ ಇವೆಲ್ಲವೂ ಕಣ್ಮರೆಯಾಗಿದೆ. ಇವೆಲ್ಲದರ ಮಹತ್ವವನ್ನು ಈ ಗಾದೆ ಬಹಳ ಉತ್ತಮವಾಗಿ ಬಹಳ ಸರಳವಾಗಿ ತಿಳಿಸುತ್ತದೆ. ಅಲ್ಲದೆ ಈ ಮಾನವೀಯ ಗುಣ ಪ್ರತಿಯೊಬ್ಬ ಮನುಷ್ಯನಲ್ಲಿ ಮುಖ್ಯವಾಗಿ ಇರಬೇಕು. ಇದನ್ನು ಆಧುನಿಕ ಶಿಕ್ಷಣದಿಂದಲೂ ಪಡೆಯಲು ಸಾಧ್ಯವಿಲ್ಲ. ಇಂತಹುದನ್ನು ಜನಪದ ಸಾಹಿತ್ಯ ತಿಳಿಸುತ್ತದೆ ಎಂದು ರಂಗಾರೆಡ್ಡಿಯವರು ಹೇಳಿದ್ದಾರೆ.

ಇಂತಹ ಹಲವಾರು ಜನಪದ ಸಾಹಿತ್ಯದ ಕಥೆ, ಒಗಟು, ಗಾದೆ, ಪದ್ಯಗಳನ್ನು ಕಾಣಬಹುದು. ಜನಪದ ಸಾಹಿತ್ಯಕ್ಕೆ ಎಷ್ಟು ಮಹತ್ವವಿದೆಯೆಂದರೆ ಮುತ್ತು, ರತ್ನ, ಸಂಪತ್ತು, ಕೋಟೆ, ವೈಭವ ಯಾವುದೂ ಬೇಡ ಜನಪದ ಹಾಡಿದ್ದರೆ ಸಾಕು ಎಂದಿದ್ದಾರೆ. ಜನಪದ ಶಿಕ್ಷಣದಿಂದ ಇವೆಲ್ಲವೂ ಸಾಧ್ಯವಿದೆಯೆಂದು ತಿಳಿಸಿದ್ದಾರೆ. ಅದಲ್ಲದೆ 'ಬದುಕು-ಬದುಕಲು ಬಿಡು' ಎಂಬ ಉತ್ತಮ ಅಂಶವನ್ನು ಓದುಗರಿಗೆ ತಿಳಿಸಿಕೊಡುವ ಮೂಲಕ ರಂಗಾರೆಡ್ಡಿಯವರು ತಮ್ಮ ಲೇಖನದಲ್ಲಿ ಜನಪದ ಸಾಹಿತ್ಯದಿಂದ ಮಾನವೀಯ ಶಿಕ್ಷಣ ಸಾಧ್ಯ ಎಂಬುದನ್ನು ಸಾಬೀತು ಪಡಿಸಿದ್ದಾರೆ.

ಈ ರೀತಿಯಾದ ಮಹತ್ವವನ್ನು, ಮಾನವೀಯ ಮೌಲ್ಯಗಳನ್ನು ಜನಪದ ಸಾಹಿತ್ಯ ಒಳಗೊಂಡಿದೆ. ಆದರೆ ಆಧುನಿಕ ಶಿಕ್ಷಣದಲ್ಲಿ ಇವೆಲ್ಲವೂ ಮರೆಯಾಗುತ್ತಿದೆ. ಒಂದು ವೇಳೆ ಆಧುನಿಕ ಶಿಕ್ಷಣದಲ್ಲಿ ಇಂತಹ ಜನಪದ ಸಾಹಿತ್ಯವನ್ನು ಅಳವಡಿಕೆ ಮಾಡಿದರೆ ಎಲ್ಲಾ ಮಕ್ಕಳು ಮಾನವೀಯ ಮೌಲ್ಯಗಳಿಂದ ಕೂಡಿದ ಒಂದು ಉತ್ತಮ ಜೀವನ ಶೈಲಿಗೆ ಹೊಂದಿಕೊಳ್ಳುತ್ತಾರೆ. ಜನಪದ ಸಾಹಿತ್ಯದ ಉದ್ದೇಶವೇನೆಂದರೆ ಮಾನವೀಯ ಮೌಲ್ಯಗಳಿಂದ ಕೂಡಿದ ಶಿಕ್ಷಣ ಆಧುನಿಕ ಶಿಕ್ಷಣದ ಗುರಿಯಾಗಬೇಕು ಎಂಬುದನ್ನು ಈ ಲೇಖನದಲ್ಲಿ ಉಲ್ಲೇಖಿಸಿರುವುದು ಬಹಳ ಸಮಂಜಸವಾಗಿದೆ.

ಕಥಾಕೀರ್ತನೆ ಎಂಬ ಲೇಖನದಲ್ಲಿ ಕರ್ನಾಟಕದಲ್ಲಿ ಶ್ರೀ ವೈಷ್ಣವ ಧರ್ಮ ಪ್ರಚಾರಕ್ಕೆ ಬಂದ ನಂತರ ರೂಪುಗೊಂಡ ಹರಿಕಥೆ, ಶಿವಕಥೆ ಎಂದು ಕರೆಯಲ್ಪಡುವ ಒಂದು ಜನಪದ ಕಲೆಯನ್ನು 'ಕಥಾಕೀರ್ತನೆ' ಎಂದು ಕರೆಯುವ ಮೂಲಕ ಹೊಸ ರೀತಿಯಲ್ಲಿ ಪರಿಚಯಿಸಿ ಅದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು 'ನೆಲದೊಡಲ ಪ್ರೀತಿ' ಎಂಬ ಕೃತಿಯಲ್ಲಿ 'ಕಥನ ಕೀರ್ತನಾ ಕಲೆ' ಎಂಬ ಲೇಖನದಲ್ಲಿ ಮಂಡಿಸಿದ್ದಾರೆ. ಕಡಿಮೆ ವೆಚ್ಚದಲ್ಲಿ ಕೈಗೊಳ್ಳಬಹುದಾದ ಕಥೆ, ಹಾಡು, ಕೀರ್ತನೆಯ ಮೂಲಕ ಜನರನ್ನು ಒಂದೆಡೆ ಸೇರಿಸಿ, ಜನರಿಗೆ ಮನರಂಜನೆಯನ್ನು ನೀಡುವುದರ ಜೊತೆಗೆ ಕಥೆ, ಉಪಕಥೆಗಳ ಮೂಲಕ ಜನರ ಜ್ಞಾನದ ಅರಿವನ್ನು ಹೆಚ್ಚಿಸುವ ಮೂಲಕ ಕಥನ ಕೀರ್ತನೆಯನ್ನು ಮತ್ತು ಅದರ ಮಹತ್ವವನ್ನು ತಿಳಿಸಿಕೊಟ್ಟು ಅದರ ಬಗೆಗಿನ ಉತ್ತಮ ಮಾಹಿತಿಯನ್ನು ಓದುಗರಿಗೆ ತಲುಪಿಸುವಂತಹ ಕೆಲಸವನ್ನು ಮಾಡಿದ್ದಾರೆ.

'ದೊಂಬಿದಾಸರು' ಎಂಬ ಲೇಖನದಲ್ಲಿ ದೊಂಬಿದಾಸರು ಆಂಧ್ರ ಮೂಲದವರಾಗಿದ್ದು, ಹಾಡುವುದನ್ನೇ ವೃತ್ತಿ ಜೀವನವನ್ನಾಗಿಸಿಕೊಂಡಿದ್ದಾರೆ. ಅವರಿಗೆ ಹೇಗೆ ದೊಂಬಿ ಮತ್ತು ದೊಂಗದಾಸರು ಎಂಬ ಹೆಸರುಗಳು ಬಂದವು, ದೊಂಬಿದಾಸರ ಆಚಾರ-ವಿಚಾರಗಳಾದ ಮದುವೆ ಮತ್ತು ಮರಣ ಮುಂತಾವುಗಳ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ. ಹಾಡುಗಾರಿಕೆಯನ್ನು ವೃತ್ತಿಯನ್ನಾಗಿ ಮಾಡಿಕೊಂಡು ಒಂದು ಸ್ಥಿರ ನೆಲೆಯಿಲ್ಲದೆ ಊರು-ಊರು ತಿರುಗಿ ಕತೆಕಟ್ಟಿ ಹಾಡಿದಾಗ ಹಾಡುಕೇಳಿ ಅವರಿವರು ಕೊಡುವ ದವಸಧಾನ್ಯ, ಬಟ್ಟೆ ಬರೆಗಳಿಂದ ಜೀವನ ನಡೆಸುವ ಈ ಜನಾಂಗದ ಸಂಸ್ಕೃತಿಯನ್ನು, ಜೀವನ ಶೈಲಿಯನ್ನು ಸೆರೆಯಿಡಿಯುವ ಕೆಲಸವನ್ನು ರಂಗಾರೆಡ್ಡಿಯವರು ಈ ಲೇಖನದಲ್ಲಿ ಮಾಡಿದ್ದಾರೆ.

ಮತ್ತೊಂದು ಲೇಖನವಾದ 'ಕನ್ನಡ-ತಮಿಳು ಜನಪದ ಕಲೆಗಳ ಸಂಬಂಧಾಂತರಗಳು' ಎಂಬುದರಲ್ಲಿ ಕನ್ನಡ-ತಮಿಳು ಜಾನಪದ ಸಂಬಂಧವನ್ನು ವಿಶ್ಲೇಷಿಸುವ ಈ ಲೇಖನ ಹೊಸತನದಿಂದ ಕೂಡಿದೆ. ಕನ್ನಡ ಮತ್ತು ತಮಿಳು ಭಾಷೆಯು ಸಂಧಿಸುವ ಗಡಿಭಾಗಗಳಲ್ಲಿ ಕಂಡುಬರುವ ಪ್ರಧಾನ ಕಲೆಯ ಬಗ್ಗೆ ಹೇಳಿದ್ದಾರೆ. ಅದರಲ್ಲಿಯೂ ಕರಗ ಉತ್ಸವದ ಮೂಲಕ ಬೆಂಗಳೂರು ಗ್ರಾಮಾಂತರ ಜಿಲ್ಲೆ, ತಾಲ್ಲೂಕು, ಕೇಂದ್ರಗಳು ಹಾಗೂ ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರಗಳಲ್ಲಿ ನಡೆಯುವ ಕರಗ ಉತ್ಸವದ ವಿಭಿನ್ನತೆಗಳನ್ನು ತಿಳಿಸಿದ್ದಾರೆ. ವಿವಿಧ ಆಚರಣೆಗಳಾದ ಕಾವಡಿ, ನವಿಲು ಕಾವಡಿ, ಕೀಲುಕುದುರೆಕುಣಿತ, ಹಲವಾರು ವಿಚಾರಗಳ ಬಗ್ಗೆ ಒಂದು ಜನಪದ ಕಲೆಯನ್ನು ಬಹಳ ವಿಸ್ತಾರವಾಗಿ ಹೇಳಿದ್ದಾರೆ. ಅಲ್ಲದೆ ಕೇವಲ ತಮಿಳು ನಾಡಿನಲ್ಲಿರುವ ಹಲವು ಕಲೆಗಳಾದ ಕೃಷ್ಣನ್ ಆಟಂ, ಕುರುಮಿ ನೃತ್ಯ, ಕುರುವನ್‌ಕುರುತ್ತಿ, ಕಾಸೆ, ಕೊತ್ತು, ಪಾವೈಕೊತ್ತು, ಕಲೆಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಿದ್ದಾರೆ. ಕನ್ನಡದಲ್ಲಿರುವಂತಹ ಸೂತ್ರದಗೊಂಬೆಯಾಟ, ತೊಗಲುಗೊಂಬೆಯಾಟ ಮುಂತಾದವುಗಳ ಬಗ್ಗೆ ತುಂಬಾ ವಿಸ್ತಾರವಾಗಿ ಜಾನಪದ ಕ್ಷೇತ್ರದಲ್ಲಿ ಹೆಚ್ಚಾಗಿ ಆಸಕ್ತಿಹೊಂದಿರುವ ರಂಗಾರೆಡ್ಡಿಯವರು ಹೆಚ್ಚಿನ ಶ್ರಮವಹಿಸಿ ಈ ಲೇಖನದಲ್ಲಿ ತಮಿಳು-ಕನ್ನಡದ ಜನಪದ ಕಲೆಗಳ ಬಗ್ಗೆ ಹೆಚ್ಚು ಗಮನಹರಿಸಿದ್ದಾರೆ.

'ನಗರ ಪರಿಸರದಲ್ಲಿ ಜಾನಪದ ಸಾಮೂಹಿಕ ಕ್ರಿಯಾಶೀಲತೆ' ಎಂಬ ಲೇಖನದಲ್ಲಿ ಜಾನಪದ ನಗರ ಮತ್ತು ಹಳ್ಳಿಗಳೆರಡನ್ನು ಒಳಗೊಂಡಿದೆ. ನಗರಗಳಲ್ಲಿರುವ ಸಮಾನ ಅಂಶಗಳನ್ನು

ಹಂಚಿಕೊಂಡ ಗುಂಪುಗಳ ಕ್ರಿಯಾಶೀಲತೆಯನ್ನು ನಗರ ಜಾನಪದ ಎಂದು ಕರೆಯಲಾಗುತ್ತದೆ. ಈ ಪರಿಕಲ್ಪನೆಯ ಹಿನ್ನಲೆಯಲ್ಲಿ ಅಕ್ಷರಸ್ಥರ ಲಿಖಿತರೂಪದಲ್ಲಿ ಮುಂದುವರೆದ ಜನಾಂಗಗಳ, ನಾಗರೀಕತೆಯ ಒಂದು ಸಮೂಹದ ಎಲ್ಲಾ ಚಟುವಟಿಕೆಗಳನ್ನು ಜಾನಪದ ಎಂದು ಗುರುತಿಸಿದ್ದಾರೆ. ಇಲ್ಲಿ ರಂಗಾರೆಡ್ಡಿಯವರು ಸಾಮುದಾಯಿಕ ಗುಂಪುಗಳ ಕ್ರಿಯಾಚಟುವಟಿಕೆಯನ್ನು ಮಾತ್ರ ತಮ್ಮ ಬರವಣಿಗೆಯಲ್ಲಿ ಬಳಸಿಕೊಂಡಿದ್ದಾರೆ. ನಗರ ಪರಿಸರದಲ್ಲಿ ಈಗಾಗಲೇ ನಮಗೆ ಗೊತ್ತಿರುವಂತ ಹಾಡು, ಕತೆ, ಗಾದೆ, ಒಗಟು ಮುಂತಾದ ಸಿದ್ಧ ಪ್ರಕಾರದ ರೂಪಗಳು ಕಾಣಸಿಗುವುದಿಲ್ಲ."The old familiar genera of folkare particularly the song and tale do not seen abundant in the city....genera folklore has become increasingly displaced by other kind of oral tradition which deserve the attention of collectqr ಎಂದು ಜಾನಪದ ವಿದ್ವಾಂಸ ರಿಚರ್ಡ್ ಎಂ. ಡಾರ್ಸ್‌ನ್ ಹೇಳಿರುವುದೂ ಕೂಡ ಈ ಅರ್ಥದಲ್ಲಿಯೇ. ಆದರೂ ಪರಂಪರಾನುಗತವಾದ ಮಾದರಿಗಳು ನಗರ ಜಾನಪದದಲ್ಲೂ ಸಿಕ್ಕೆ ಸಿಗುತ್ತದೆ. ನಗರಗಳಲ್ಲೂ ಗಾದೆ ಒಗಟುಗಳು ಪ್ರಚಲಿತವಾಗಿದೆ. ಅಲ್ಲಿ ಚೌಕಟ್ಟು ಹಳೆಯದಾಗಿರುತ್ತದೆ. ವಸ್ತು ಹೊಸದಾಗಿರುತ್ತದೆ"

ಇದಕ್ಕೆ ಸಂಬಂಧಿಸಿದಂತೆ ಕೆಲವು ಸಾಲುಗಳನ್ನು ಗಮನಿಸಬಹುದು

"ಲಾಯರ್ ಕೈಗೆ ಸಿಗಾಕ್ಕೊಳ್ಳೋದ್ಕಿಂತ

ಬೆಕ್ಕಿನ ಬಾಯ್ಗೆ ಇಲಿಯಾಗೋದು ಲೇಸು."

"ಊರುಂಟು ಜನರಿಲ್ಲ

ನದಿಯುಂಟು ನೀರಿಲ್ಲ

ರಸ್ತೆಯುಂಟು ವಾಹನವಿಲ್ಲ(ಭೂಪಟ)"[೧೨]

'ಶೌಚಾಲಯ ಗೋಡೆ ಬರಹಗಳು' ಎಂಬ ಲೇಖನದಲ್ಲಿ ಡಾ.ರಂಗಾರೆಡ್ಡಿಯವರು ಗೋಡೆ ಬರಹಗಳಲ್ಲಿ ಅಡಗಿರುವ ಭಾವನೆಗಳು, ಅದಕ್ಕೆ ಕಾರಣಗಳು ಇವೆಲ್ಲವನ್ನು ತಮ್ಮ ಬರವಣಿಗೆಯಲ್ಲಿ ತಂದಿದ್ದಾರೆ ಬರವಣಿಗೆಯಲ್ಲಿ ಭಿನ್ನ ವಿಧಾನಗಳನ್ನು ತಿಳಿಸಿದ್ದಾರೆ. ಇಂತಹ ಬರಹಗಳಲ್ಲಿ ಕಾಲೇಜಿನ

ಮಕ್ಕಳಲ್ಲಿ ಭಾವನೆಗಳನ್ನು ಅದುಮಿಟ್ಟುಕೊಳ್ಳಲಾಗದೆ, ತೃಪ್ತಿಪಡಿಸಿಕೊಳ್ಳಲಾಗದೆ ಅವು ಗೋಡೆಗಳ ಬರಹಗಳಾಗಿ ಹೊರ ಬರುತ್ತದೆ. ಇದಕ್ಕೆ ಕಾರಣ–ಹಳ್ಳಿಗಾಡಿನ ಜನಗಳಿಗೆ ದೊರಕುತ್ತಿರುವ ಸೌಲಭ್ಯಗಳ ಕೊರತೆ, ಶಿಕ್ಷಣದ ಕೊರತೆ, ಹಾಗೂ ಹಣಕಾಸಿನ ತೊಂದರೆಯಾಗಿ ಮಕ್ಕಳನ್ನು ಹಳ್ಳಿಯವನು, ಕೀಳು ಜಾತಿಯವನು ಎಂತಲೋ ಎಂಬ ಭಾವನೆಗಳು ಅವರನ್ನು ಮನಸ್ಸಿನ ತೊಳಲಾಟಕ್ಕೆ ಸಿಕ್ಕಿಸಿ ಬಿಡುತ್ತವೆ. ಹಾಗಾಗಿ ಗೋಡೆ ಬರಹಗಳು ರೂಪುಗೊಳ್ಳುತ್ತವೆ ಎಂಬುದನ್ನು ಅರಿಯಲಾಗುತ್ತದೆ.

ಅನುಭವಿ ಬರಹಗಳು, ಸಲಿಂಗ ಬರಹಗಳು, ಮುಷ್ಟಿಮೈಥುನ, ಸಿನಿಮಾಗೀತೆ, ಅಣಕಗಳು ಮುಂತಾದ ರೀತಿಯ ಬರಹಗಳನ್ನು ಕಾಣಬಹುದು. ಇದರ ವರ್ಗೀಕರಣವನ್ನು ಅಚ್ಚುಕಟ್ಟಾಗಿ ರಂಗಾರೆಡ್ಡಿಯವರು ಮಾಡಿದ್ದಾರೆ. ಗೋಡೆ ಬರಹಗಳಲ್ಲಿ ಪದ್ಯಾತ್ಮಕ–ಗದ್ಯಾತ್ಮಕ ಬರಹಗಳು ಇದ್ದು ಇಲ್ಲಿ ಸ್ವಾರಸ್ಯಕರ ಸಂಗತಿಗಳನ್ನೂ ಕಾಣಬಹುದು. ಎಲ್ಲರೂ ಓದಲೇ ಬೇಕೆಂಬ ಕಾರಣದಿಂದ ಬರೆದಂತಹ ಬರಹಗಳ ಸಾಲಿನ ಕೊನೆಯಲ್ಲಿ ಸರ್ವಜ್ಞ ಎಂದು ಸೇರಿಸಿ ಸರ್ವಜ್ಞನ ತಲೆಗೆ ಕಟ್ಟುವುದು. ಇದು ಆ ವಿದ್ಯಾರ್ಥಿಗಳಲ್ಲಿನ ಹೊಸ–ಹೊಸ ಆಲೋಚನೆ ಚಿಂತನೆಗಳನ್ನು ಗುರುತಿಸಲು ಇಲ್ಲಿ ಸಾಧ್ಯವಾಗಿದೆ. ಈ ಬರಹಗಳಲ್ಲಿ ದೇಶ, ಕಾಮ, ಲಿಂಗ, ಧರ್ಮ ಜಾತಿ, ಕುಲ, ಸಿನೆಮಾ ಮುಂತಾದ ವಿಚಾರಗಳು ಅಡಕವಾಗಿವೆ.

ಒಟ್ಟಾರೆ ಈ ಬರಹಗಳು ಓದಲು ಒಂದು ರೀತಿಯ ಮನರಂಜನೆ ನೀಡುತ್ತದೆ. ಆದರೆ ಇವುಗಳಿಂದ ಮುಖ್ಯವಾಗಿ ಇಂದಿನ ಯುವಕರ ಅತೃಪ್ತ ಜೀವನಶೈಲಿ, ಭಾವನೆಗಳನ್ನು, ಆಲೋಚನೆಗಳನ್ನು, ಈ ಗೊಂದಲ ಬರಹಗಳಿಗೆ ನಮ್ಮ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ವ್ಯವಸ್ಥೆಯಲ್ಲಿನ ಮೂಲಭೂತ ದೋಷಗಳೇ ಕಾರಣಗಳಾಗಿವೆ. ಹಾಗಾಗಿ ಇವುಗಳಲ್ಲಿ ಸಾಮಾಜಿಕ, ಶೈಕ್ಷಣಿಕವಾಗಿ ಬದಲಾವಣೆ ಆಗಬೇಕಿದೆ. ಈ ರೀತಿ ಆದಾಗ ಮಾತ್ರ ಈ ಸಮಸ್ಯಗಳಿಗೆ ಪರಿಹಾರ ಸಿಗುತ್ತದೆ ಎಂಬುದು ರಂಗಾರೆಡ್ಡಿಯವರ ಈ ಲೇಖನದ ಉದ್ದೇಶವಾಗಿದೆ. ಅಲ್ಲದೆ ಗೋಡೆ ಬರಹಗಳನ್ನು ಜಾನಪದದ ಚೌಕಟ್ಟಿನಲ್ಲಿ ಒಳಪಡಿಸಿರುವುದು ಒಂದು ಹೊಸತನವನ್ನು ತಂದಿದ್ದು ಸಮಂಜಸವಾದ ವಿಚಾರವಾಗಿದೆ.

'ಭಾಗೀರತಿ: ಸಂಕಟದ ಸಂಕಥನ' ಎಂಬ ಲೇಖನವು ಕನ್ನಡದಲ್ಲಿ ಅತೀ ಪ್ರಸಿದ್ಧವಾದ ಜನಪದ ಕಥನಗೀತೆ 'ಕೆರೆಗೆ ಹಾರ'ವನ್ನು ಆಧರಿಸಿ ತಯಾರಾದ ಭಾಗೀರತಿ ಚಿತ್ರವು ಜನಪದ ಸತ್ವ ಮತ್ತು

ಮೌಲ್ಯವನ್ನು ಸಾಮಾಜಿಕ–ರಾಜಕೀಯ ಸಂಧರ್ಭಕ್ಕೆ ಸಮಕಾಲೀನಗೊಳಿಸುವ ಪುನರ್ ಸೃಷ್ಟಿಯಾಗಿದೆ ಎಂದು ರಂಗಾರೆಡ್ಡಿಯವರು ಹೇಳಿದ್ದಾರೆ. ಅಲ್ಲದೆ ಇದು ಮಹಿಳಾ ಸಂಕಷ್ಟಗಳ ಸಂಕಥನವಾಗಿದೆ. ಸಿನಿಮಾದ ಅಂತರ್ಯದಲ್ಲಿ ಅಡಗಿರುವ ಅಂತಸತ್ವ ಅಭಿವ್ಯಕ್ತಿಯಾಗಿರುವ ಸಂಕಟ, ಪುರುಷಪಾತ್ರದ ವಿರುದ್ಧ ಹಾಗೂ, ಶ್ರೀಮಂತಿಕೆ, ರಾಜತ್ವದ ವಿರುದ್ಧ ಧ್ವನಿ ಎತ್ತುವ ಸಂಧರ್ಭಗಳನ್ನು, ಆಡುವ ಮಾತುಗಳ ಕಾವ್ಯಮಯತೆಯನ್ನು ಕಾಣಬಹುದು. ಈ ಹಿನ್ನಲೆಯಲ್ಲಿ ರಂಗಾರೆಡ್ಡಿಯವರು ತಮ್ಮ ಲೇಖನದಲ್ಲಿ ಮುನ್ನಡೆದಿದ್ದಾರೆ.

ಜನಪದ ಸಾಹಿತ್ಯದಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿದ ರಂಗಾರೆಡ್ಡಿಯವರು ಜನಪದ ಸಾಹಿತ್ಯಕ್ಕೆ ಸಂಬಂಧಿಸಿದ ಇತರೆ ಮೂರು ಲೇಖನಗಳೂ ಸಹ ಬಹಳ ಪ್ರಮುಖವಾಗಿದೆ. ಹಿಂದಿನ ಲೇಖನಗಳಲ್ಲಿ ಜನಪದ ಸಾಹಿತ್ಯದ ಮಹತ್ವ, ಶಿಕ್ಷಣದ ಬಗ್ಗೆ ಹೇಳಿದ್ದಾರೆ. ಆದರೆ ಇಷ್ಟೆಲ್ಲಾ ಮಹತ್ವ ಪಾತ್ರ ವಹಿಸಿದ ಜನಪದ ಸಾಹಿತ್ಯ ಬಹಳ ಸರಳವೂ ಆಗಿದೆ ಎಂಬುದನ್ನು "ಸರಳತೆ" ಎನ್ನುವ ಲೇಖನದಲ್ಲಿ ಅಡಕಮಾಡಲಾಗಿದೆ. ಹಾಗೆಯೇ ಜನಪದ ಸಾಹಿತ್ಯವು ಸರಳತೆಯಿಂದ ಎಲ್ಲರ ನಾಲಿಗೆಯ ಮೇಲೆ ಹರಿದಾಡುವಂತಹದ್ದು. ಜನಪದ ಸಾಹಿತ್ಯ ದೊಡ್ಡವರಿಗೆ ಮಾತ್ರವಲ್ಲ ಮಕ್ಕಳಿಗೂ ಸಾಹಿತ್ಯ ಇದೆ ಎಂಬುದನ್ನು 'ಮಕ್ಕಳ ಜನಪದ ಸಾಹಿತ್ಯ' ಎಂಬ ಲೇಖನದಲ್ಲಿಯೂ ಮಕ್ಕಳಿಗೆ ಸಂಬಂಧಿಸಿದಂತೆ ಹುಟ್ಟಿಕೊಂಡಿರುವ ಈ ಸಾಹಿತ್ಯ ತುಂಬಾ ಸೊಗಸಾದುದು. ಅದರಲ್ಲಿ ಜನಪದ ಸಾಹಿತ್ಯದ ಒಂದು ಪ್ರಕಾರವಾದ ಒಗಟುಗಗಳ ಬಗ್ಗೆಯೂ ಸಹ ರಂಗಾರೆಡ್ಡಿಯವರು ತಮ್ಮ ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ. 'ಮಕ್ಕಳ ಒಗಟುಗಳು' ಎಂಬ ಲೇಖನದಲ್ಲಿ ಒಗಟು ಎಂದರೇನು? ಒಗಟಿನ ಬಗೆಗಿನ ವಿವಿಧ ವ್ಯಾಖ್ಯಾನಗಳು, ಸಂಪೂರ್ಣ ಅರ್ಥ, ವಸ್ತು, ವಿಷಯ, ಲಕ್ಷಣಗಳು, ಸ್ವರೂಪ, ಬಗೆಗಳು ಎಲ್ಲಾ ವಿವರಗಳನ್ನು ಬಹಳ ಸೂಕ್ತವಾದ ರೀತಿಯಲ್ಲಿ ಈ ಲೇಖನದಲ್ಲಿ ನೋಡುತ್ತೇವೆ. ಒಗಟುಗಳು ಮಕ್ಕಳ ಆಲೋಚನಾ ಶಕ್ತಿಯನ್ನು ವೃದ್ಧಿಸುತ್ತವೆ, ಮನರಂಜನೆ ನೀಡುತ್ತವೆ. ಅಲ್ಲದೆ ದೊಡ್ಡವರಾದ ಮೇಲೆ ಅವರಿಗೆ ಒದಗಿದ ಸಮಸ್ಯೆಗಳನ್ನು ಬಹಳ ಸುಲಭವಾಗಿ ಪರಿಹರಿಸಿಕೊಳ್ಳುವ ವಿಶಾಲವಂತಿಕೆಯನ್ನು ಈ ಒಗಟುಗಳು ಒದಗಿಸಿಕೊಡುತ್ತವೆ.

'ಗಿರಿಜನಕಾವ್ಯ' ಇದು ರಂಗಾರೆಡ್ಡಿಯವರ ಒಂದು ಲೇಖನವಾಗಿದ್ದು ಪ್ರಸ್ತುತ 'ಗಿರಿಜನಕಾವ್ಯ' ಎಂಬುದು ಪ್ರೊ.ಕಾಳೇಗೌಡ ನಾಗವಾರ ಮತ್ತು ಪ್ರೊ.ಹಿ.ಚಿ. ಬೋರಲಿಂಗಯ್ಯರವರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ ಒಂದು ಗಮನಾರ್ಹ ಪುಸ್ತಕ. ಇದರಲ್ಲಿ ತುಳು ಮತ್ತು ಲಂಬಾಣಿ ಭಾಷೆಗಳ ಕಾವ್ಯಭಾಗದ ತುಣುಕುಗಳನ್ನು ಕಾಣಬಹುದು. ಒಟ್ಟಾರೆ ಅದರ ಗುಣ ದೋಷಗಳನ್ನು ಬಹಳ ಮುಕ್ತವಾಗಿ ಚರ್ಚೆಗೆ ಒಳಪಡಿಸುವ ಮೂಲಕ ಸಂಸ್ಕೃತಿಯ ಬಹುರೂಪತೆಯನ್ನು ಕುರಿತು ಕೆಲಸ ಮಾಡುವವರಿಗೆ ಬಹಳ ಅಮೂಲ್ಯವಾದ ಆಕರ ಸಾಮಗ್ರಿಯಾಗಿದೆ ಎಂಬುದನ್ನು ಗುರುತಿಸಿಕೊಟ್ಟಿದ್ದಾರೆ.

'ತೊಗಲುಗೊಂಬೆಯಾಟದ ಪುನರ್ಜೀವ-ಬೆಳಗಲ್ ವೀರಣ್ಣ' ಎಂಬ ಲೇಖನದಲ್ಲಿ "ಶರಾವತಿ ಬತ್ತಿಹೋದರೆ ಮರಳಿ ತರಲಾಗುವುದಿಲ್ಲ ಆದ್ದರಿಂದ ಜನಪದ ಸಾಹಿತ್ಯ ಸಂಸ್ಕೃತಿ, ಕಲೆಗೆ ಸಂಬಂಧಿಸಿದ ಯಾವ ಮಾಹಿತಿ ಸಿಕ್ಕಿದರೂ ಉಳಿಸಿ ಸಂಗ್ರಹಿಸಿ"[೧೩] ಎಂದು ಡಾ.ಎಚ್.ಎಲ್.ನಾಗೇಗೌಡರು ಹೇಳುತ್ತಿದ್ದಾಗ ಅದಕ್ಕೆ ರಂಗಾರೆಡ್ಡಿಯವರು ಅದನ್ನು ನಯವಾಗಿ ತಿರಸ್ಕರಿಸಿ ಪ್ರಜಾವಾಣಿ ಸಾಪ್ತಾಹಿಕ ಪುರವಣಿಯಲ್ಲಿ ಜಾನಪದ ಬತ್ತಿ ಹೋಗುವುದಿಲ್ಲ, ನಶಿಸುವುದಿಲ್ಲ, ಅದರ ಬದಲಾಗಿ ಜನರೊಂದಿಗೆ ಸದ ಬದುಕುತ್ತಾ, ಬದಲಾಗುತ್ತ ಮುಂದುವರೆಯುತ್ತದೆ. ಜೊತೆಗೆ ಒಂದು ರೂಪದಲ್ಲಿ ಕಣ್ಮರೆಯಾದರೆ ಇನ್ನೊಂದು ರೂಪದಲ್ಲಿ ತಲೆಯೆತ್ತುತ್ತದೆ ಎಂಬ ಲೇಖನ ಬರೆದಿದ್ದಾರೆ. ಆ ವರದಿಯೇ 'ಶ್ರೀ ರಾಮಂಜನೇಯ ತೊಗಲುಗೊಂಬೆ ಮೇಳ ತಂಡದ ಭಾರತ ಸ್ವಾತಂತ್ರ್ಯ ಸಂಗ್ರಾಮ' ಪ್ರಯೋಗವನ್ನು ಕುರಿತ್ತಾದ್ದಾಗಿದೆ ಅದನ್ನು ತೊಗಲುಗೊಂಬೆ ಮಾಧ್ಯಮದಲ್ಲಿ ಅಳವಡಿಸಿ ಪ್ರಯೋಗಿಸಿದವರು ಶ್ರೀ ಬೆಳಗಲ್ ವೀರಣ್ಣನವರು. ತೊಗಲುಗೊಂಬೆಯಾಟ ಎನ್ನುವುದು ವಿನಾಶದ ಅಂಚಿನಲ್ಲಿದ್ದಾಗ ಅದಕ್ಕೆ ಪುನರ್ಜೀವ ನೀಡಿದವರು ಬೆಳಗಲ್ ವೀರಣ್ಣನವರು. ಇದರಿಂದ ವೀರಣ್ಣನವರು ಹೊಸ ಪ್ರಯೋಗ ನಡೆಸಿದ ಅಸಾಧಾರಣ ಪ್ರಯೋಗಶೀಲ, ಅದ್ಭುತ ಪ್ರತಿಭಾವಂತ ವ್ಯಕ್ತಿ ಎಂಬುದು ಅರಿವಾಗುತ್ತದೆ. ತೊಗಲುಗೊಂಬೆಯಾಟದ ಧೃವತಾರೆಯಾದ ವೀರಣ್ಣನವರು ಬೆಳೆದು ಬಂದ ಹಾದಿಯನ್ನು ಬಾಲ್ಯದಿಂದ ಹಿಡಿದು ಬಹಳ ಸುವಿಸ್ತಾರವಾಗಿ ಹೇಳುತ್ತಾ ಜಾನಪದ ಕ್ಷೇತ್ರದಲ್ಲಿ ಅವರ ಅಪಾರ ಸಾಧನೆಯನ್ನು ಗುರುತಿಸುವಂತಹ ಕೆಲಸವನ್ನು ರಂಗಾರೆಡ್ಡಿಯವರು ಮಾಡಿದ್ದಾರೆ.

ಒಟ್ಟಾರೆ ಈ ಲೇಖನಗಳನ್ನು ಓದುತ್ತಾ ಹೋದಂತೆ ಅವರ ಅಧ್ಯಯನದ ಆಳ, ವಿಸ್ತಾರದ ಜೊತೆಗೆ ಅವರ ಕ್ರಿಯಾಶೀಲ ಚಟುವಟಿಕೆಗಳನ್ನು, ಜಾನಪದ ಕ್ಷೇತ್ರದಲ್ಲಿರುವ ಆಸಕ್ತಿಯನ್ನು ತಿಳಿಸುತ್ತವೆ. ತಾವು ಹೇಳಬೇಕಾದ ವಿಷಯವನ್ನು ಗೊಂದಲಕ್ಕೀಡು ಮಾಡದೆ ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ತಮ್ಮ ಬರವಣಿಗೆಯಲ್ಲಿ ವ್ಯಕ್ತಪಡಿಸಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಜಾನಪದವನ್ನು ಕುರಿತ ಅಪಾರವಾದ ಪ್ರೀತಿ ಮತ್ತು ಸಂವೇದನಾ ಶೀಲವಾದ ಮನಸ್ಸು ಇರುವುದು ಕಾಣುತ್ತದೆ. ಒಟ್ಟಾರೆ ಜಾನಪದ ಕ್ಷೇತ್ರಕ್ಕೆ ರಂಗಾರೆಡ್ಡಿಯವರ ಕೊಡುಗೆ ಅಪಾರವಾದುದು.

೨.೫ ಜನಪದ ಸಂಸ್ಕೃತಿ

ಜನಪದ ಸಂಸ್ಕೃತಿ ರಂಗಾರೆಡ್ಡಿಯವರ ಲೇಖನಗಳ ಸಂಕಲನ ಪುಸ್ತಕ. ೭೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಈ ಪುಸ್ತಕವನ್ನು ಸಾಹಿತ್ಯ ಪರಿಷತ್ತು ಪ್ರಕಟಿಸಿದೆ. 'ಒಬ್ಬ ಕುಂಬಾರನು ಕಚ್ಚಾ ಮಣ್ಣನ್ನು ಹಲವಾರು ರೀತಿಯಲ್ಲಿ ಹದಗೊಳಿಸಿ ಅದಕ್ಕೆ ಮಡಕೆಯ ಆಕಾರವನ್ನು ನೀಡುವಂತೆ' ರಂಗಾರೆಡ್ಡಿಯವರು ಸಹ ಲಭ್ಯವಿರುವ ನೆಲದ ಮಣ್ಣನ್ನು ಹಾಗೂ ನೆಲದ ಸೊಗಡನ್ನು ಇಟ್ಟುಕೊಂಡು ಹಲವಾರು ಲೇಖನಗಳ ಮೂಲಕ ಜನಪದ ಸಂಸ್ಕೃತಿಯನ್ನು ಕಟ್ಟಿಕೊಟ್ಟಿದ್ದಾರೆ. ಅವರ ಅಭಿರುಚಿ, ಆಲೋಚನೆ, ಸಮಾಜದ ಹಿತ ಚಿಂತನೆ ಎಲ್ಲವೂ ಅವರಿಗೆ ಜನಮನ್ನಣೆಯನ್ನು ತಂದು ಕೊಟ್ಟಿದೆ.

'ಜನಪದ ಸಂಸ್ಕೃತಿ' ಪುಸ್ತಕದಲ್ಲಿ ಆಚಾರ ವಿಚಾರಗಳ ಮೂಲಕ ಸಂಸ್ಕೃತಿಯನ್ನು ತಿಳಿಯುವ ಕೆಲಸ ಮಾಡುಲಾಗಿರುವುದು ಕಂಡು ಬರುತ್ತದೆ. ಇದರಲ್ಲಿನ ಮೊದಲ ಲೇಖನ 'ಜನಪದ ಸಂಸ್ಕೃತಿ–ಉಪ ಸಂಸ್ಕೃತಿ ಪರಿಕಲ್ಪನೆ'. ಇಲ್ಲಿ ಮೊದಲಿಗೆ ಸಂಸ್ಕೃತಿ ಎಂದರೇನು? ಎಂಬುದರ ಬಗೆಗಿನ ಚರ್ಚೆಯನ್ನು ಗಮನಿಸಬಹುದು. ಸಂಸ್ಕೃತಿ ಎಂಬ ಪದ ಇಂಗ್ಲೀಷ್‌ನ 'ಕಲ್ಚರ್' ಎಂಬ ಪದದಿಂದ ಬಂದಿದೆ. ಇದರ ಮೂಲ ಲ್ಯಾಟಿನ್ ಭಾಷೆಯ 'CULTUS' ಎಂಬುದಾಗಿದೆ. 'CULTUS' ಎಂಬುದರ ಅರ್ಥ ಪೂಜೆ ಮಾಡು, ವ್ಯವಸಾಯಮಾಡು ಮತ್ತು ಪರಿಷ್ಕರಿಸು ಎಂದಾಗಿದೆ.

ಟೈಲರ್ ರವರು– "ಸಂಸ್ಕೃತಿ ಎಂದರೆ ಮನುಷ್ಯನ ಜ್ಞಾನ, ಕಲೆ, ನೀತಿ, ಕಾನೂನು, ಸಂಪ್ರದಾಯಗಳಲ್ಲದೇ ಅವನು ಸಮಾಜದ ಸದಸ್ಯನಾಗಿ ಪಡೆದುಕೊಳ್ಳುವ ಸಾಮರ್ಥ್ಯಗಳೆಲ್ಲವೂ, ಸಂಸ್ಕೃತಿಯಾಗಿ ರೂಪುಗೊಳ್ಳುತ್ತಿರುತ್ತವೆ"[೧೪] ಎಂದು ವ್ಯಾಖ್ಯಾನಿಸಿದ್ದಾರೆ. ಹಾಗೆಯೇ ರಂಗಾರೆಡ್ಡಿಯವರು ಸಂಸ್ಕೃತಿಯನ್ನು ಕುರಿತು ಹೀಗೆ ಹೇಳಿದ್ದಾರೆ– ಜಗತ್ತಿನಾದ್ಯಾಂತ ಒಂದೇ ಸಂಸ್ಕೃತಿ ಇಲ್ಲ, ಇರಲೂ ಸಾಧ್ಯವಿಲ್ಲ. ಅನೇಕ ಸಂಸ್ಕೃತಿಗಳಲ್ಲಿ ಒಂದು ಕನಿಷ್ಟ, ಒಂದು ಶ್ರೇಷ್ಟ ಎನ್ನುವ ತಾರತಮ್ಯ ಮಾಡಬಾರದು. ಹಾಗಾಗಿ ಸಂಸ್ಕೃತಿ ಎನ್ನುವುದು ಮನುಷ್ಯನ ಬಹಿರಂಗ ಮತ್ತು ಅಂತರಂಗದ ವರ್ತನೆ ಹಾಗೂ ಕ್ರಿಯೆಗಳು ಸಂಸ್ಕೃತಿಯನ್ನು ರೂಪಿಸುತ್ತವೆ. ಆದ್ದರಿಂದ ಮನುಷ್ಯ ಎಲ್ಲೆಲ್ಲಿ ಇದ್ದಾನೆಯೋ ಅಲ್ಲೆಲ್ಲ ಸಂಸ್ಕೃತಿ ಇದ್ದೇ ಇರುತ್ತದೆ. ಸಂಸ್ಕೃತಿಯನ್ನು ಶಿಷ್ಟ ಮತ್ತು ಜನಪದ ಎಂಬುದಾಗಿ ನೋಡಿದಾಗ, ಎರಡೂ ಕೂಡ ಒಂದೇ ಆಗಿದ್ದು ಇವುಗಳಲ್ಲಿ ಕಲೆಗಳೂ ಜೀವಂತವಾಗಿರುವುದರಿಂದಲೇ ಜನಪದ ಸಂಸ್ಕೃತಿ ರೂಪುಗೊಂಡಿದೆ ಎಂಬುದು ರಂಗಾರೆಡ್ಡಿಯವರ ಅಭಿಪ್ರಾಯವಾಗಿದೆ.

ಕರ್ನಾಟಕದ ಜನಪದ ಸಂಸ್ಕೃತಿ ಪ್ರಾಚೀನವಾದುದಷ್ಟೇ ಅಲ್ಲದೆ ವೈವಿಧ್ಯಮಯವೂ ಆಗಿದೆ. ಇಲ್ಲಿ ಜಾನಪದ ಅಧ್ಯಯನವೆಂದರೆ ಸಂಸ್ಕೃತಿಯನ್ನು ಕುರಿತ ಅಧ್ಯಯನವಾಗಿದೆ. ನೆಲ, ಜಲ, ವಾತಾವರಣ, ಜೀವನಾವಶ್ಯಕತೆಗಳು, ಹುಟ್ಟು ಸಾವು, ಬದುಕಿನ ಎಲ್ಲಾ ಅವಸ್ಥೆಗಳು ಸಂಸ್ಕೃತಿಯಲ್ಲಿ ಸೇರಿಕೊಂಡಿವೆ. ಇದಕ್ಕೆ ಲಿಖಿತ ದಾಖಲೆ ಪುರಾವೆಗಳು ಇರುವುದಿಲ್ಲ. ಇವರು ಆರಾಧಿಸುವುದು ಪ್ರಕೃತಿಯನ್ನು, ಪ್ರಕೃತಿಯೇ ಅವರಿಗೆ ಎಲ್ಲವೂ ಆಗಿರುತ್ತದೆ.

"ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಲಿ

ಎಳ್ಳು ಜೀರಿಗೆ ಬೆಳಯೋಳ! ಭೂಮಿತಾಯ

ಎದ್ದೊಂದು ಗಳಿಗೆ ನೆನೆದೇನ"[೧೫]

ಈ ಮೇಲಿನ ಜನಪದ ಹಾಡಿನಲ್ಲಿ 'ಭೂಮಿ' ತಾಯಿಯಾಗಿ, ದೇವತೆಯಾಗಿ ಕಂಡಿರುವುದು ಸಂಸ್ಕೃತಿಯ ಸಂಕೇತವಾಗಿದೆ. ಜನಪದ ಸಂಸ್ಕೃತಿಯಲ್ಲಿ ಬದುಕುವ ಕ್ರಮ ಮತ್ತು ಸೃಷ್ಟಿಸುವ ಕ್ರಮ ಬೇರೆಯಾಗಿರುವುದಿಲ್ಲ. ಜನಪದರು ಕೆಲಸ ಮಾಡಲು ತೊಡಗಿದರೆ ಅಲ್ಲಿ ಪದ್ಯದ ಹಾಡುಗಾರಿಕೆಯ

ಮೂಲಕ ಜನಪದ ಗೀತೆಗಳು ಸೃಷ್ಟಿಯಾಗುತ್ತವೆ. ಭೂಮಿಯನ್ನು ತಾಯಿಯಾಗಿ, ದೇವತೆಯಾಗಿ ಕಂಡಂತೆ ಮಳೆರಾಯನನ್ನು ವ್ಯಕ್ತಿಯಂತೆ ಭಾವಿಸಿ ಮಳೆಯಿಲ್ಲದ ಸಂಧರ್ಭದಲ್ಲಿ, ಮಳೆರಾಯನನ್ನು ಕರೆಯುವ ರೀತಿಯಲ್ಲಿ ಕೂಡ ಜನಪದದಿಂದ ಸೃಷ್ಟಿಯಾಗಿರುವ ಒಂದು ಸಂಸ್ಕೃತಿಯನ್ನು ಕಾಣಬಹುದು. ಮಳೆರಾಯನನ್ನು ಕುರಿತ ಒಂದು ಜನಪದ ಗೀತೆ ಹೀಗಿದೆ.

“ಹಣ್ಣಾದೋ ಈ ಭೂಮಿ ಹಣ್ಣಾದೋ ಈ ಭೂಮಿ

ಅಣ್ಣೆಕಡ್ಯಾದೊ ದನಕರ! ರಾಜ್ಯದ ಮೇಲೆ

ಅಣ್ಣ ನೀ ನೋಡಿ ಕರುಣಿಸೋ”[೧೬]

ಇಂತದ್ದೇ ಇನ್ನೊಂದು ಸಂಪ್ರದಾಯವನ್ನು ಕೂಡ ಈ ಜನಪದ ಸಂಸ್ಕೃತಿಯಲ್ಲಿ ಕಾಣಬಹುದು. ಅದು ‘ಕೊಂತಿ’ಪೂಜೆ. ಈ ಪೂಜೆಯು ತುಂಬಾ ವಿಶಿಷ್ಟವಾದುದು. ಈ ಲೇಖನ ತುಳುನಾಡಿನ ‘ಪಾಡ್ದನಗಳು’ ಭೂತಗಳ ಮೂಲದ ಬಗ್ಗೆ ಬೆಳಕು ಚೆಲ್ಲುತ್ತದೆ. ತುಳುನಾಡಿನಲ್ಲಿ ಆಚರಣೆಯಲ್ಲಿ ವೀರ ಮರಣವನ್ನಪ್ಪಿದವರನ್ನು ಮುಂದಿನವರಿಂದ ಪೂಜೆಗೊಳಪಡಿಸಲಾಗುತ್ತದೆ. ಇಂತಹ ವಿಚಾರಗಳು ಜನಪದ ಪುರಾಣಗಳಾಗುತ್ತವೆ. ಉತ್ತರ ಕರ್ನಾಟಕ ಹಾಗೂ ದಕ್ಷಿಣ ಕರ್ನಾಟಕದಲ್ಲಿ ಗೌರಿ ಹಬ್ಬಕ್ಕೆ ಸಂಬಂಧಿಸಿದಂತೆ ಆಚರಣೆಯಲ್ಲಿರುವ ಆಟ ವಿಭಿನ್ನವಾಗಿದ್ದು, ಸಮೃದ್ಧಿಯ ಸಂಕೇತವಾಗಿ ಗೌರಿ ಆಟ ನಡೆಯುತ್ತದೆ. ಈ ವಿಚಾರವನ್ನು ಜನಪದ ಸಂಸ್ಕೃತಿಯಲ್ಲಿ ಕಾಣಬಹುದು. ಗ್ರಾಮದೇವತೆಯ ಆರಾಧನೆಯ ಕಲ್ಪನೆ ಬಹಳ ಹಿಂದಿನಿಂದಲೂ ಆಚರಣೆಯಲ್ಲಿದೆ. ಈ ಗ್ರಾಮದೇವತೆಗಳಲ್ಲಿ ಹೆಚ್ಚು ಪ್ರಸಿದ್ಧವಾದುದು ಮಾರಮ್ಮ. ಇದು ತುಂಬಾ ಪ್ರಭಾವಶಾಲಿ ಶಕ್ತಿ ದೇವತೆ. ಇದಕ್ಕೆ ಸಂಬಂಧಿಸಿದ ಆಚರಣೆ ಜನಪದ ಸಂಸ್ಕೃತಿಯಲ್ಲಿ ಕಾಣಬಹುದು.

ಕಾಮನ ಹಬ್ಬದ ಆಚರಣೆ ಜೊತೆಯಲ್ಲೇ ಬರುವ ಜೋಕುಮಾರ ಆಚರಣೆಗೆ ಕೂಡ ಕನ್ನಡ ದ್ರಾವಿಡರ ಮೂಲ ಸಂಸ್ಕೃತಿಯ ಜೀವನ ವಿಧಾನಗಳನ್ನು ಸೂಚಿಸುತ್ತದೆ. ಜನಪದ ಸಂಸ್ಕೃತಿಯಲ್ಲಿ ಬರುವ ದೈವಗಳು, ಗ್ರಾಮ, ಜಾತಿ, ಕಸುಬು, ಪ್ರದೇಶ ಇತ್ಯಾದಿಗಳಿಗನುಗುಣವಾಗಿ ವೈವಿಧ್ಯಮಯವಾಗಿದೆ. ಪುರುಷ ದೇವರುಗಳ ಪೂಜೆಗಳ ಆಚರಣೆಯನ್ನು ಸಹ ಇಲ್ಲಿ ಕಾಣಬಹುದು. ಪುರುಷ ದೇವರುಗಳಲ್ಲಿ

ಮಂಟೇಸ್ವಾಮಿ, ಮಾದೇಶ್ವರ, ಜುಂಜಪ್ಪ, ಮೈಲಾರಲಿಂಗ, ಪ್ರಮುಖರಾಗಿದ್ದಾರೆ. ಇವರ ಬಗ್ಗೆ ಹಲವಾರು ವಿಷಯಗಳನ್ನು ಜನಪದ ಸಂಸ್ಕೃತಿಯ ವ್ಯಾಪ್ತಿಯಲ್ಲಿ ಕಾಣಬಹುದು. ಒಟ್ಟಾರೆ ಜನಪದ ಸಂಸ್ಕೃತಿಯಾಗಲೀ, ಉಪಸಂಸ್ಕೃತಿಯಾಗಲೀ ಜನಗಳಿಗೆ ಭರವಸೆ ಮೂಡಿಸುವಂತಹ, ಆತ್ಮ ವಿಶ್ವಾಸ ಹೆಚ್ಚು ಮಾಡುವಂತಹ ಅಂಶಗಳನ್ನು ತನ್ನಲ್ಲಿ ಹುದುಗಿಸಿಕೊಂಡಿದೆ.


ಜನಪದ ದೈವ ವಸತಿಗಳನ್ನು ಕುರಿತು ರಂಗಾರೆಡ್ಡಿಯವರ ಬರವಣಿಗೆ ಅಧ್ಯಯನ ಪೂರ್ಣವಾಗಿದೆ. ಪ್ರಾಚೀನ ಕಾಲದಲ್ಲಿ ದೈವಗಳು ಸಹ ಜನರಂತೇ ಅಲೆಮಾರಿಯಾಗಿದ್ದು ಅವು ಒಂದೇ ಜಾಗದಲ್ಲಿ ಸೃಷ್ಟಿಯಾಗದೆ ಬೇರೆಲ್ಲೋ ಹುಟ್ಟಿ ಬರುತ್ತವಂತೆ ಎಂದು ಹಲವು ಕಥೆಗಳಿಂದ ತಿಳಿದು ಬರುತ್ತದೆ. ಕಾಲಾಂತರ ದೇವತೆಗಳು ಸಹ ಅಲೆಮಾರಿತನವನ್ನು ಬಿಟ್ಟು ನಾಗರೀಕತೆಯ ಬೆಳವಣಿಗೆಯ ನಂತರ ಒಂದೆಡೆ ನೆಲೆಸುತ್ತವೆ ಎಂಬುದನ್ನು 'ಜನಪದ ದೈವಸತಿ' ಎಂಬ ಲೇಖನದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ.

ರಂಗಾರೆಡ್ಡಿಯವರ ಲೇಖನದಲ್ಲಿ ವಿನಾಯಕನ ಹುಟ್ಟಿಗೆ ಅನೇಕ ಕಥೆಗಳನ್ನು ದಾಖಲಿಸಿರುವುದು ಹೆಚ್ಚು ವಿಶಿಷ್ಟವಾಗಿ ಕಾಣುತ್ತದೆ. ಗಣೇಶನ ಆರಾಧನೆಗೆ ರೈತರು ಹೆಚ್ಚಿನ ಪ್ರಾಶಸ್ತ್ಯ ನೀಡಿರುವುದರಿಂದ ಭಾರತೀಯ ಕೃಷಿ ಪರಂಪರೆಯಲ್ಲಿ ಬೆಳೆದು ಬಂದ ದೇವರೆಂದರೆ ಗಣೇಶ ಎಂದು ರಂಗಾರೆಡ್ಡಿಯವರು ಹೇಳಿದ್ದಾರೆ. ಅಲ್ಲದೆ ವಿನಾಯಕನನ್ನು ಕುರಿತು ಅನೇಕ ಕಥೆಗಳನ್ನು ದಾಖಲಿಸಿರುವುದು ಹೆಚ್ಚು ಆಸಕ್ತಿಯುತವಾಗಿದೆ. ಜನಪದ ದೈವ ಗುಡಿಗಳು ಎಂಬ ಲೇಖನದಲ್ಲಿ ರಂಗಾರೆಡ್ಡಿಯವರು ಮಾನವನಲ್ಲಿ ಆದಿಕಾಲದಿಂದ ವಸತಿಗಳ ಪ್ರಜ್ಞೆ ಹೇಗೆ ಹುಟ್ಟಿಕೊಂಡಿತು? ಎಂಬುದನ್ನು ಆಧಾರವಾಗಿಟ್ಟು ಕೊಂಡು ಕಾಡುಗಳಲ್ಲಿ ವಾಸಿಸುತ್ತಿದ್ದ ಮನುಷ್ಯ ಹೇಗೆ ವಸತಿಗಳನ್ನು ಕಟ್ಟುವ ಆಲೋಚನೆ ಮಾಡಿದ? ಆ ಆಲೋಚನೆ ಬೆಳೆದು ಬದಲಾಗುತ್ತಾ ಬಂದಿದೆ ಎಂಬುದನ್ನು ಗಮನಿಸುತ್ತಾ ಅಲ್ಲಿಯೂ ಕೂಡ ಅವರ ಭೌತಿಕ ಸಂಸ್ಕೃತಿಯ ಬಗ್ಗೆ ಹೇಳಿದ್ದಾರೆ.

ಮಾನವನ ಸಾಂಸ್ಕೃತಿಕ ಇತಿಹಾಸವನ್ನು ತಿಳಿಯಲು ಕಲೆ, ಸಾಹಿತ್ಯ, ಆಚರಣೆ, ನಂಬಿಕೆ, ಸಂಪ್ರದಾಯಗಳು ಎಷ್ಟು ಮುಖ್ಯವೋ, ವಸತಿಗಳೂ ಕೂಡ ಅಷ್ಟೇ ಮುಖ್ಯವಾದುದು. ಈ ಜನಪದ ವಸತಿ ಅಥವಾ ಜನಪದ ವಾಸ್ತುಶಿಲ್ಪ ಭೌತಿಕ ಸಂಸ್ಕೃತಿಯಲ್ಲಿ ಸೇರುವಂತ ವಿಷಯವಾಗಿದೆ. ಮೊದಲಿಗೆ

ಮಾನವ ಗುಹೆ–ಪೊಟರೆಗಳಲ್ಲಿ ವಾಸುತ್ತಿದ್ದ. ವಾಸಿಸಲು ಯೋಗ್ಯ ಸ್ಥಳದ ಅವಶ್ಯಕತೆ ತನಗೆ ಇದೆ ಎಂದು ಅವನಿಗೆ ಅರಿವಾದಾಗ ವಸತಿಯ ಬಗ್ಗೆ ಆಲೋಚಿಸಿ ವಸತಿಗಳನ್ನು ನಿರ್ಮಿಸುವ ಆಲೋಚನೆಗಳಲ್ಲಿ ತೊಡಗಿದ ವಸತಿ ನಿರ್ಮಾಣದಲ್ಲಿ ದಿನ ಕಳೆದಂತೆ ಭಿನ್ನ ಬದಲಾವಣೆಯನ್ನು ಹೊಂದಿ ಇಂದು ಇವತ್ತಿನ ವಸತಿ ಕಲ್ಪನೆಗೆ ಅದು ಬೀಜವಾಗಿದೆ. ಹಿಂದಿನ ಕಾಲದಲ್ಲಿ ಮಾನವ ಕೇವಲ ತನ್ನ ಕ್ಷೇತ್ರವನ್ನು ಮಾತ್ರ ನೋಡದೆ ಜೊತೆಗೆ ತನ್ನೊಂದಿಗಿರುವ ಪ್ರಾಣಿಗಳಿಗೆ, ಪಕ್ಷಿಗಳಿಗೆ, ತನ್ನೊಂದಿಗಿನ ಇತರೆ ಸಂಬಂಧಿಕರಿಗೆ ಹಾಗೂ ತಾನು ಪೂಜಿಸುವ ದೇವರುಗಳಿಗೂ ಸಹ ವಸತಿಯನ್ನು ಮಾಡುವ ದಾಟಿ ಬೆಳೆದು ಬಂದಿದೆ. ಈ ರೀತಿಯ ಬೆಳವಣಿಗೆಯಿಂದ 'ಜನಪದ ದೈವಗಳ ಗುಡಿಗಳು' ಒಂದು ಬೆಳವಣಿಗೆ ಇಂದಿನವರೆಗೂ ಸಾಧ್ಯವಾಗಿದೆ. ಇದನ್ನು ರಂಗಾರೆಡ್ಡಿಯವರು 'ಜನಪದ ದೈವ ಗುಡಿ' ಎಂಬ ಅಧ್ಯಯನದಿಂದ ದೈವಗಳ ವಸತಿಗಳ ಬಗ್ಗೆ ಮಾಹಿತಿಯನ್ನು ಜನಪದ ಸಂಸ್ಕೃತಿ ಎಂಬ ಪುಸ್ತಕದಲ್ಲಿ ನೀಡಿದ್ದಾರೆ. "ಜನಪದ ದೈವ ವಸತಿ ಎನ್ನುವುದು ವಸತಿ ಜಾನಪದದ ಒಂದು ಅಂಗವಾಗಿರುವುದರಿಂದ ಅದನ್ನು ಡಾ.ವಿಲ್ಯಂ–ಮಾಡ್ತ ರವರು ವರ್ಗೀಕರಿಸಿ ಅದರ ಹಿಂದಿರುವ ತಾತ್ವಿಕ ವಿಚಾರಧಾರೆಯನ್ನು ವಿಶ್ಲೇಷಿಸಿದ್ದಾರೆ"[೧೭]

ಡಾ.ವಿಲ್ಯಂ–ಮಾಡ್ತರವರ ವರ್ಗೀಕರಣ



ಈ ವಿನ್ಯಾಸ ಕ್ರಮದಲ್ಲಿ ಜಾನಪದ ವಿಕಾಸವಾಗಿರುವುದನ್ನು ಒಪ್ಪಿಕೊಂಡರೆ, ಆರಂಭಕಾಲದಲ್ಲಿ ಪ್ರಾಣಿಗಳೇ ಮಾನವನ ದೈವಗಳಾಗಿದ್ದವು ಎಂಬುದನ್ನು ತಿಳಿಯಬಹುದು. ಜೊತೆ ದೈವ ವಸತಿಗಳ ಕಲ್ಪನೆ ಅವರಲ್ಲಿ ಇತ್ತು ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಜನಪದ ದೈವ ಗುಡಿಗಳು ಅಂಗೈ ಅಗಲದ ನಾಲ್ಕು ಸಣ್ಣ ಕಲ್ಲುಗಳನ್ನು ಪೂಜಿಸುವುದರಿಂದ ಪ್ರಾರಂಭವಾಗಿ ಇದು ಗರ್ಭಗುಡಿ, ಮಂಟಪ, ಗೋಪುರ, ನವರಂಗ, ಬಲಿಕಂಬ, ಕಳಶ, ಇತ್ಯಾದಿಗಳನ್ನು ಒಳಗೊಂಡು ಬೆಳೆದು ಬಂದಿದೆ. ಅಂದಿನಿಂದಲೇ ಜನಪದರಲ್ಲಿ ವಾಸ್ತು ಶೈಲಿ ಕೂಡ ವಿಕಾಸಗೊಂಡು ಬೆಳೆದು ಬಂದಿರುವುದನ್ನು ಈ ಲೇಖನದಲ್ಲಿ ಗಮನಿಸಬಹುದು. 'ಜನಪದ ಧರ್ಮ' ಎಂಬ ಲೇಖನದಲ್ಲಿ ಧರ್ಮ ಎನ್ನುವುದು ಮಾನವನ ಒಂದು ಅವಿಭಾಜ್ಯ ಅಂಗ. ಈ ಧರ್ಮ ಎನ್ನುವುದು ಹೇಗೆ ಜನರಲ್ಲಿ ಮೂಡಿತೆಂದರೆ, ಪ್ರಾಕೃತಿಕವಾಗಿ ಆಗುತ್ತಿದ್ದ ವಿಕೋಪಗಳಿಂದ ಭಯಭೀತರಾಗಿ ಭಕ್ತಿ ಪರಿಕಲ್ಪನೆ ಬೆಳೆದು ಅಲ್ಲಿ ತಮ್ಮದೇ ಆದ ಆಚರಣೆ ಸಂಪ್ರದಾಯಗಳು ಪ್ರಾರಂಭಗೊಂಡವು. ಅದು ದಿನೇ ದಿನೇ ವಿಭಿನ್ನ ರೂಪಗಳನ್ನು ಪಡೆಯುತ್ತಾ ಇಂದು ಮಾನವನನ್ನು ನಿಯಂತ್ರಿಸುವ ಹೆಮ್ಮರವಾಗಿ ಧರ್ಮ ಬೆಳೆದು ನಿಂತಿದೆ. ಹೀಗೆ ಹುಟ್ಟಿಕೊಂಡ ಧರ್ಮದಲ್ಲಿ ಹಲವಾರು ಕಡೆ ಹಲವಾರು ರೀತಿಯ ವಿಭಿನ್ನ ಆಚರಣೆಗಳು, ನಂಬಿಕೆಗಳು, ಅದಕ್ಕೆ ಉದಾಹರಣಾ ಕಥೆಗಳನ್ನು ಒಳಗೊಂಡ ಬಹಳ ವಿಸ್ತಾರವಾದ ಜನಪದ ಧರ್ಮದ ಬಗ್ಗೆ ವಿವರಣೆಯನ್ನು ಇದರಲ್ಲಿ ಕಾಣಬಹುದು.

೨.೬ ತೇರು ಹರಿದಾವು

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೧೯೮೦ರಲ್ಲಿ ಕರ್ನಾಟಕದ ಜಾನಪದ ಚಟುವಟಿಕೆಗಳಿಗೆ ಒಂದು ನಿರ್ದಿಷ್ಟ ಮತ್ತು ಸ್ಫೂರ್ತಿದಾಯಕ ಚಾಲನೆ ಕೊಡುವ ದೃಷ್ಟಿಯಿಂದ ಕರ್ನಾಟಕ ಸರ್ಕಾರ ಜಾನಪದ ಅಕಾಡೆಮಿಯನ್ನು ರಚಿಸಿತು. ಇದರ ಮೊದಲ ಅಧ್ಯಕ್ಷರಾಗಿ ಎಚ್.ಎಲ್. ನಾಗೇಗೌಡರು ಅದನ್ನು ಉತ್ತಮ ಮಟ್ಟಕ್ಕೆ ಮುನ್ನಡೆಸಿದರು. ೨ನೇ ಅಧ್ಯಕ್ಷರಾದ ಕರೀಂಖಾನ್ ಅಕಾಡೆಮಿಯನ್ನು ಮತ್ತಷ್ಟು ಮುನ್ನಡೆಸಿದರು. ನಂತರ ಡಾ.ಜೀ.ಶಂ.ಪ ರವರು ಕರ್ನಾಟಕದ ಜಾನಪದ ಚಟುವಟಿಕೆಗಳನ್ನು ವಿಸ್ತರಿಸಿ ಅದಕ್ಕೆ ವೈವಿಧ್ಯವನ್ನು ಮತ್ತು ಹೊರ ರಾಜ್ಯಗಳ ಮಾನ್ಯತೆಯನ್ನು ದೊರಕಿಸಿ ಕೊಟ್ಟರು. ನಂತರ ಲಕ್ಕಪ್ಪಗೌಡರು ಸಹ ಅಕಾಡೆಮಿಯನ್ನು ಮುಂದೆ ನಡೆಸುತ್ತಾ ಬಂದಿದ್ದಾರೆ. ಹೀಗೆ

ಅಕಾಡೆಮಿಯ ೧೭ ವರ್ಷಗಳ ಬೆಳವಣಿಗೆ, ನಡೆದು ಬಂದ ದಾರಿ, ಅದರ ಕಾರ್ಯವೈಖರಿಯನ್ನು ವರದಿರೂಪದಲ್ಲಿ ನೀಡುವ ಕಾರ್ಯ ರಂಗಾರೆಡ್ಡಿಯವರಿಗೆ ವಹಿಸಲಾಗಿತ್ತು. ಅದರ ಒಂದು ಪ್ರತಿಫಲವಾಗಿ 'ತೇರು ಹರಿದಾವು' ಎಂಬ ಈ ಕೃತಿ ಹೊರಬಂದಿತು. ಈ ಕೃತಿಯಲ್ಲಿ ರಂಗಾರೆಡ್ಡಿಯವರು ಎಲ್ಲಾ ವಿಚಾರಗಳನ್ನು ಕೇವಲ ವರದಿಯಾಗಿ ನೀಡದೆ, ಅದನ್ನು ವಿಶಿಷ್ಟ ರೂಪದಲ್ಲಿ ನೀಡಿದ್ದಾರೆ. ಇದರಲ್ಲಿ ಮೊದಲನೇ ಅಧ್ಯಾಯದಲ್ಲಿ ಜಾನಪದಕ್ಕೊಂದು ಅಕಾಡೆಮಿ ಸ್ಥಾಪನೆಯ ಬಗ್ಗೆ ತಿಳಿಸಿದ್ದಾರೆ. ಸ್ಥಾಪನೆಯಾದ ಮೊದಲಿನ ದಿನಗಳಲ್ಲಿ ಆದಂತಹ ಅಭಿವೃದ್ಧಿಯನ್ನು, ಕೆಲಸ ಕಾರ್ಯಗಳನ್ನು 'ಆರಂಭದ ಘಟ್ಟ' ಎಂಬ ೨ನೇ ಅಧ್ಯಾಯದಲ್ಲಿ ತಿಳಿಸಿದ್ದಾರೆ. ಈ ಹಂತದಲ್ಲಿ ಅಷ್ಟಾಗಿ ಪ್ರಕಟಣೆಗಳಾಗಲಿಲ್ಲ. ನಂತರ ಆದಂತಹ ಅಬಿವೃದ್ಧಿಯನ್ನು 'ಪ್ರಕಟಣೆಯ ಘಟ್ಟ' ಎಂಬ ಹಂತದಲ್ಲಿ ಡಾ.ಜೀ.ಶಂ.ಪ ರವರ ಅವಧಿಯಲ್ಲಿ ಹಿಂದಿನ ಘಟ್ಟಗಳಿಗಿಂತ ಹೆಚ್ಚು ಸಾಧನೆಗಳನ್ನು ಕಂಡ ಅಕಾಡೆಮಿಯ ಕಾರ್ಯ ಕ್ರಮಗಳಿಗೆ ರಾಷ್ಟ್ರೀಯ ರೂಪ ಕೊಡಲು ಪ್ರಯತ್ನಿಸಿರುವುದು ಬಹಳ ಪ್ರಮುಖವಾಗಿದೆ. 'ಚಟುವಟಿಕೆ ಘಟ್ಟ' ಎಂಬ ೪ನೇ ಹಂತದಲ್ಲಿ ಲಕ್ಕಪ್ಪಗೌಡರು ಅಧ್ಯಕ್ಷರಾಗಿದ್ದು, ಇಲ್ಲಿಯೂ ಸಾಕಷ್ಟು ಅಭಿವೃದ್ಧಿ, ಪುಸ್ತಕ ಪ್ರಕಟಣೆಗಳು ಯತ್ತೇಚ್ಚವಾಗಿ ಪ್ರಕಟಣೆಗೊಂಡವು.

ಹೀಗೆ ಎಚ್.ಎಲ್.ನಾಗೇಗೌಡರ ಕಾಲದಿಂದ ಹಿಡಿದು ಡಾ.ಲಕ್ಕಪ್ಪಗೌಡರ ಕಾಲದವರೆಗೆ ಜಾನಪದ ಅಕಾಡೆಮಿ ಬೆಳೆದು ಬಂದ ದಾರಿಯ ಸ್ಥೂಲ ನೋಟವನ್ನು ಕಾಣಬಹುದು. ಅಕಾಡೆಮಿಯ ಅಭಿವೃದ್ಧಿಯ ಚಿತ್ರಣವನ್ನು ನೋಡಿದಾಗ ಬದಲಾವಣೆಯೊಂದಿಗೆ ಸಾಗಿರುವುದರ ಚಿತ್ರಣವಿದ್ದು ಅದಕ್ಕೆ 'ವರದಿ'ಎಂದು ನಾಮಕರಣ ಮಾಡದೆ 'ತೇರು ಹರಿದಾವು' ಎಂದು ನಾಮಕರಣ ಮಾಡಿದ್ದಾರೆ. ಹಾಗಾಗಿ 'ತೇರುಹರಿದಾವು' ಈ ಪುಸ್ತಕ ಕೇವಲ ಒಣಕಲು ವರದಿಯಾಗದೆ ಓದಿಸಿಕೊಳ್ಳುವ ಒಂದು ಆಸಕ್ತಿಯುತ ಬರಹವಾಗಿ ಹೊರಹೊಮ್ಮಿದೆ.

ಕೊನೆ ಟಿಪ್ಪಣಿ

೧. ಡಾ.ಸಿ.ಬಿ.ಹೊನ್ನಯ್ಯ: ಕನ್ನಡ ಸಂಸ್ಕೃತಿಯ ಮೀಮಾಂಸೆ,
ಜೈ ಭೀಮ್ ಪ್ರಕಾಶನ-೨೦೦೮, ಪು.ಸಂ. ೩೩೧

೨. ಡಾ.ಸಿ.ಬಿ.ಹೊನ್ನಯ್ಯ: ಕನ್ನಡ ಸಂಸ್ಕೃತಿಯ ಮೀಮಾಂಸೆ,
ಜೈ ಭೀಮ್ ಪ್ರಕಾಶನ-೨೦೦೮, ಪು.ಸಂ. ೩೩೨

೩. ಡಾ.ಸಿ.ಬಿ.ಹೊನ್ನಯ್ಯ: ಕನ್ನಡ ಸಂಸ್ಕೃತಿಯ ಮೀಮಾಂಸೆ,
ಜೈ ಭೀಮ್ ಪ್ರಕಾಶನ-೨೦೦೮, ಪು.ಸಂ. ೩೩೨

೪. ಡಾ.ಸಿ.ಬಿ.ಹೊನ್ನಯ್ಯ: ಕನ್ನಡ ಸಂಸ್ಕೃತಿಯ ಮೀಮಾಂಸೆ,
ಜೈ ಭೀಮ್ ಪ್ರಕಾಶನ-೨೦೦೮, ಪು.ಸಂ. ೩೩೨

೫. ಡಾ.ಸಿ.ಬಿ.ಹೊನ್ನಯ್ಯ: ಕನ್ನಡ ಸಂಸ್ಕೃತಿಯ ಮೀಮಾಂಸೆ,
ಜೈ ಭೀಮ್ ಪ್ರಕಾಶನ-೨೦೦೮, ಪು.ಸಂ. ೩೩೨

೬. ಡಾ.ರಂಗಾರೆಡ್ಡಿ: ಲಿಖಿತ ಜಾನಪದ,
ಅಖಿಲ ಭಾರತ ಮುಂಡಾಲ ಸಮಾಜ(ನೋಂ)-೧೯೭೯, ಪು.ಸಂ. ೪೧

೭. ಡಾ.ರಂಗಾರೆಡ್ಡಿ: ಲಿಖಿತ ಜಾನಪದ,
ಅಖಿಲ ಭಾರತ ಮುಂಡಾಲ ಸಮಾಜ(ನೋಂ)-೧೯೭೯, ಪು.ಸಂ. ೩೭

೮. ಡಾ.ರಂಗಾರೆಡ್ಡಿ: ಬಂಡಾಯ ಜಾನಪದ,
ಅಖಿಲ ಭಾರತ ಮುಂಡಾಲ ಸಮಾಜ(ನೋಂ)-೨೦೦೯, ಪು.ಸಂ. ೧೨೬

೯. ಡಾ.ರಂಗಾರೆಡ್ಡಿ: ನೆಲದೊಡಲ ಪ್ರೀತಿ,
ಸಿ.ವಿ.ಜಿ.ಇಂಡಿಯಾ-೨೦೧೪, ಪು.ಸಂ. ೦೩

೧೦. ಡಾ.ರಂಗಾರೆಡ್ಡಿ: ನೆಲದೊಡಲ ಪ್ರೀತಿ,
ಸಿ.ವಿ.ಜಿ.ಇಂಡಿಯಾ-೨೦೧೪, ಪು.ಸಂ. ೨೫

೧೧. ಡಾ.ರಂಗಾರೆಡ್ಡಿ: ನೆಲದೊಡಲ ಪ್ರೀತಿ,
ಸಿ.ವಿ.ಜಿ.ಇಂಡಿಯಾ-೨೦೧೪, ಪು.ಸಂ. ೨೭

೧೨. ಡಾ.ರಂಗಾರೆಡ್ಡಿ: ನೆಲದೊಡಲ ಪ್ರೀತಿ,
ಸಿ.ವಿ.ಜಿ.ಇಂಡಿಯಾ–೨೦೧೪, ಪು.ಸಂ. ೫೯

೧೩. ಡಾ.ರಂಗಾರೆಡ್ಡಿ: ನೆಲದೊಡಲ ಪ್ರೀತಿ,
ಸಿ.ವಿ.ಜಿ.ಇಂಡಿಯಾ–೨೦೧೪, ಪು.ಸಂ. ೧೪೫

೧೪. ಡಾ.ರಂಗಾರೆಡ್ಡಿ: ಜನಪದ ಸಂಸ್ಕೃತಿ,
ಕನ್ನಡ ಸಾಹಿತ್ಯ ಪರಿಷತ್ತು–೨೦೧೦, ಪು.ಸಂ. ೦೧

೧೫. ಡಾ.ರಂಗಾರೆಡ್ಡಿ: ಜನಪದ ಸಂಸ್ಕೃತಿ,
ಕನ್ನಡ ಸಾಹಿತ್ಯ ಪರಿಷತ್ತು–೨೦೧೦, ಪು.ಸಂ. ೦೩

೧೬. ಡಾ.ರಂಗಾರೆಡ್ಡಿ: ಜನಪದ ಸಂಸ್ಕೃತಿ,
ಕನ್ನಡ ಸಾಹಿತ್ಯ ಪರಿಷತ್ತು–೨೦೧೦, ಪು.ಸಂ. ೧೦

೧೭. ಡಾ.ರಂಗಾರೆಡ್ಡಿ, ಜನಪದ ಸಂಸ್ಕೃತಿ,
ಕನ್ನಡ ಸಾಹಿತ್ಯ ಪರಿಷತ್ತು–೨೦೧೦, ಪು.ಸಂ. ೪೧,೪೨

ಅಧ್ಯಾಯ: ೩

ಶ್ರೀಯುತರ ಸಾಹಿತ್ಯ ಕೃತಿಗಳ ಸಮೀಕ್ಷೆ

ರಂಗಾರೆಡ್ಡಿಯವರ ಸಾಹಿತ್ಯ ಕೃತಿಗಳಾದ ನನ್ನೂರಹಾಡು, ಬಯಲುಸೀಮೆ ಭಾಷಾ ವೈವಿಧ್ಯ, ಸೊಲ್ಲು ಸೊಲ್ಲೆಲ್ಲ ಅಪರಂಜಿ, ಶ್ರೀಶ್ರೀ, ಗುಬ್ಬಿ ವೀರಣ್ಣ, ಅಲ್ಲಮಪ್ರಭು ಮೊದಲಾದ ಉತ್ತಮ ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಈ ಕೃತಿಗಳಲ್ಲಿ ನನ್ನೂರಹಾಡು ಕವನ ಸಂಕಲನವಾಗಿದೆ. ಸೊಲ್ಲು ಸೊಲ್ಲೆಲ್ಲ ಅಪರಂಜಿ ಇದು ಒಂದು ಉತ್ತಮ ವಿಮರ್ಶಾಕೃತಿಯಾಗಿದೆ. ಶ್ರೀಶ್ರೀ ಎನ್ನುವ ತೆಲುಗು ಕವಿಯ ಬಗೆಗಿನ ಮಾಹಿತಿ ಹಾಗೂ ಸಾಹಿತ್ಯದ ಅನುವಾದ ಕಾರ್ಯವನ್ನು ಮಾಡಿ 'ಶ್ರೀಶ್ರೀ' ಎಂಬ ಕೃತಿಯನ್ನು ರಚಿಸಿದ್ದಾರೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಮೃತ ಮಹೋತ್ಸವದ ಅಂಗವಾಗಿ ಗುಬ್ಬಿ ವೀರಣ್ಣನವರ ಬಗ್ಗೆ ಬಾಲ್ಯದಿಂದ ಹಿಡಿದು, ನಾಟಕ ಮಂಡಳಿಯು ನೂರು ವರ್ಷಗಳನ್ನು ಪೂರ್ತಿಗೊಳಿಸಿದ ಅಭಿವೃದ್ಧಿ ಸಾಧನೆಯನ್ನು ಕುರಿತಂತೆ ಹೊರಬಂದ ಕೃತಿಯೇ ಗುಬ್ಬಿ ವೀರಣ್ಣ. 'ಅಲ್ಲಮಪ್ರಭು' ಒಬ್ಬ ಪ್ರಮುಖ ವಚನಕಾರನನ್ನು ಕುರಿತು ಬರೆದಂತಹ ಉತ್ತಮ ಕೃತಿಯಾಗಿದೆ. ಈ ಕೃತಿಗಳ ಬಗ್ಗೆ ಸಾಹಿತ್ಯದ ಅಧ್ಯಯನದಲ್ಲಿ ಅವಲೋಕಿಸಲಾಗಿದೆ.

೩.೧ ನನ್ನೂರ ಹಾಡು

ಇದು ರಂಗಾರೆಡ್ಡಿಯವರ ಮೊದಲ ಕವನ ಸಂಕಲನ. ಇವರ ಕವನಗಳಲ್ಲಿ ದೌರ್ಜನ್ಯದ ವಿರುದ್ಧವಾಗಿ ಸೌಮ್ಯವಾದ ಪ್ರತಿಭಟನೆಯು ಕಾಣುತ್ತದೆ. ನವ್ಯದ ಹಿನ್ನಲೆಯ ಧಾಟಿಯಲ್ಲೇ ಪದ್ಯ ರಚನೆ ಮಾಡಿದರೂ ಅದು ಸಾಮಾಜಿಕ ಮುಖಗಳನ್ನು ಒಳಗೊಂಡ ಶೋಷಣೆಗಳನ್ನು ವಿರೋಧಿಸುತ್ತದೆ. ಶ್ರೀಯುತರು ಬರೆದಿರುವ ಕವನಗಳನ್ನು ನೋಡಿದಾಗ ಲಯ, ಗೇಯತೆ, ಪ್ರಾಸ, ಹಾಡಿನ ಗುಣವುಳ್ಳ ಕವನಗಳು ಅಧಿಕವಾಗಿವೆ. ಹಳ್ಳಿಗಾಡಿನ ಪರಿಸರದಲ್ಲೇ ಹುಟ್ಟಿ ಬೆಳೆದ ರಂಗಾರೆಡ್ಡಿಯವರು ಅಲ್ಲಿ ಜನರ ಒಂಸೆ, ವೇದನೆ, ಬಡತನ, ಶೋಷಣೆ ಎಲ್ಲವನ್ನೂ ಬಹಳ ಸರಳವಾಗಿ ಕಣ್ಮುಂದೆ ನಡೆದ ಹಾಗೆ ಬರವಣಿಗೆಯಲ್ಲಿ ಕವನಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ಬಂಡಾಯ, ಸಮುದಾಯ, ದಲಿತ

ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾ ಬಂದಿರುವ ವ್ಯಕ್ತಿಯಾದರೂ ಇವರ ಪದ್ಯಗಳಲ್ಲಿ ಸಾಮಾಜಿಕ ಹಿನ್ನಲೆಯ ಒಂದು ಕಲಾತ್ಮಕ ಅಭಿವ್ಯಕ್ತಿಯನ್ನು ನೋಡಬಹುದು. ರಂಗಾರೆಡ್ಡಿಯವರು ತಮ್ಮ ಹಾಡುಗಳಲ್ಲಿ ಮನುಷ್ಯನ ನೋವು ಮತ್ತು ಅದಮ್ಯ ಚೈತನ್ಯವನ್ನು ಹಿಡಿದಿಡಲು ಯತ್ನಿಸಿದ್ದಾರೆ. 'ಗಣ್ಯ', 'ಜಿಗಣೆ', 'ಅವಸ್ಥೆ', 'ಹೋರಾಟ', 'ಚರಿತ್ರೆಯ ಸಂಗತಿ' ಈ ಪದ್ಯಗಳಲ್ಲಿ ಗಣ್ಯವ್ಯಕ್ತಿ, ಶ್ರೀಮಂತರು ಮತ್ತು ಜಮೀನ್ದಾರರು ನಡೆಸುವ ಶೋಷಣೆಯನ್ನು, ಅವರ ದರ್ಪ ದೌರ್ಜನ್ಯಗಳನ್ನು ಕಾಣಬಹುದು. 'ಹಂಬಲ' ಕವನದಲ್ಲಿ ರೈತನ ನಿರಂತರವಾದ ಹೋರಾಟವನ್ನು ಒಳಗೊಂಡಿದ್ದು, ಇಲ್ಲಿ ಭೂಮಿಯನ್ನು ನೆಲವೆಂತಲು, ಹೆಣ್ಣು ಎಂತಲೂ ಎರಡೂ ಅರ್ಥಗಳಲ್ಲಿ ಬಳಸಿ ಸಾಂಕೇತಿಕವಾಗಿ ಬರೆದಂತಹ ಪದ್ಯ ಇದಾಗಿದೆ.

'ಜಿಗಣೆಗಳು' ಕವನದಲ್ಲಿ ಶೋಷಣೆ ಮಾಡುವ ವ್ಯಕ್ತಿಗಳನ್ನು ಜಿಗಣೆಗಳಿಗೆ ಹೋಲಿಸಲಾಗಿದೆ. ನಿರಂತರವಾಗಿ ಶೋಷಣೆಯ ಮೂಲಕ ಜನರ ರಕ್ತವನ್ನು ಹೀರುವಂತವರು ಶ್ರೀಮಂತರು, ಭೂಮಾಲೀಕರು. ಒಂದು ಬಾರಿ ರಕ್ತದ ರುಚಿಯನ್ನು ಕಂಡ ಜಮೀನ್ದಾರರು ಮತ್ತೆ ಮತ್ತೆ ಶೋಷಣೆಗೆ ಒಳಪಡಿಸುತ್ತಾರೆ. ಇಂತಹ ಶೋಷಣೆಯಿಂದ ಮುಕ್ತರಾಗಬೇಕೆಂಬುದು ಕವಿತೆಯ ಆಶಯ. ಕವಿಯ ಈ ಆಲೋಚನೆ ಬಹಳ ಸೂಕ್ತವಾದುದು.

'ಅವಸ್ಥೆ' ಕವನದಲ್ಲಿ ದುಡಿಯುವಂತಹ ಶ್ರಮ ಜೀವಿಯನ್ನು, ಬಡತನ, ಶೋಷಣೆ ತಾನೇ ತಾನಾಗಿ ಕಿತ್ತು ತಿಂದು ಕೆಳಗೆ ಬೀಳುವಂತೆ ಮಾಡುತ್ತದೆ. ಇದು ಶ್ರಮಿಕರ ಮೇಲಿನ ಶೋಷಣೆಯನ್ನು ಕುರಿತು ಹೇಳುತ್ತದೆ. ಇದಕ್ಕೆ ಕೊನೆಯಿಲ್ಲದಾಗಿ ದುಡಿದು ದುಡಿದು ನರ ನರಕ್ಕೆ ಗೆದ್ದಲು ಹಿಡಿಯುತ್ತದೆ.

'ಹೋರಾಟ' ಕವನದಲ್ಲಿ ಬದುಕಿನಲ್ಲಿ ವೈಯಕ್ತಿಕವಾಗಿ ನೊಂದಿರುವ ನೋವು ವ್ಯಕ್ತವಾಗಿದೆ. ಸುತ್ತ-ಮುತ್ತಲಿನ ಸಂಬಂಧಿಗಳು ಎಲ್ಲರೂ ವ್ಯಕಿಯನ್ನು ಹೀಗೆ ಇರಬೇಕೆಂಬ ನಿಯಮಗಳು ಹೇರಿ ಅವರನ್ನು ಅನಾಥವಾಗಿಸುತ್ತಾರೆ. ತನ್ನ ತನದ ದಾರಿಯಲ್ಲಿ ಹೋಗಲು ಬಿಡದೆ ದೈಹಿಕ ದೌರ್ಜನ್ಯ ಮಾಡುತ್ತಾರೆ. ಮರುಭೂಮಿಯ ಒಂಟೆಯಾಗಿ ತಮ್ಮದೇ ಆದ ದಾರಿಯಲ್ಲಿ ಹೊರಟಿರುವ ಕವಿಯ ನಿರಂತರ ಹೋರಾಟವನ್ನು ಇಲ್ಲಿ ಕಾಣಬಹುದು. ವೈಯಕ್ತಿಕ ಸಿದ್ಧಾಂತಗಳಲ್ಲಿ ಬದುಕುವಂತಹ ಜೀವನದಲ್ಲಿ ಅನುಭವಿಸಿದ ತೊಂದರೆಗಳನ್ನು ಈ ಕವಿತೆಯಲ್ಲಿ ಕಾಣಬಹುದು.

'ಚರಿತ್ರೆಯ ಸಂಗತಿ' ಈ ಕವನದಲ್ಲಿ ಪಾಳೆಗಾರ ತಂಗುದಾಣ, ಅರವಟ್ಟಿಗೆ ಇತ್ಯಾದಿ ಅಪಾರ ಕೆಲಸಗಳನ್ನು ಮಾಡಿ ಕಲ್ಲಿಗೊಂದು ಕಥೆ ತೊಡಿಸಿದನು. ಉಳ್ಳವರು-ಇಲ್ಲದವರು ಎಂಬ ಕಾರ್ಲಮಾರ್ಕ್ಸನ ವರ್ಗ ಸಂಘರ್ಷದ ಶೋಷಣೆಯನ್ನು ಇಲ್ಲಿ ಹೇಳಲಾಗಿದೆ. ಶ್ರಮಿಕರ ರಕ್ತದ ಓಕುಳಿಯು ಹಬ್ಬದ ರೀತಿಯಲ್ಲಿ ಎಷ್ಟೇ ಕ್ರೂರ ಶೋಷಣೆ ನಡೆದರೂ ಮುಂದೊಂದು ದಿನ ಬದಲಾವಣೆ ಸಿಗುತ್ತದೆ ಎಂಬುದು ಈ ಪದ್ಯದ ಆಶಯ. ಗರ್ಭಿಣಿಯ ಬಲಿ, ಕಲ್ಲು ದೇವರಿನ ಗೋಳುಕಥೆ, ಆಡಿನ ಹೊಟ್ಟೆ ಇವೆಲ್ಲವೂ ನೋವನ್ನು ಅನುಭವಿಸಿದೆ. ಅದನ್ನು ಪ್ರಕೃತಿಯ ಮರಮರದ ಎಲೆಗಳು ಹೇಳುತ್ತವೆ.ಹೊಸದೊಂದು ಬದಲಾವಣೆಯ ಕನಸು ಕಾಣುತ್ತಿರುವ ಬಯಕೆಯನ್ನು ಇಲ್ಲಿ ಕಾಣಬಹುದು:

"ಮರಮರದ ರೆಂಬೆಯಲಿ ಚಿಗುರೆಲೆಯ ಹೊಂಬಣ್ಣ
ಮೆಲ್ಲಮೆಲ್ಲನೆ ಗೋಣು ಕುಣಿಸುತ್ತದೆ"[೧]

ನವ್ಯ ಶೈಲಿಯ ನಂತರ ಬಂಡಾಯ ಚಳುವಳಿ ಪ್ರಾರಂಭವಾಗಿತ್ತು. ಆಗ ರಂಗಾರೆಡ್ಡಿಯವರು ಇಂತಹ ಬಂಡಾಯ ಚಳುವಳಿಯಲ್ಲಿ ಪಾಲ್ಗೊಳ್ಳುತ್ತಿದ್ದರು. ಹಾಡಿನ ಧಾಟಿಯಲ್ಲಿರುವ, ಶೋಷಣೆಯನ್ನು ಎತ್ತಿ ತೋರಿಸುವ ಹಾಗೂ ಜನಗಳನ್ನು ಪ್ರೇರೇಪಿಸುವಂತಹ ಪದ್ಯಗಳನ್ನು ಬರೆಯಲು ಪ್ರಾರಂಭಿಸಿದರು. ಅಂತಹ ಪದ್ಯಗಳಲ್ಲಿ 'ಕೆಂಪು ಭಾನು' ಒಂದಾಗಿದೆ. ದುಡಿವ ಜನಗಳ ಒಗ್ಗೂಡಿಕೆಯಿಂದ ಸಮಾಜದಲ್ಲಿ ಎಂತಹ ಬದಲಾವಣೆಯನ್ನು ಬೇಕಾದರೂ ತರಬಹುದು ಎಂಬುದಕ್ಕೆ ಈ ಕವನ ಸಾಕ್ಷಿಯಾಗಿದೆ.

"ದುಡಿವ ಜನ
ಒಂದೆ ಮನ
ಆಗ ಕಡಲು ಕುದಿವುದು
ಇಟ್ಟ ಹೆಜ್ಜೆ
ತೊಟ್ಟ ಗಜ್ಜೆ
ಧ್ವನಿಗೆ ಭೂಮಿ ಬಿರಿವುದು"[೨]

'ಬುರುಖದೊಳಗಿನ ಬಾಲೆ' ಎಂಬ ಕವನದ ನಂತರ ಹಾಡುಗಾರಿಕೆಯ ಮೂಲಕ ಜನರನ್ನು ಪ್ರೇರೇಪಿಸುವಂತ ಪದ್ಯಗಳು ಪ್ರಾರಂಭವಾಗುತ್ತವೆ. ಇಲ್ಲಿ ಬೇರೆ ರೀತಿಯ ಶೋಷಣೆಯನ್ನು

ಕಾಣಬಹುದು. ತುಂಬಾ ಚಿಕ್ಕ ವಯಸ್ಸಿನಲ್ಲಿ ಕನಸುಗಳನ್ನು ಕಂಡು ವಿದ್ಯೆಯನ್ನು ಕಲಿಯಬೇಕಾದ ಸಂಧರ್ಭದಲ್ಲಿ, ಆ ಹುಡುಗಿಯ ಆಸೆಗಳನ್ನು ಲೆಕ್ಕಿಸದೆ ಶಶಿಯಂತಹ ಮುಖವುಳ್ಳ ಅವಳನ್ನು ಮದುವೆ ಎಂಬ ಚೌಕಟ್ಟಿಗೆ ಒಳಪಡಿಸಿ, ಕತ್ತಲೆಗೆ ನೂಕಿದರು. ಅಂದರೆ ಮುಸ್ಲಿಂರು ಮದುವೆಯ ನಂತರ ಬುರ್ಕಾ ಧರಿಸುತ್ತಾರೆ. ಇದು ಮುಸ್ಲಿಂ ಹುಡುಗಿಯನ್ನು ಕುರಿತ ಕವಿತೆಯಾಗಿದ್ದು 'ಬುರ್ಕಾ'ಎಂಬ ಕತ್ತಲೆಯೊಳಗೆ ಸುಂದರವಾದ ಹುಡುಗಿಯನ್ನು, ಜೊತೆಗೆ ಆ ಹೆಣ್ಣಿನ ಆಸೆ ಆಕಾಂಕ್ಷೆಗಳನ್ನು ಮುರಿದು ಅದರಲ್ಲಿ ತುರುಕಿದರು ಎಂಬ ಭಾವನೆ ಇಲ್ಲಿ ವ್ಯಕ್ತವಾಗುತ್ತದೆ.

"ಸಸಿ ಮೊಗವ ಮುಚ್ಚಿದರು ವಾಸನೆಯ ಹಿಡಿದವರು
ಉಸಿರು ಕಟ್ಟಿಸಿ ಕತ್ತಲಿಗೆ ತುರುಕಿದರು
ಗಾಳಿ ಬೆಳಕನು ಕಂಡು ಹಾರಬಾರದು ಎಂದು
ಹಕ್ಕಿ ಪುಕ್ಕವ ತರಿದು ತುತ್ತೂರಿ ಊದಿದರು."[೩]

'ತಂಗಟೆ ಗಿಡ' ಕವನದಲ್ಲಿ ಎಲ್ಲಾ ಜನರಿಗೂ ಗೊತ್ತಿರುವ ಒಂದು ಸಾಮಾನ್ಯ ಗಿಡ ತಂಗಟೆ ಗಿಡ. ನಿರ್ಲಕ್ಷ ಮಾಡಿರುವ ಗಿಡದ ಬಗೆಗಿನ ಈ ಕವಿತೆಯು ಬಹಳ ವಿಶಿಷ್ಟವಾಗಿದೆ. ಇದು ಒಂದು ಪ್ರಕೃತಿ ಗೀತೆ. ಕನ್ನಡಸಾಹಿತ್ಯದಲ್ಲಿ ಇದು ಮೊಟ್ಟಮೊದಲ ಪದ್ಯವಾಗಿ ಜನಪ್ರಿಯತೆಗೊಂಡಿದೆ.

"ನಿನಗಿಲ್ಲ ಚಿಂತೆ
ಮುಡಿಗೇರೋ ಮಮತೆ
ಹತ್ತುವುದು ಬೇಡ ಕಳಸ
ದನ ಕಾಯೋ ಹುಡುಗ
ನುಡಿಸುವನು ಕೊಳಲ
ನಿನ್ನೊಡನೆ ಮಾಡಿ ಸರಸ"[೪]

ತಂಗಟೆಗಿಡ ತಲೆಗೆ ಮುಡಿಯಲು ಬಳಸುವುದಿಲ್ಲ, ಕಳಸಕ್ಕೂ ಬಳಸುವುದಿಲ್ಲ, ಆದರೆ ದನ ಕಾಯುವ ಹುಡುಗ ನುಡಿಸುವನು ಕೊಳಲನ್ನು ನಿನ್ನೊಡನೆ ಸರಸವಾಡುತ್ತಾ ನಲಿವನು. ಅದಕ್ಕೆ ಸರಿಸಾಟಿ ಯಾವುದೂ ಇಲ್ಲ ಎಂಬ ಭಾವ ಬಹಳ ಸೊಗಸಾಗಿದೆ. ಕೊಯ್ದು ತಂದು ಕೊಟ್ಟಿಗೆಯಲ್ಲಿ ಸೊಪ್ಪು ಹರಡಿ, ಎತ್ತುಗಳು ತುಳಿದು ಮತ್ತೆ ಸಗಣಿಯಲ್ಲಿ ಬೆರೆತು ಗದ್ದೆಯಲ್ಲಿ ಗೊಬ್ಬರವಾಗಿ ಜೀವ ಬೆರೆತು ಮತ್ತೆ ಪೈರಿನಲಿ

ಹೊಸ ಚಿಗುರಾಗಿ ನಲಿವೆ ತಂಗಟೆಗಿಡ ನೀನು ಶ್ರೇಷ್ಠ ಎಂಬಂತೆ ಕವಿಯ ಆ ವರ್ಣನೆ ಮನೋಹರವಾದುದು.

'ಮರೆಯಾದ ಸಂಗಾತಿ' ಇದು ವೈಯಕ್ತಿಕ ನೆಲೆಯ ಪದ್ಯ. ಕವಿಯು ಹೆಂಡತಿಯನ್ನು ಕಳೆದುಕೊಂಡ ವ್ಯಕ್ತಿಯ ನೋವನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. ಗಂಗಾ ಎನ್ನುವ ಹೆಣ್ಣು ಆ ವ್ಯಕ್ತಿಯ ಜೀವನದಲ್ಲಿ ಬಂದು ಅವರ ಜೀವನದಲ್ಲಿ ಬರಡಾದ ಎದೆಯಲ್ಲಿ ಚೆಲುವಿನ ಬಯಕೆಗಳ ತೆನೆಗಳನ್ನು ಬೆಳೆಯುವ ಆಸೆ ಕಾಣುವಂತಾಯಿತು. ಅಲ್ಲದೆ ಸಂಸಾರದಲ್ಲಿ, ಜೀವನದಲ್ಲಿ ಬೇಸರ ಕಳೆದು ಹೊಸರಾಗ ಮೂಡಿ ಆ ಹೊಸರಾಗದ ಹರುಷ ಭಾರವ ಹೊತ್ತು ಮಗುವಿಗೂ ಜನ್ಮ ನೀಡಿದಳು. ಅಂತಹ ಹೆಂಡತಿಯ ಕುರಿತು ಕಸ್ತೂರಿ ನೀನಿಲ್ಲದೆ ನಾನು ವಿರಹ ಪಡುತ್ತಿದ್ದೇನೆ. ಎಂಬ ಗಂಡನ ಮಾನಸಿಕ ಸಂಕಟದ ಒಂದು ಅದ್ಭುತ ಚಿತ್ರಣ ಇಲ್ಲಿ ಮೂಡಿ ಬಂದಿದೆ.

"ಬಡತನದ ಬೇಗೆಯಲ್ಲಿ ಮತ್ಸರದ ಸೀಗೆಯಲಿ
ಸತ್ತು ಬದುಕಿದ ಕಸ್ತೂರಿ ನೀನು
ನಿಂದೆ ಮಾತಲಿ ನೊಂದು ವಿರಹದುರಿಯಲಿ
ಬೆಂದು ಬದುಕಿ ಸತ್ತ ತಂಬೂರಿ ತಾನು"[೫]

'ಕಾದು ಕುಂತವರು' ಪದ್ಯದಲ್ಲಿ ದುಡಿಮೆಯನ್ನೆ ನಂಬಿದ ಜೀವಗಳು ರೈತರು. ನೆಲವನ್ನು ಬಗೆದು, ನೀರಿನ ಆಳಕೆ ಇಳಿದು ಹಸಿರನ್ನು ಬೆಳೆಯುವ ಉಸಿರು, ನಿಟ್ಟುಸಿರು ಬಿಟ್ಟ ಜನರು ಈ ರೈತರು. ಧಣಿಗಳ ಬೆತ್ತದ ಬಡಿತಕ್ಕೆ ಬೆನ್ನನ್ನು ನೀಡುತ್ತಾ ಶೋಷಣೆ ಅನುಭವಿಸುತ್ತಾ ರಕ್ತವನ್ನು ಹರಿಸಿ, ಹೂ ಅರಳಿಸುವ ಕೆಲಸವನ್ನು ಮಾಡುತ್ತಾರೆ. ಆದರೂ ಕೂಡ ಸುಖದಿಂದ ಕೂಡಿದ ಸುಂದರ ಕನಸ್ಸನ್ನು ಕಾಣುತ್ತಾ ಉಳುಮೆ ಮಾಡಲು ಭೂಮಿಯೇ ಸಿಗದೆ ನಲುಗಿ ಹೋದವರು ಈ ರೈತರು ಕಾದು ಕುಂತವರು.

"ಕತ್ತಲ ಕೋಣೆಯ ನಮ್ಮಯ ಬದುಕಿಗೆ
ಹಿತ್ತಲ ಗಿಡವಲ್ಲಿ ಅರಳಿದ ಮೊಗ್ಗಿಗೆ
ಬೆಳಗಿನ ಅರುಣನ ಉದಯವು ಇಲ್ಲದೆ
ಸೂಸಲಿಲ್ಲ ಕಂಪು! ಜೀವ
ಕಾಣಲಿಲ್ಲ ತಂಪು"[1]

ಬೀಸುವ ಗಾಳಿಯನ್ನು, ಹರಿಯುವ ನೀರನ್ನು ಕುಡಿದು, ಖಂಡವನ್ನು ತಿಂದು ಕೊಬ್ಬಿದ ಶೋಷಕರಿಗೆ, ಈ ಬಡಪಾಯಿಗಳ, ಶ್ರಮಜೀವಿಗಳ ಬಿಸಿ ಉಸಿರನ್ನು ತೋರಲು ಅಂದರೆ ಪ್ರಶ್ನೆಮಾಡಲು, ವಿರೋಧಿಸಲು ಸತತವಾಗಿ ಕಾಯುತ್ತಿರುವವರು ಈ ಕಾದುಕುಂತ ಜನರು.

'ನನ್ನೂರ ಹಾಡು' ಕವಿತೆಯಲ್ಲಿ ಕವಿಯ ಊರಿನಲ್ಲಿರುವ ಎಲ್ಲಾ ಹೆಂಗಸರು ಮತ್ತು ಗಂಡಸರು ತಮ್ಮ ಕೆಲಸಗಳನ್ನು ಮಾಡುತ್ತಲೇ ತಮ್ಮ ನೋವನ್ನು ಅಭಿವ್ಯಕ್ತ ಪಡಿಸುತ್ತಾರೆ. ಆ ನೋವನ್ನು ಪರಿಹರಿಸಲು ಯಾವ ನಾಯಕರು ಇರುವುದಿಲ್ಲ. ಆದರೂ ರಂಗೋಲಿ ಹಾಕುವುದು, ಪೈರು ನಾಟಿ ಮಾಡುವುದು, ಇತರೆ ಕೆಲಸಗಳಲ್ಲಿ ತೊಡಗಿರುತ್ತಾರೆ. ಎಲ್ಲೋ ಒಂದು ಬದಲಾವಣೆ ಬಯಸುತ್ತಾರೆ. ನವ್ಯ ದಾಟಿಯನ್ನು ಒಳಗೊಂಡ ಪದ್ಯ ಕ್ರಮ ಆರಂಭಿಸಿದರೂ ಆ ಪದ್ಯದ ಒಳಗಡೆ ಸಾಮಾಜಿಕ ವಿಷಮತೆಗಳನ್ನು ತೋರಿಸುವ ಮನೋಭಾವವಿದೆ. ಈ ಕವಿತೆಯಲ್ಲಿ ತನ್ನ ಊರಿನ ವರ್ಣನೆ, ಊರಿನ ಎಲ್ಲೆಗಳು, ಊರಿನ ಜನರನ್ನು ಕುರಿತು ವರ್ಣನೆ, ಜನರ ಕಷ್ಟ-ಸುಖಗಳನ್ನು ತಿಳಿಸುತ್ತದೆ. ಹೆಂಗಸರು ಮತ್ತು ಗಂಡಸರು ತಮ್ಮ ಶ್ರಮದ ಜೀತದಲ್ಲಿ ತೊಡಗಿದ್ದಾರೆ. ಮಕ್ಕಳಿಗೆ ಕಲಿಯಬೇಕೆನ್ನುವ ಆಸೆ ಆದರೆ ಅವರಿಗೆ ದನಕಾಯುವ ಕೆಲಸ. ಹಿಂದಿನ ಕಾಲದಿಂದ ಆಲದ ಮರದ ಹಾಗೆ ಜೀತ ಪದ್ಧತಿ ಬೇರು ಬಿಟ್ಟುಕೊಂಡಿದೆ. ಹಾಗಾಗಿ ಬದಲಾವಣೆ ಅವರಿಗೆ ಬೇಕಾಗಿದೆ ಇಂತಹ ಬದಲಾವಣೆಯನ್ನು ಬಯಸುವಂತಹ ಪದ್ಯ ಇದಾಗಿದೆ.

"ಮನೆಮನೆಯ ನರ ನರದಿ ಎದ್ದ ನೋವಿನ ಉರಿಗೆ
ಮೌನದಲಿ ಕುಳಿತಿರುವ ಮುದುಕಿಯೆಡೆಗೆ
ಜಂತೆ ಜಂತೆಗೆ ಕಟ್ಟಿರುವ ಜೇಡ ಬಲೆ ಕತ್ತಲೆಗೆ
ಕನ್ನವಿಕ್ಕುವ ಹೃದ ಬೆಳಕ ತರುವನು ಎಂದಿಗೆ"[2]

'ತಿಳಿವು' ಇದು ಒಂದು ವೈಜ್ಞಾನಿಕ ಆಲೋಚನೆ ಒಳಗೊಂಡ ಪದ್ಯವಾಗಿದೆ. ಮಳೆ, ಮೋಡಗಳು ಹೇಗೆ ಆಗುತ್ತವೆ ಎಂಬುದನ್ನು ಕವಿಯ ತಿಳಿವು ಕವಿತೆಯಲ್ಲಿ ಕಾಣಬಹುದು:

"ಗುಡುಗು ಮಿಂಚು ಸಿಡಿಲು
ಬರಲು ಬೇಕು ಕಡಲು
ಸೂರ್ಯ ಇದ್ದು ಸುಡಲು
ಆವಿಯಾಗಿ ಮೋಡದೊಡಲು"೮

ಮಳೆ ಬರಿಸಲು ಯಾವ ಶಾಸ್ತ್ರಗಳಿಂದಲೂ, ಯಾವ ಧಣಿಗಳಿಂದಲೂ ಸಾಧ್ಯವಿಲ್ಲ. ಬೆಟ್ಟ-ಗುಡ್ಡ, ಕಾಡು-ಮೇಡು ಹೆಚ್ಚಾಗಿದ್ದಾಗ ಮೋಡವೆಲ್ಲಾ ಮಳೆಯಾಗಿ ಸುರಿಯುವುದು ಭೂಮಿಗೆ. ವಿದ್ಯೆಯನ್ನು ಕಲಿತಾಗ ಮೌಢ್ಯ ಅಜ್ಞಾನ ಎಲ್ಲವೂ ತೊಲಗಿ ಹೋಗಿ ಅರಿವು, ಜ್ಞಾನ ಬಾಳಿನಲ್ಲಿ ಬರುವುದು. ಎಂಬ ಕವಿಯ ಭಾವ ಬಹಳ ವರ್ಣನೀಯವಾಗಿದೆ.

'ಮರಮರದ ಬಯಕೆ' ಕವಿತೆಯಲ್ಲಿ ಊರಿನ ಹಿರಿಯರ ಅಡಿಯಲ್ಲಿ ಎಲ್ಲವೂ ಅಡಗಿದೆ. ಏನೇ ಮಾಡಬೇಕಾದರೂ ಊರಿನ ಹಿರಿಯನ ಅನುಮತಿ ಬೇಕು. ಜನರು ಅವನಿಗೆ ಹೆದರಿ ಒಳಗಡೆಯೇ ಕುಂದಿ ಹೋಗುತ್ತಿದ್ದಾರೆ. ಕೂಸು ಹುಟ್ಟಿದರೂ, ಮದುವೆ ಮಾಡಿದರೂ, ಎಲ್ಲವೂ ಅವನ ಹುಬ್ಬಿನಡಿ. ಹಾಲು ಹೆಪ್ಪಾಗಲೂ ಕೂಡ ಗೌಡನ ಅನುಮತಿ ಬೇಕೆಂದರೆ ಜನಗಳ ಪರಿಸ್ಥಿತಿ ಎಷ್ಟು ಕ್ಲಿಷ್ಟಕರವಾಗಿದೆ ಎಂಬುದನ್ನು ಗಮನಿಸಬಹುದು. ಅದಷ್ಟೇ ಅಲ್ಲದೆ ಕಣ್ಣೇ ಕಿಟಕಿಯಾಗಿ, ಕಿವಿಯೇ ಗೋಡೆಯಾಗಿ ಜನರಿಗೆ ಕಾವಲು ಕಾಯುತ್ತಿದ್ದಾನೆ. ಆದರೆ ಗುಬ್ಬಿಯ ದನಿಗೆ, ಕೋಗಿಲೆಯ ಹಾಡಿಗೆ, ಮಾವು-ಬೇವು ತುಂಬಿದ ವಸಂತ ಕಾಲಕ್ಕೆ ಯಾವ ಅನುಮತಿಯೂ ಬೇಕಾಗಿಲ್ಲ. ಹಾಗೆಯೇ ಹಂಗುಮೀರಿ ಬೆಳೆಯುವ ತೆಂಗಿನಹಾಗೆ, ತಿರುಗಿ ನಿಲ್ಲು ಆಲದ ಬಿಳಲುಗಳ ಹಾಗೆ ಎಂಬ ಕವಿಯ ಬಂಡಾಯ ಧೋರಣೆಯ ಮನೋಭಾವವನ್ನು ಇಲ್ಲಿ ಕಾಣಬಹುದು:

"ನೀರು ಬೆಂಕಿ ಗಾಳಿ ಬೆಳಕು ಎಲ್ಲ ಜನರ ಸ್ವತ್ತು
ಹಿಂಸೆ ಕುಡಿಸಿ ನೋವ ತಿನಿಸಿ ಮೆರೆವ ದೊರೆಯು ಸತ್ತು
ಹುಟ್ಟಬೇಕು ಕೂಳೆಯಲ್ಲೂ ಹೃದಯವಿರುವ ಚಿಗುರು
ಬೆಳೆಯಬೇಕು ತೆನೆಯ ತುಂಬಿ ನಗು ನಗುವ ಪೈರು"೯

'ಬರಗಾಲದ ಹಾಡು' ಮಳೆಯಿಲ್ಲದಾಗಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಬರಗಾಲ. ಹಾಗಾಗಿ ಬಿತ್ತಿದ ಬೀಜಕ್ಕೆ ಗೆದ್ದಲು ಹತ್ತುವಂತಾಗಿದೆ. ಹರೆಯದ ಬಾಲೆಗೆ ಕಿಪಿಯೋಲೆ ಮಾಡಿಸಿ, ಒಸಗೆ ಹಾಕಲು ಕೂಡ ಸಾಧ್ಯವಾಗುತ್ತಿಲ್ಲ. ಹೊಂಗೆಯ ಮರದ ಗಂಡನ ಪ್ರೀತಿಯೂ ಕೂಡ ಇಲ್ಲದಾಗಿದೆ. ಎದೆಯಲ್ಲಿ ತುಂಬಿದ್ದ ಪ್ರೀತಿ ಮರುಭೂಮಿ ನೀರಿನ ಹಾಗೆ, ನಗೆ ಹೂವು ಸುರುಟಿ ಹೋಗುತ್ತಿದೆ. ಮೋಡಕ್ಕೆ ಮುಖಮಾಡಿ ಮಳೆಗಾಗಿ ಕಾದು, ಕಣ್ಣುಗಳು ಸೀದು, ಚರ್ಮವೆಲ್ಲವೂ ಸುಕ್ಕು ಹಿಡಿದಿದೆ. ಇಲ್ಲಿ ಬರಗಾಲದ ಸಂಧರ್ಭದಲ್ಲಿ ಜನರು ಮಳೆಗಾಗಿ ಪರಿತಪಿಸುವ ಸನ್ನಿವೇಶವನ್ನು ಕಾಣಬಹುದು:

"ಸಿಟ್ಯಾಕೋ ಮಳೆರಾಯ ಕಟ್ಟೀಗೆ ಸುರಿಯೋ
ಹಸು ಮಂದಿ ಉಳಿಸಯ್ಯೋ
ಒಡ್ಡೊಡೆದು ಹರಿಯಲಿ ಕಳೆ ಕೊಳೆ ತೊಲಗಲಿ
ನಸುಗೆಂಪು ಮೂಡಲಯ್ಯೋ"[೧೦]

'ನಸುಗೆಂಪು' ಬದಲಾವಣೆಯನ್ನು ಪಡೆಯುವಂತಹ ಆಶಯವನ್ನು ಸೂಚಿಸುತ್ತದೆ. ಕ್ರಾಂತಿಕಾರಿ ಮನೋಭಾವನೆಯನ್ನು ವ್ಯಕ್ತಪಡಿಸುತ್ತದೆ.

ಮುದುಕಿ ಹೇಳಿದ್ದು, ಅತೃಪ್ತರು, ಸತ್ತಗೆಳೆಯನಿಗೆ, ಒಂದು ದೋಣಿಯ ಬದುಕು, ಒಕ್ಕಲೆಬ್ಬಿಸೋ ಆಟ, ಕೆರೆತುಂಬ ಕಣ್ಣೀರು, ಜಂಬೂ ಸವಾರಿ, ಮುಂತಾದ ಕವನಗಳು ಜಾನಪದದ ಲಯ ಗೇಯತೆಗಳನ್ನು ಬಳಸಿಕೊಳ್ಳುತ್ತಲೇ ತೀರಾ ಸಾಮಾನ್ಯ ಸಂಗತಿಯನ್ನೂ ತುಂಬಾ ವಿಶೇಷವಾಗಿ ಬರೆಯುವ ರಂಗಾರೆಡ್ಡಿಯವರ ಸಾಹಿತ್ಯ ಬಹಳ ಉತ್ತಮವಾಗಿದ್ದು ಕವನಗಳಲ್ಲಿ ಹರಳುಗಟ್ಟಿದ ನೋವು, ವಿಷಾದ, ಜೀವನ ಪ್ರೀತಿ ಎದ್ದು ಕಾಣುತ್ತದೆ.

ಕವನ ಸಂಕಲನವಾಗಿ ಹೊರ ಬರದ ಹಾಗೂ ಪತ್ರಿಕೆಗಳಲ್ಲಿ ಪ್ರಕಟಗೊಂಡ ಕೆಲವು ರಂಗಾರೆಡ್ಡಿಯವರ ಕವನಗಳು ಬಹಳ ಸುಂದರವಾಗಿವೆ. ಅವುಗಳೆಂದರೆ 'ಭೂಮಿ ತೂಕದ ಹೆಣ್ಣು', 'ಮನಕ್ಕೊಂದು ಮದು ಮಾತು', 'ಒಂದು ಮನವಿ ಹಾಡು', 'ಇಟ್ಟಿಗೆಯ ಸ್ವಗತ', 'ಸಾಮರಸ್ಯ ಗೀತೆ', 'ಬೋಳು ಬಯಲಿನಲೊಂದು ಒಂಟಿಮರ' ಮುಂತಾದವುಗಳು.

'ಭೂಮಿ ತೂಕದ ಹೆಣ್ಣು' ಕವನದಲ್ಲಿ ಕೆಳಗಿನ ಕೇರಿಯ ಹುಡುಗನನ್ನು ಪ್ರೀತಿಸಿದ ಹುಡುಗಿಯನ್ನು, ಅವಳ ಹತ್ತಿರದ ಸಂಬಂಧಿಯು ಜಾತಿಯನ್ನು ಕುರಿತು ಪ್ರಶ್ನಿಸುವ ಸಂದರ್ಭವು ಸಂಭಾಷಣೆಯ ರೀತಿಯಲ್ಲಿ ಸೊಗಸಾಗಿ ಮೂಡಿಬಂದಿದೆ. ಈ ಪದ್ಯಭಾಗವು ಮೇಲು–ಕೀಳು ಎಂಬ ತಾರತಮ್ಯದ ಜಾತಿವ್ಯವಸ್ಥೆಯನ್ನು ಕುರಿತು ಹೇಳುತ್ತದೆ. ಈ ಕವಿತೆಯ ಸಾಲುಗಳು ಈ ರೀತಿ ಇವೆ.

"ತೊಗರೀಯ ಹೊಲದಾಗೆ ಹೊಗರು ತುಂಬಿದ ಹುಡುಗ
ಕುಶಲ ಕೇಳುತ ನಿಂತ ಚೆಲುವನ್ಯಾರೆ
ಹುಣ್ಣಿಮೆ ಚಂದಿರನ ಬಣ್ಣವ ನಾಚಿಸುವ
ಮೈಕಾಂತಿ ಚೆಲ್ಲುತ ನಿಂತೋನ್ಯಾರೆ.
ಆ ಚೆಲುವ ನನಗೆಣೆಯ ಕೆಳಗೀನ ಕೇರ್ಯಾವ
ನಡೆದಾರೆ ಬೀದ್ಯಲ್ಲ ನಗುತಾವೆ
ಸೂರ್ಯಕಾಂತಿ ಚೆಲುವ ನಿತ್ಯ ಕನಸಲಿ ಬರುವ
ನಕ್ಕಾರೆ ಸುಳಿಮಿಂಚು ಸೂಸ್ಯಾವೆ"[೧೧]

'ಮನಕ್ಕೊಂದು ಮೆದುಮಾತು' ಈ ಕವಿತೆಯಲ್ಲಿ ಕವಿಯು ತನ್ನ ಮನಸ್ಸಿಗೆ ತಾನೇ ಹೇಳಿಕೊಳ್ಳುವ ಮಾತುಗಳ ಕವನವಾಗಿ ಹೊರಹೊಮ್ಮಿವೆ. ನಶ್ವರ ಬದುಕಿನಲ್ಲಿ ವಿಶಾಲವಾದ ಮನಸ್ಸನ್ನು ಒಳಗೊಂಡು ಪ್ರಕೃತಿಯಂತೆ ಎಲ್ಲೆ ಮೀರಿ ಬೆಳೆಯಬೇಕು ಎಂಬುದು ಕವಿಯ ಆಶಯ. ಈ ಕವನ ಸಾಲುಗಳು

"ಕಲಿ ಮನವೆ ಕಲಿ
ರವೆಯಷ್ಟಾದರೂ ಕಲಿ
ಉದುರಿ ಹೋದರು ಕಲಿಗಳೆಲ್ಲರು
ಕಟ್ಟುವುದು ಬೇಡ ಕೋಟೆ
ತಿಳಿವು ಅನಂತ, ಪ್ರಕೃತಿಯಂತೆ
ಸಿಗುವುದು ನಿಮಗೆ ಬೊಗಸೆಯಷ್ಟೆ"[೧೨]

'ಒಂದು ಮನವಿ ಹಾಡು' ಒಬ್ಬ ಗರ್ಭಿಣಿ ಹೆಣ್ಣಿನ ಮೇಲೆ ನಡೆದ ಕ್ರೌರ್ಯ ಹಿಂಸೆಯನ್ನು ಕುರಿತು ಏ ಹೃದಯವೇ ನೀನು ಮಾಡಿದ್ದು ಸರಿಯೇ ಎಂದು ಕೇಳುವ ಭಾವನೆಯು ಇದರಲ್ಲಿ ಮೂಡಿಬಂದಿದೆ.

"ಏ ಹೃದಯಾ ಏ ಹೃದಯಾ
ಮಸಿ ಬಳಿವುದು ದೇಶಕೆ
ಸರಿ ಇದೆಯಾ?
ಒಡೆದಾ ಕೆರೆಗೆ ಕಟ್ಟೆಯ ಕಟ್ಟಿ
ಬಾಳ್ವೆಯ ಬೆಳಕ ಹಚ್ಚುವೆಯಾ?[೧೩]

೩.೨ ಸೊಲ್ಲು ಸೊಲ್ಲೆಲ್ಲ ಅಪರಂಜಿ

ಈ ಕೃತಿಯು ಡಾ.ರಂಗಾರೆಡ್ಡಿಯವರ ಮೊದಲ ವಿಮರ್ಶಾಸಂಕಲನ. ಇದು ಒಂದು ಕೃತಿಯನ್ನು ಕುರಿತ ವಿಮರ್ಶೆಯಲ್ಲ, ಬದಲಿಗೆ ಆ ಕಾಲಘಟ್ಟದಲ್ಲಿನ ಒಟ್ಟು ಕೃತಿ ಸಮುದಾಯವನ್ನು ಪರಿಗಣಿಸಿ ಆಯ್ಕೆ ಮಾಡಿಕೊಂಡ ಕೆಲವು ವಿಚಾರಗಳನ್ನು ಕುರಿತು ಮಂಡಿಸಲಾಗಿದೆ. ಅದರಲ್ಲಿ ಮೊದಲ ಮೂರು ಲೇಖನಗಳು ಮಧ್ಯಕಾಲೀನ ಸಾಹಿತ್ಯವನ್ನು ಕುರಿತ ಲೇಖನಗಳಾಗಿವೆ. ದೊಡ್ಡಮನೆ, ಒಡಲಾಳ ಮತ್ತು ಕಾಯಕಯೋಗಿಗಳನ್ನು ಕುರಿತ ಲೇಖನಗಳನ್ನು ಬಿಟ್ಟರೆ ಉಳಿದೆಲ್ಲಾ ಲೇಖನಗಳು ಕೇವಲ ಒಂದು ಕೃತಿಗೆ ಸಂಬಂಧಿಸಿದಂತೆ ಇಲ್ಲ. ಚಾರ್ಲಿಚಾಪ್ಲಿನ್ ಅವರ 'ದಿ ಗ್ರೇಟ್ ಡಿಕ್ಟೇಟರ್' ಎಂಬ ಸಿನಿಮಾದ ಕೊನೆಯಲ್ಲಿ ಯುದ್ಧವಿರೋಧಿಯಾದ ಒಂದು ಧೀರ್ಘವಾದ ಭಾಷಣದ ಅನುವಾದವನ್ನು 'ಸಮುದಾಯ ವಾರ್ತಾಪತ್ರ'ಕ್ಕಾಗಿ ಮಾಡಿದುದನ್ನು ಈ ಕೃತಿಯಲ್ಲಿ ಒಂದು ಲೇಖನವಾಗಿ ಸೇರಿಸಲಾಗಿದೆ. ಮಧ್ಯಕಾಲೀನ ಸಾಹಿತ್ಯದಿಂದ ಆರಂಭಿಸಿ ನವೋದಯ, ನವ್ಯ, ದಲಿತ, ಬಂಡಾಯ ಈ ಎಲ್ಲಾ ಕಾಲಘಟ್ಟಗಳ ಬಗ್ಗೆಯೂ ಇಲ್ಲಿನ ಲೇಖನಗಳಿವೆ. ೧೯೭೯ ರಲ್ಲಿ ಬರೆದ 'ದೊಡ್ಡಮನೆ: ಒಟ್ಟು ನೋಟ'

ಲೇಖನದಲ್ಲಿ ಮಾತ್ರ ಸಾಮುದಾಯಿಕ ಹಿತಚಿಂತನೆಗಿಂತ ವೈಯಕ್ತಿಕ ಹಿತಾಸಕ್ತಿಗಳೂ ಕೂಡ ಮುಖ್ಯ ಎಂಬುದರ ಕಡೆ ಗಮವವನ್ನು ಹರಿಸಿದೆ. ಚರ್ಚೆ ಮಾಡದಿರುವ ಲೇಖಕರನ್ನು ಚರ್ಚೆಗೆ ಎತ್ತಿಕೊಂಡು ಅವರ ಸಾಧನೆ-ಸಿದ್ಧಿಗಳನ್ನು ದಾಖಲಿಸುವ ಅಂಶವನ್ನು 'ಕಾಯಕಯೋಗಿ-ಒಂದು ಅವಲೋಕನ' ಲೇಖನದಲ್ಲಿ ಗಮನಿಸಬಹುದು.

ಸಾಹಿತ್ಯವೆಂಬುದು ಬರೀ ಸಾಹಿತ್ಯವಲ್ಲ. ಕವಿ, ಕಾಲ ಮತ್ತು ಕಲೆಯ ಜೊತೆಗಿನ ಗುದ್ದಾಟ ಎಂಬ ಒಂದು ತಾತ್ವಿಕ ಚಿಂತನೆಯು ಈ ಲೇಖನಗಳಲ್ಲಿ ಕಂಡುಬರುತ್ತದೆ. ಹಾಗೆಯೇ ಆಯಾ ಕಾಲಘಟ್ಟದ ರಾಜಕೀಯ-ಆರ್ಥಿಕ ಏರುಪೇರುಗಳು ಸಾಹಿತ್ಯವನ್ನು ಪ್ರಭಾವಿಸಿರುವುದು ಕಂಡುಬರುತ್ತದೆ. ಮಧ್ಯಕಾಲೀನ ಸಾಹಿತ್ಯಕ್ಕೆ ಸಂಬಂಧಿಸಂತೆ ಮೊದಲ ಮೂರು ಲೇಖನಗಳನ್ನು ಕಾಣಬಹುದು. ಅದರಲ್ಲಿ ಮೊದಲ ಲೇಖನದಲ್ಲಿ ಯುದ್ಧ ಮತ್ತು ಶಾಂತಿಯ ಪರಿಕಲ್ಪನೆ ಹೇಗೆ ಬೆಳೆದು ಬಂದಿತು? ಎಂಬ ವಿಚಾರದ ಬಗ್ಗೆ ಡಾ.ರಂಗಾರೆಡ್ಡಿಯವರು ಗಮನ ಹರಿಸಿದ್ದಾರೆ. ಆದಿವಾಸಿ ಮನುಷ್ಯರಲ್ಲಿ ಕ್ರಮೇಣವಾಗಿ ಸಾಮಾಜಿಕ ಜೀವನದಲ್ಲಿ ಸಣ್ಣಪುಟ್ಟ ಜಗಳಗಳು ಹುಟ್ಟಿಕೊಂಡು ನಂತರ ಅವುಗಳು ಹೋರಾಟಗಳಾಗಿ, ಹೋರಾಟಗಳು ಯುದ್ಧಗಳಾಗಿ ಮಾರ್ಪಟ್ಟಿವೆ. ಸಮಾಜದಲ್ಲಿ ಹುಟ್ಟಿದ ಹೊಸ ಕಲ್ಪನೆಗಳಾದ ರಾಜ್ಯ, ಅಧಿಕಾರ, ಸೈನ್ಯ ಮೊದಲಾದವು ಒಳ್ಳೆಯ ಉದ್ದೇಶಗಳಿಗಾಗಿ ಬಳಕೆಯಾಗುತ್ತಿದ್ದವು. ಆದರೆ ಅವೆಲ್ಲವೂ ದೂರ ಸರಿದು ಯುದ್ಧ ಪ್ರಬಲ ಶಕ್ತಿಯಾಗಿ ಪರಿವರ್ತನೆಯಾಗಿದೆ. ಯುದ್ಧಗಳಲ್ಲಿ ಪ್ರಮುಖವಾಗಿ ಎರಡು ವಿಧಗಳನ್ನು ರಂಗಾರೆಡ್ಡಿಯವರು ಗುರ್ತಿಸಿದ್ದಾರೆ. ಒಂದು ನ್ಯಾಯಯುತವಾದ ಯುದ್ಧ, ಎರಡನೇಯದು ಅನ್ಯಾಯುತ ಯುದ್ಧ. ನ್ಯಾಯಯುತವಾದ ಯುದ್ಧದಲ್ಲಿ ಆತ್ಮರಕ್ಷಣೆ ಮಾಡಿಕೊಳ್ಳಲು ಯುದ್ಧ ಮಾಡುವುದು. ಅನ್ಯಾಯುತ ಯುದ್ಧದಲ್ಲಿ ಕೊಳ್ಳೆ ಹೊಡೆಯುವ, ಅಧಿಪತ್ಯ ಸ್ಥಾಪಿಸುವ, ಆಕ್ರಮಣಕಾರಿ ಉದ್ದೇಶವನ್ನು ಹೊಂದಿರುತ್ತದೆ.

ಮಧ್ಯಕಾಲೀನ ಸಾಹಿತ್ಯ ಚರಿತ್ರೆಯಲ್ಲಿ ಯಾವುದೇ ಪ್ರಕಾರದ ಸಾಹಿತ್ಯದ ಕೃತಿಗಳನ್ನು ನೋಡಿದಾಗ, ವಚನಯುಗದ ನಂತರದಲ್ಲಿ ಶಾಂತಿಯ ಹುಡುಕಾಟ ಮುಖ್ಯವಾಗಿ ಕಂಡುಬರುತ್ತದೆ. ಆದರೂ ಯುದ್ಧ ಪ್ರಸಂಗಗಳು ಕೂಡ ಚಾರಿತ್ರಿಕ ಹಾಗೂ ಪೌರಾಣಿಕ ಕಾವ್ಯಗಳಲ್ಲಿ ಕಾಣಬಹುದು. 'ರಾಮನಾಥ ಚರಿತೆ'ಯಲ್ಲಿ ಕುಮಾರರಾಮನು ಯಾವ ಉದ್ದೇಶದಿಂದ ಯುದ್ಧ ಮಾಡಿದರೂ, ಕವಿಯ

ಪ್ರಕಾರ ವೀರನಾಗಬಹುದು. ಹಾಗೆಯೇ ಎಲ್ಲಾ ಯುದ್ಧಗಳಲ್ಲಿ ಗೆಲುವನ್ನು ಸಾಧಿಸಬಹುದು, ಆದರೆ ಆ ಯುದ್ಧದ ಪ್ರಭಾವದಿಂದ ಎರಡೂ ಕಡೆಯ ಸೈನ್ಯದಲ್ಲಿ ಸಾವು–ನೋವುಗಳು ಉಂಟಾಗುತ್ತದೆ. ಸಾಮ್ರಾಜ್ಯ ಶಾಹಿ ವಿಸ್ತರಣಾವಾದದ ವಿರುದ್ಧವೇ ಯುದ್ಧವನ್ನು ಮಾಡಿದ್ದು, ರಕ್ಷಣಾತ್ಮಕ ಯುದ್ಧದ ಭಾವನೆಯನ್ನು ಒಳಗೊಂಡಿದೆ. ಆದರೂ ಕೂಡ ಯುದ್ಧದಿಂದ ಇಡೀ ರಾಜ್ಯ ಅಸ್ಥವ್ಯಸ್ಥಗೊಳ್ಳುತ್ತದೆ. ಹಲವಾರು ಅನಾವುತಗಳು ಉಂಟಾಗುತ್ತವೆ. ಕವಿಗಳು ಯುದ್ಧಕ್ಕೆ ಒತ್ತು ನೀಡುವರು. ಯುದ್ಧ ಎನ್ನುವುದು ಹಿಂಸೆಯ ಮೂಲ ಬೀಜ, ಅದನ್ನು ಕಿತ್ತೆಸೆಯಬೇಕು ಎಂಬುದರ ಕಡೆ ಗಮನವನ್ನು ಹರಿಸಲಿಲ್ಲ ಎಂದು ರಂಗಾರೆಡ್ಡಿಯವರು ಹೇಳಿದ್ದಾರೆ.

ಮಧ್ಯಕಾಲೀನ ಸಂಧರ್ಭದಲ್ಲಿ ನಿಜವಾಗಲೂ ಆತ್ಮ ರಕ್ಷಣೆಗೆಗಾಗಿ ಯುದ್ಧಮಾಡಿದ ನಿಂಬಸಾಮಂತ ಎಂಬ ವ್ಯಕ್ತಿಯ ಬಗ್ಗೆ ಕುರಿತು ರಂಗಾರೆಡ್ಡಿಯವರು ಈ ಲೇಖನದಲ್ಲಿ ಚರ್ಚಿಸಿದ್ದಾರೆ. ಪಾರ್ಶ್ವ ಕವಿಯ 'ನಿಂಬ ಸಾಮಂತ ಚರಿತ್ರೆ' ಯಲ್ಲಿ ಬಹಳ ವಿಚಿತ್ರವಾದ ಒಂದು ಸಮನ್ವಯವನ್ನು ಕಾಣಬಹುದಾಗಿದೆ. ನಿಂಬಸಾಮಂತ ಯುದ್ಧದಲ್ಲಿ ಧರ್ಮದ ಆಚರಣೆಯನ್ನು ಬಳಸಿ, ಶತ್ರು ರಾಜನನ್ನು ಬದಲಾಯಿಸುವ ಮಟ್ಟಕ್ಕೆ ಕೆಲಸ ಮಾಡುತ್ತಾನೆ.

"ಒಡಲಿಗೊಡವೆಯನಿತ್ತಜೀವಿತ! ದೊಡಯನವರಸದೊಳಖಿಗೆ ಬೈಚಿ!

ಟ್ಟೊಡಲು ಸ್ಥಿರವಾಗಿಹುದೆ ನೋಡೆಯದಾವ ಕಾಲದೊಳು

ಒಡಲ ನೊಡೆಯಂಗಿತ್ತು ಜೀವಿತ! ದೊಡವೆಯನುಧರ್ಮದೊಳು ಬೈಚಿ

ಟ್ಟಿಡುವ ಸಮ್ಯಕ್ತ್ವರಿಗಹುದು ಸ್ವರ್ಗಾಪವರ್ಗವದು"[೧೪]

ಈ ಪದ್ಯಭಾಗದಲ್ಲಿ ಯುದ್ಧಕ್ಕೆ ಹೋದ ನಿಂಬಸಾಮಂತ ಅಲ್ಲಿ ಬಿಜ್ಜಳನ ಆನೆಯನ್ನು ಸಾಯಿಸಿ ತಾನೂ ಅಸು ನೀಗುತ್ತಾನೆ. ಇದರಿಂದ ಹೆದರಿದ ಬಿಜ್ಜಳ ಯುದ್ಧ ನಿಲ್ಲಿಸಿ ನಿಂಬ ಸಾಮಂತನ ಶಕ್ತಿ ಸಾಮರ್ಥ್ಯಗಳನ್ನು ಹೊಗಳುತ್ತಾನೆ ಎಂಬ ಅಂಶವು ತಿಳಿದು ಬರುತ್ತದೆ. ಕುಮಾರವ್ಯಾಸನ 'ಗದುಗಿನ ಭಾರತ' ಮಧ್ಯಕಾಲೀನ ಸಾಹಿತ್ಯದ ಪೌರಾಣಿಕ ವಸ್ತುವಿನ ಕಾವ್ಯಗಳಲ್ಲಿ ಒಂದಾಗಿದ್ದು, ಅದರಲ್ಲಿಯೂ ಕೂಡ ಯುದ್ಧದ ದುರಂತದ ಬಗ್ಗೆ ರಂಗಾರೆಡ್ಡಿಯವರು ಹಲವಾರು ಅಂಶಗಳನ್ನು ವಿಶ್ಲೇಷಿಸಿದ್ದಾರೆ.

ಯುದ್ಧದ ಪರಿಣಾಮ ಎಷ್ಟು ಕ್ರೂರವಾದುದು ಎಂಬ ಅಂಶವನ್ನು ಈ ಸಾಲುಗಳಲ್ಲಿ ಗಮನಿಸಬಹುದು. "ಸಮರದ ನಂತರದ ಚಿತ್ರಣವನ್ನು ನಾರಣಪ್ಪ ಅದ್ಭುತವಾಗಿ ವರ್ಣಿಸಿದ್ದಾರೆ. ಉಡಿದ ತೊಡೆ, ಸಿಡಿದ ಕಣ್ಣು, ಕೆಡೆದ ಮುಂಡ, ತುಂಡರಿಸಿದ ತೋಳುಗಳು, ಛಿದ್ರ ಛಿದ್ರವಾದ ದೇಹಗಳು, ಇವುಗಳಿಂದ ಕೂಡಿದ ರಣರಂಗದಲ್ಲಿ ಬಿದ್ದಿದ್ದ ಹೆಣಗಳನ್ನು ಹಕ್ಕಿ ಪಕ್ಷಿಗಳು ಹಬ್ಬದ ರೀತಿಯಲ್ಲಿ ಊಟ ಮಾಡುತ್ತಿರುವ ಚಿತ್ರಣವಿದೆ. ಇತ್ಯಾದಿ"[೧೫]

ಈ ರೀತಿಯಾಗಿ ಯುದ್ಧದ ಪ್ರಾರಂಭ, ಯುದ್ಧದ ಮುನ್ನಡೆ, ಯುದ್ಧದ ಅಂತ್ಯಗಳಲ್ಲಿಯೂ ಆಗುವ ಭಯಂಕರ ಕೃತ್ಯಗಳ ವರ್ಣನೆಯನ್ನು ಮಧ್ಯಕಾಲೀನ ಸಾಹಿತ್ಯ ಕೃತಿಗಳಲ್ಲಿ ಕಾಣಬಹುದು. ಹಾಗೆಯೇ ಯುದ್ಧಗಳ ವರ್ಣನೆ ಬಹಳ ವಿಶಿಷ್ಟವಾಗಿ ಮೂಡಿಬಂದಿದೆ. ಹಾಗಾಗಿ ಯುದ್ಧದಿಂದ ಏನೇ ಪ್ರಭಾವ, ಪರಿಣಾಮಗಳು ಬೀರಿದರೂ ತೊಂದರೆಗೆ ಒಳಗಾಗುವುದು ಅಥವಾ ರಾಜ-ರಾಜರ ಮಧ್ಯೆ ಯುದ್ಧ ನೆಡೆದರೂ ಅನ್ಯಾಯಕ್ಕೆ ಒಳಗಾಗುವುದು ಜನರು ಮಾತ್ರ. ಹೀಗೆ 'ರಾಮನಾಥ ಚರಿತ್ರೆ' 'ಗದುಗಿನ ಭಾರತ' ಮಾತ್ರವಲ್ಲದೇ ಲಕ್ಷೀಶನ 'ಜೈಮಿನಿ ಭಾರತ', ಷಡಕ್ಷರ ದೇವನ-'ಕಿರಾತಾರ್ಜುನ ವಿಜಯ' ಹರಿಹರನ-'ಗಿರಿಜಾ ಕಲ್ಯಾಣ' ಮುಂತಾದ ಕೃತಿಗಳಲ್ಲಿ ಯುದ್ಧಗಳ ವರ್ಣನೆಯನ್ನು ಕುರಿತು ಈ ಕೃತಿಯಲ್ಲಿ ಉತ್ತಮ ವಿಮರ್ಶೆಯನ್ನು ಮಾಡಿದ್ದಾರೆ.

ವಚನಸಾಹಿತ್ಯದಲ್ಲಿ ಭಕ್ತಿ ಪಂಥದ ಮೂಲಕ ರಾಜ ವಿರೋಧಿ ಹಾಗೂ ಯುದ್ಧ ವಿರೋಧಿ ನಿಲುವನ್ನು ಖಂಡಿಸಿದ್ದಾರೆ. ಇದರಿಂದ ಶಾಂತಿ ನೆಲೆಯನ್ನು ಗುರ್ತಿಸುವಲ್ಲಿ ವಚನ ಸಾಹಿತ್ಯವು ಪ್ರಮುಖ ಪಾತ್ರವನ್ನು ವಹಿಸಿದೆ. ಮಧ್ಯಕಾಲೀನ ಸಾಹಿತ್ಯವನ್ನು ಗಮನಿಸಿದಾಗ ಶಾಂತಿ ಭಾವನೆಯನ್ನು, ಅಹಿಂಸೆ ಭಾವನೆಯನ್ನು ಸಾರುವ ಅಂಶಗಳನ್ನು ಹೊಂದಿದ ಕೃತಿಗಳನ್ನು ಕಾಣಬಹುದು. ಜನ್ನನ 'ಯಶೋಧರ ಚರಿತ್ರೆ'ಯಲ್ಲಿ ಮಾರಿದತ್ತ ರಾಜನು ಅಭಯಮತಿ ಮತ್ತು ಅಭಯರುಚಿಯನ್ನು ಕೊಲ್ಲದೆ ಬಿಡುವ ಪ್ರಸಂಗ ಹಾಗೂ ಅಷ್ಟಾವಂಕನಿಗೆ ಮನಸೋತ ಅಮೃತಮತಿಯನ್ನು, ಯಶೋಮತಿಯು ಕ್ಷಮಿಸುವಂತಹ ಅಹಿಂಸಾ ಗುಣವು ಬಹಳ ಪ್ರಮುಖವಾಗಿದೆ. ಅದೇ ರೀತಿಯಾಗಿ ಹರಿಹರನ ರಗಳೆಯಲ್ಲಿ ಶಿವ ಚೆನ್ನನ ಭಕ್ತಿಯನ್ನು ಮೆಚ್ಚಿದ. ರಾಜನು ಕೂಡ ಅದನ್ನು ಮೆಚ್ಚುವಂತೆ ಮಾಡಿ ಭಕ್ತಿಯ ಮುಂದೆ ರಾಜತ್ವವು ಕ್ಷುದ್ರವಾಗಿ ಕಾಣುವಂತೆ ಕವಿ ಮಾಡಿದ್ದಾನೆ. ಮಧ್ಯಕಾಲೀನ ಸಾಹಿತ್ಯದಲ್ಲಿ ವಚನ ಸಾಹಿತ್ಯದ ಭಕ್ತಿಮಾರ್ಗವು

ಮುಕ್ತ ಮತ್ತು ಶಾಂತಿಯುತ ವಾತಾವರಣದ ಸೃಷ್ಟಿಯಲ್ಲಿ ಪ್ರಮುಖ ಪಾತ್ರ ವಹಿಸಿದೆಯೆಂದೇ ಹೇಳಬಹುದು. ಹೀಗೆ ರಂಗಾರೆಡ್ಡಿಯವರು ಮಧ್ಯಕಾಲೀನ ಸಾಹಿತ್ಯವನ್ನು ಆಧಾರವಾಗಿಟ್ಟುಕೊಂಡು ಯುದ್ಧ ಪ್ರವೃತ್ತಿ ಮತ್ತು ಶಾಂತಿ ಎಂಬ ವಿಚಾರಗಳ ಬಗ್ಗೆ ಕೃತಿಗಳಲ್ಲಿನ ವಿಷಯಕ್ಕೆ ಅನುಗುಣವಾಗಿ ವಿಶ್ಲೇಷಣೆ ಮಾಡಿರುವುದನ್ನು ಕಾಣಬಹುದು.

'ಮಧ್ಯಕಾಲೀನ ಸಾಹಿತ್ಯದಲ್ಲಿ ಜಾನಪದೀಯ ಲಯ-ಆಶಯ' ಎಂಬ ಲೇಖನದಲ್ಲಿ ಮಧ್ಯಕಾಲೀನ ಸಾಹಿತ್ಯದ ಪ್ರಮುಖವಾದ ಒಂದು ವಿಷಯವನ್ನು ಅರಿಯಬಹುದು. ಪ್ರಾಚೀನ ಸಾಹಿತ್ಯಕ್ಕಿಂತ ಮಧ್ಯಕಾಲೀನ ಸಾಹಿತ್ಯದಲ್ಲೇ ಜಾನಪದೀಯ ಭಾಷೆಯ ಬಳಕೆ, ಸಾಹಿತ್ಯದ ಬಳಕೆ, ಲಯ ಹಾಗೂ ಹಾಡಿನ ಧಾಟಿ ಹೆಚ್ಚು ಪ್ರಭಾವವನ್ನು ಬೀರಿದೆ. ಏಕೆಂದರೆ ಹಿಂದೆ ಸಾಹಿತ್ಯವೆನ್ನುವುದು ಪಂಡಿತಪಾಮರರಿಗೆ ಸೀಮಿತವಾಗಿದ್ದಿತು. ಆದರೆ ಹನ್ನೆರಡನೇ ಶತಮಾನದ ಸರಳ ಸಾಹಿತ್ಯವು ಎಲ್ಲರ ಜನಮನದಲ್ಲಿ ನೆಲೆಸಲು ಸಾಹಿತ್ಯದಲ್ಲಿನ ಲಯದ ಆಶಯ ಕೂಡ ಪ್ರಮುಖ ಪಾತ್ರ ವಹಿಸಿದೆ ಎಂದು ಹೇಳಬಹುದು. ವಚನಗಳಲ್ಲಿ ಪದ್ಯದ ಧಾಟಿ ಲಯಬದ್ಧವಾಗಿ ಕೂಡಿದ್ದು ಅದನ್ನು ತ್ರಿಪದಿ, ಷಟ್ಪದಿ, ಸಾಂಗತ್ಯ, ರಗಳೆಯಲ್ಲಿ ಕಾಣಬಹುದು. ವಚನಗಳಲ್ಲಿ ಲಯವನ್ನು ಕಾಣುವ ಕೆಲವು ಸಾಲುಗಳನ್ನು ಗಮನಿಸಬಹುದು.

"ಒಡಲುಗೊಂಡವ ಹಸಿವ ಒಡಲು ಗೊಂಡವ ಹುಸಿವ
ಒಡಲುಗೊಂಡವನೆಂದು ನೀನೆನ್ನ ಜಡಿದೊಮ್ಮೆ ನುಡಿಯದಿರಾ
ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ ರಾಮನಾಥ(ಲಯ)"
"ಭೂಮಿ ನಿನ್ನದಲ್ಲ ಹೇಮ ನಿನ್ನದಲ್ಲ"(ಸಮತೂಕ)"[೧೬]

"ಕಲ್ಲು ನಾಗರ ಕಂಡರೆ ಹಾಲನೆರೆಯೆಂಬರು"(ಸಂಪ್ರದಾಯ)
"ಮಡಕೆ ದೈವ ಮೊರದೈವ ಬೀದಿಯ ಕಲ್ಲು ದೈವ
ಹನಿಗೆ ದೈವ ಬಿಲ್ಲನಾರಿ ದೈವ ಕಾಣಿರೋ"(ಆಚರಣೆಗಳು)

"ಎನ್ನ ಕಾಯವ ದಂಡಿಗೆಯ ಮಾಡಯ್ಯ
ಎನ್ನ ಸಿರವ ಸೋರೆಯ ಮಾಡಯ್ಯಾ
ಎನ್ನ ನರವ ತಂತಿಯ ಮಾಡಯ್ಯಾ
ಎನ್ನ ಬೆರಳ ಕಡ್ಡಿಯ ಮಾಡಯ್ಯಾ"(ಜನಪದ ಕಾವ್ಯ)

"ತಾಳಮಾನ ಸರಿಸವನರಿಯೆ
ಓಜೆ ಬಜಾವಣೆಯ ಲೆಕ್ಕವನರಿಯೆ
ಅಮೃತಗಣ ದೇವಗಣನರಿಯೆ
ಕೂಡಲ ಸಂಗಮದೇವಾ ನಿನಗೆ ಕೇಡಿಲ್ಲವಾಗಿ
ಅನು ಒಲಿದಂತೆ ಹಾಡುವೆ"(ಅಶಾಸ್ತ್ರೀಯ ಸಂಗೀತ)"[೧೭]

ಈ ಮೇಲಿನ ಪದ್ಯಗಳನ್ನು ಗಮನಿಸಿದಾಗ ವಚನ ಸಾಹಿತ್ಯದಲ್ಲಿ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಉದ್ದೇಶವೋ ಅಥವಾ ಅಲ್ಲಿನ ಆಚರಣೆ, ಅಶಾಸ್ತ್ರೀಯ ಸಂಗೀತ, ಮುಂತಾದವುಗಳ ಕುರಿತು ವಚನಗಳು ರಚನೆಯಾಗಿರಬಹುದು. ಆದರೆ ಇವೆಲ್ಲವುಗಳಿಗಿಂತ ಮುಖ್ಯವಾಗಿ ಅಲ್ಲಿನ ಸರಳ ಭಾಷೆಯನ್ನು ಒಳಗೊಂಡ ಎಲ್ಲ ಸಾಮಾನ್ಯರಿಗೂ ಎಟುಕುವ ರೀತಿಯಲ್ಲಿ ಬಳಕೆಯಾಗಿರುವ ಹಾಡಿನ ಧಾಟಿ, ಪದ್ಯದ ಲಯ ಇಲ್ಲಿ ಪ್ರಮುಖವಾಗಿರುವಂತಹದ್ದು. ಹೀಗೆ ಕೇವಲ ವಚನ ಸಾಹಿತ್ಯದಲ್ಲಿ ಮಾತ್ರವಲ್ಲದೆ ಮಧ್ಯಕಾಲೀನ ಸಾಹಿತ್ಯದಲ್ಲಿ ರಚನೆಯಾದ ಕೃತಿಗಳನ್ನು ಗಮನಿಸಿದಾಗ 'ಲಯ' ಎಷ್ಟು ಪ್ರಭಾವವನ್ನು ಬೀರಿದೆ ಎಂಬುದನ್ನು ರಂಗಾರೆಡ್ಡಿಯವರು ತೋರಿಸಿ ಕೊಟ್ಟಿದ್ದಾರೆ.

'ಮಧ್ಯಕಾಲೀನ ಸಾಹಿತ್ಯದಲ್ಲಿ ಅಸ್ಪೃಶ್ಯತೆ' ಒಂದು ಸಾಮಾಜಿಕ ಸಂವಾದ ಎಂಬ ಲೇಖನದಲ್ಲಿ ಭಾರತೀಯ ಸಮಾಜದಲ್ಲಿ ಹಲವಾರು ಜಾತಿಪದ್ಧತಿಗಳು ಹುಟ್ಟಿಕೊಂಡು ಆ ಜಾತಿ ವ್ಯವಸ್ಥೆಯ ಒಳಗಡೆ 'ಅಸ್ಪೃಶ್ಯತೆ' ಎನ್ನುವ ಒಂದು ಅನಿಷ್ಟ ಪದ್ಧತಿ ಬೆಳೆದು ಹೆಮ್ಮರವಾಗಿ ನಿಂತಿದೆ. ಇಂತಹ ಅನಿಷ್ಟ ಪದ್ಧತಿಯನ್ನು ಮಧ್ಯಕಾಲೀನ ಸಾಹಿತ್ಯದಲ್ಲಿ ಗುರುತಿಸುವ ಒಂದು ಕೆಲಸವನ್ನು ರಂಗಾರೆಡ್ಡಿಯವರು ಮಾಡಿದ್ದಾರೆ. ಜಾತಿಪದ್ಧತಿಯನ್ನು ಹೋಗಲಾಡಿಸಲು ವಚನ ಸಾಹಿತ್ಯವು ಮಧ್ಯಕಾಲೀನ ಯುಗದಲ್ಲಿ

ಪ್ರಮುಖ ಪ್ರಯತ್ನವನ್ನು ಪಟ್ಟಿದೆ. ಏಕೆಂದರೆ ವಚನ ಯುಗದಲ್ಲಿ ಲಿಂಗಧಾರಣೆ, ಅಕ್ಷರದಾಸೋಹ, ಅಂತರ್ಜಾತೀಯ ವಿವಾಹ ಮುಂತಾದುವುಗಳನ್ನು ಜಾರಿಗೆ ತಂದು ಅಸ್ಪೃಶ್ಯತಾ ನಿವಾರಣೆಯಲ್ಲಿ ವಚನ ಸಾಹಿತ್ಯವು ಪ್ರಮುಖವಾದ ದಿಟ್ಟ ಹೆಜ್ಜೆಗಳನ್ನು ಇಟ್ಟಿದೆ. ಆದರೂ ಸಹ ಸಫಲವಾಗಿಲ್ಲ ಎಂಬುದು ಎಲ್ಲರಿಗೂ ತಿಳಿದಂತಹ ವಿಚಾರವಾಗಿದೆ. ಇದಕ್ಕೆ ಸಂಬಂಧಿಸಿದಂತೆ ಅಂಬಿಗರ ಚೌಡಯ್ಯನ ಸಾಲುಗಳನ್ನು ಇಲ್ಲಿ ಗಮನಿಸಬಹುದು.

"ಕಷ್ಟನ ಮನೆಯಲ್ಲಿ ಸೃಷ್ಟಿಗೀಶ್ವರನುಂಬಾಗ
ಎತ್ತ ಹೋದವೋ ನಿಮ್ಮ ಶಾಸ್ತ್ರಂಗಳು?
ಕೆತ್ತ ಮುಚ್ಚಳು ಬೇಡಂಗೆ ತೆರೆವಾಗ
ಇಕ್ಕಿದ ಜನ್ನಿವಾರ ಬೀಯಲಾರವು
ಮುಕ್ಕಳಿಸಿದ ನೀರ ತಂದೆರೆದಡೆ ಎತ್ತಲಿದ್ದವು ನಿಮ್ಮ ವೇದಂಗಳು?
ನಿಮ್ಮ ದುಃಖ ಬೇಡೆಂದಾತ ಅಂಬಿಗ ಚೌಡಯ್ಯ"[೧೮]

ಒಬ್ಬ ಸಾಮಾನ್ಯ ಅಂತ್ಯಜನ ಮನೆಯಲ್ಲಿ ಶಿವ ಉಂಡನೆಂದರೆ ಯಾವ ಶಾಸ್ತ್ರಗಳು ಇಲ್ಲಿ ಲೆಕ್ಕವೇ ಇಲ್ಲ. ಜಾತಿ ಎನ್ನುವುದು ಮಾನವನೇ ಸೃಷ್ಟಿಸಿರುವಂತದು. ಮಾನವೀಯ ಮೌಲ್ಯಗಳನ್ನು ಆಚರಿಸುವುದೇ ನಿಜವಾದ ಧರ್ಮ ಎಂದು ಅಂಬಿಗರ ಚೌಡಯ್ಯ ಹೇಳಿದ್ದಾನೆ. ಹರಿಹರನ ರಗಳೆಯಲ್ಲಿ ಗಮನಿಸಿದಾಗ ಮಾದರ ಜಾತಿಗೆ ಸೇರಿದ ಚೆನ್ನನ ಮನೆಯಲ್ಲಿ ಶಿವನು ಬಂದು ಉಣ್ಣುತ್ತಾನೆ. ಇಲ್ಲಿ ಭಕ್ತಿಯ ಮುಂದೆ ಯಾವ ಜಾತಿಯೂ ಲೆಕ್ಕವಿಲ್ಲ ಎಂಬುದನ್ನು ತಿಳಿಯಬಹುದು.

"ಹಾಡನೊಲಿದಾಲಿಸಿದ ಕಿವಿಗೆ ಹೊಲೆಯಿಲ್ಲ ಮಾ
ತಾಡಿ ಹೊಗಳಿದ ಬಾಯ್ಗೆ ಹೊಲೆಯಿಲ್ಲ ರೂಪ ನೆರೆ
ನೋಡಿದ ವಿಲೋಚನೆ ಹೊಲೆಯಿಲ್ಲ ಮೆಯ್ ಮುಡಿಗಳಿಂ
ಸುಳಿವ ತಂಗಾಳಿಯಿಂ
ತುಡಿವ ಸುಗಂಧಮಂ ವಾಸಿಸಿದ ನಾಸಿಕಕೆ
ನಾಡೆ ಹೊಲೆಯಿಲ್ಲ ಸೋಂಕಿಗೆ ಹೊಲೆಯುಂಟಾಯ್ತೆ
ಕೂಡಿರ್ದಪಂಚೇಂದ್ರಿಯಂಗಳೊಳು
ನಾಲ್ಕಧಮವೊಂದಧಿಕವೇ ಎಂದರು"[೧೯]

ರಂಗಾರೆಡ್ಡಿಯವರು ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ ಗಾನರಾಣಿಯರ ಪ್ರಸಂಗದ ಸಂಧರ್ಭದಲ್ಲಿ ಹೊಲತಿಯರು ಕೇಳುವ ಪ್ರಶ್ನೆಗಳಲ್ಲಿ ಅಸ್ಪೃಶ್ಯತೆಯ ಅಂಶವನ್ನು ಗುರುತಿಸಿದ್ದಾರೆ.

"ರಾಘವಾಂಕನದು ಸಾಂಪ್ರದಾಯಿಕವಾದ ಜಾತಿ ಬದ್ಧ ದೃಷ್ಟಿ. ಅವನದು ಕೇವಲ ತೋರಿಕೆಯ ಉದಾರ ಧೋರಣೆ ಮಾತ್ರ ಭಕ್ತನೂ ಆದ ಹರಿಹರನು ಅಸ್ಪೃಶ್ಯರನ್ನು ತನ್ನ ಎರಡೂ ಕೈಗಳಲ್ಲಿ ಬಾಚಿ ತಬ್ಬಿಕೊಂಡಿದ್ದಾನೆ. ಬುದ್ಧಿ ಜೀವಿಯಾದ ರಾಘವಾಂಕನು ಅವರನ್ನು ದೂರವೇ ನಿಲ್ಲಿಸಿದ್ದಾನೆ"[೨೦] ಎಂಬ ಚಿದಾನಂದಮೂರ್ತಿಯವರ ಹೇಳಿಕೆಯನ್ನು ರಂಗಾರೆಡ್ಡಿಯವರು ನಯವಾಗಿ ತಿರಸ್ಕರಿಸಿದ್ದಾರೆ. ಹೀಗೆ ಮಧ್ಯಕಾಲೀನ ಸಾಹಿತ್ಯದಲ್ಲಿ ಇನ್ನೂ ಹಲವಾರು ಕೃತಿಗಳನ್ನು ಗಮನಿಸುತ್ತಾ ಅಸ್ಪೃಶ್ಯತೆಯ ಬಗ್ಗೆ ಈ ಲೇಖನದಲ್ಲಿ ಒಂದು ಚಿತ್ರಣವನ್ನು ಮೂಡಿಸುವ ಮೂಲಕ ಅಸ್ಪೃಶ್ಯತೆಯನ್ನು ಸಂಪೂರ್ಣವಾಗಿ ರಂಗಾರೆಡ್ಡಿಯವರು ಕೂಡ ವಿರೋಧಿಸುತ್ತಾರೆ.

'ದೊಡ್ಡಮನೆ:ಒಟ್ಟುನೋಟ' ಲೇಖನವು ನಾಗೇಗೌಡರು ಬರೆದಿರುವ 'ದೊಡ್ಡಮನೆ' ಕಾದಂಬರಿಯ ಬಗೆಗಿನ ವಿಮರ್ಶಾ ಲೇಖನವಾಗಿದೆ. 'ದೊಡ್ಡಮನೆ' ಕಾದಂಬರಿಯು ದೊಡ್ಡಸ್ತಿಕೆಯನ್ನು ತೋರಿಸುವ ಕಾದಂಬರಿಯಾಗಿದ್ದು, ಲಿಂಗೇಗೌಡ ಇದರ ನಾಯಕನಾಗಿರುತ್ತಾನೆ. ಗೌಡಳಿಕೆಯನ್ನು ಹೇಗೆಲ್ಲಾ ಸಮರ್ಥಿಸಿಕೊಳ್ಳುತ್ತಾರೆ ಎಂಬುದನ್ನು ಕಾಣುತ್ತಾ ಹೋಗಬಹುದು. ಸಮಾಜದಲ್ಲಿ ಅವಿಭಕ್ತ ಕುಟುಂಬವು ವಿಭಕ್ತ ಕುಟುಂಬವಾಗುವುದು ಸರ್ವೇ ಸಾಮಾನ್ಯ. ಆದರೆ ಲಿಂಗೇಗೌಡನು 'ಮನೆಹೊಡೆಯಿತು' ಎಂಬ ಕಾರಣಕ್ಕೆ ಕೊರಗುವುದು ಸೂಕ್ತವೆನಿಸುವುದಿಲ್ಲ. ಏಕೆಂದರೆ ಬದಲಾವಣೆಗೆ ತಕ್ಕಂತೆ ಹೊಂದಿಕೊಳ್ಳಬೇಕಾಗಿರುವುದು ಮನುಷ್ಯನ ಸಹಜಗುಣ. ದೊಡ್ಡಮನೆ ಕಾದಂಬರಿಯ ಲೇಖಕರಾದ ನಾಗೇಗೌಡರು ಲಿಂಗೇಗೌಡನ ಪರವಾಗಿ ನಿಂತು ಯೋಚಿಸುವುದರಿಂದ, ಸಮಾನತೆ ಕಾಣಲು ಸಾಧ್ಯವಾಗಿಲ್ಲ. ಹಾಗೆಯೇ ಲಿಂಗೇಗೌಡನು ಮನೆದುರಂತದ ಬಗ್ಗೆ ಕಂಡ ಕನಸನ್ನು ಮೊದಲೇ ಪ್ರಸ್ತಾಪಿಸಿರುವುದರಿಂದ, ಕೊನೆಯವರೆಗೂ ಈ ಕಾದಂಬರಿಯ ಸಹೃದಯನಲ್ಲಿ ಕುತೂಹಲವನ್ನು ಉಳಿಸುವುದಿಲ್ಲ. ಇವೆಲ್ಲದ್ದಕ್ಕಿಂತ ಮುಖ್ಯವಾದ ಅಂಶವೆಂದರೆ ಲಿಂಗೇಗೌಡನ ಪರವಾಗಿ ನಿಂತು ಲೇಖಕರು ಯೋಚಿಸಿರುವುದರಿಂದ ನಾಗೇಗೌಡರಲ್ಲಿ 'ನಿಷ್ಪಕ್ಷಪಾತತೆ ಇಲ್ಲ' ಎಂದು ರಂಗಾರೆಡ್ಡಿಯವರು ಹೇಳುವ ಮೂಲಕ ಆ ಕಾದಂಬರಿಯ ಆಳ, ವಿಸ್ತಾರಗಳನ್ನು ಕುರಿತು ವಿಮರ್ಶೆ ಮಾಡಿದ್ದಾರೆ.

'ದೇವನೂರರ ಒಡಲಾಳ: ಮತ್ತೊಂದು ನೋಟ' ಎಂಬ ಲೇಖನದಲ್ಲಿ ದೇವನೂರರ ಒಡಲಾಳ ಕೃತಿಯನ್ನು ಕುರಿತು ಚರ್ಚಿಸಿದ್ದಾರೆ. ಮೊದಲನೆಯದಾಗಿ ಸಮಾಜದಲ್ಲಿ ಕಾಡುವ ಜಾತಿವ್ಯವಸ್ಥೆಯಿಂದ ಕೂಡಿದ ದಲಿತರ ಮೇಲಿನ ದೌರ್ಜನ್ಯ ಮತ್ತು ಶೋಷಣೆಯನ್ನು ಕಾಣಬಹುದು. ಈ ಕೃತಿಯಲ್ಲಿ ಸಾಕಮ್ಮ ಕುಟುಂಬದವರು ಲೇಖಕರು ಹೇಳುವಷ್ಟು ತೀರ ಕೆಳ ಹಂತದವರಲ್ಲ ಎಂಬ ಅಭಿಪ್ರಾಯವನ್ನು ರಂಗಾರೆಡ್ಡಿಯವರು ವ್ಯಕ್ತಪಡಿಸಿದ್ದಾರೆ. ಇಲ್ಲಿ ಕಾಣುವ ಹಸಿವು, ಕಾಡಿಸುವ ಹಾಗೂ ಓದುಗರ ಕರುಳು ಕೊರೆಯುವ ಸನ್ನಿವೇಶ ಮೂಡಿಸದೆ ಸರ್ವೇಸಾಮಾನ್ಯವಾಗಿ ಕಂಡು ಬಂದಿದೆ. ಇದಕ್ಕಿಂತ ಹೆಚ್ಚಿನ ಹೀನಾಯ ಸ್ಥಿತಿಯಲ್ಲಿರುವ ಜನರ ಜೀವನ ಕಣ್ಮುಂದೆ ಇರುವಾಗ ಅದು ಅಷ್ಟು ಪರಿಣಾಮಕಾರಿಯಾದುದಲ್ಲ ಎಂಬ ನಿಲುವನ್ನು ರಂಗಾರೆಡ್ಡಿಯವರು ವ್ಯಕ್ತಪಡಿಸಿದ್ದಾರೆ. ಸಾಕಮ್ಮ ಮತ್ತು ಕಾಳಕ್ಕ ಪಾತ್ರಗಳ ನಡುವಿನ ಸಂಭಾಷಣೆಯಲ್ಲಿ ಸ್ವಲ್ಪ ಹಸಿಟ್ಟು ಇದ್ದರೆ ಕೊಡಿ, ತಿನ್ನುವುದಕ್ಕೆ ಏನಾದರೂ ಇದ್ದರೆ ಕೊಡಿ ನನ್ನ ಗಂಡ ಹಸಿವನ್ನು ತಾಳಲಾರದೆ ಮಲಗಿದ್ದಾನೆ. ಎಂದು ಕೇಳುವಿಕೆಯಲ್ಲಿ ನಿಜ ಪರಿಸ್ಥಿತಿ ಒಪ್ಪಿಕೊಳ್ಳದೆ 'ಹುಸಿ ಪ್ರತಿಷ್ಠೆ' ತೋರಿಸುವ ಅಂಶವನ್ನು ಕಾಣಬಹುದು. ಎಂದು ರಂಗಾರೆಡ್ಡಿಯವರು ಹೇಳಿದ್ದಾರೆ. ಹೀಗೆ ಕೃತಿಯಲ್ಲಿ ತುಂಬಾ ಶಕ್ತಿಯುತವಾದ ಪ್ರತಿಭಟನೆ ಪ್ರಕಟವಾಗಬೇಕಾಗಿದ್ದ ಸಂಧರ್ಭದಲ್ಲಿ ಅದನ್ನು ದುರ್ಬಲಗೊಳಿಸಿರುವುದು, ಭೀಕರವಾದ ಹಸಿವಿನ ಸಂಕಟದ ಸತ್ಯಾಂಶವನ್ನು ಮರೆಮಾಚಿರುವುದು ದೇವನೂರರ ಆಲೋಚನೆಯ ಹಾದಿಯನ್ನು ಸೂಚಿಸುತ್ತದೆ. ಹಾಗೆಯೇ ಸುಮ್ಮನೆ ಹೊಗಳುವ ಹೊಗಳುಭಟ್ಟರು ಇಂತಹ ಪ್ರಭಾವಿ ಲೇಖಕರನ್ನು ದಿಕ್ಕು ತಪ್ಪಿಸುವ ಹಾದಿಯನ್ನು ಮಾಡುತ್ತಾರೆ. ಎಂಬ ನಿಲುವನ್ನು ಹೇಳಿರುವ ರಂಗಾರೆಡ್ಡಿಯವರ ಮಾತಿನಲ್ಲಿ ನೇರನುಡಿ, ಸತ್ಯಾಂಶವಿರುವುದನ್ನು ಗಮನಿಸಬಹುದು.

'ನವೋದಯ ಸಾಹಿತ್ಯದಲ್ಲಿ ನಿಸರ್ಗ ಮತ್ತು ಭಾವ ಸಂಬಂಧದ ಸ್ವರೂಪ' ಎಂಬ ಲೇಖನದಲ್ಲಿ ರಂಗಾರೆಡ್ಡಿಯವರು ನಿಸರ್ಗದಲ್ಲಿ ಮನುಷ್ಯನ ಪಾತ್ರವನ್ನು ಕುರಿತು ಹೇಳಿದ್ದಾರೆ. ನಿಸರ್ಗದಲ್ಲಿ ಮನುಷ್ಯ ಒಂದು ಶಿಶು ಇದ್ದ ಹಾಗೆ. ನಿಸರ್ಗದ ಬದಲಾವಣೆಯಲ್ಲಿ ಮಾನವನ ಸಂಬಂಧ ಪರಸ್ಪರ ಅನ್ಯೋನ್ಯವಾದುದು ಎಂದಿದ್ದಾರೆ. ಮನುಷ್ಯನಲ್ಲಿ ಸ್ಥಿತ್ಯಂತರ ಪ್ರಜ್ಞೆ ಬೆಳೆದು ಪ್ರಕೃತಿಯನ್ನು ತನ್ನ ಸಾಧನೆಗೆ ಬಳಸಿಕೊಂಡು ತನ್ನ ಸ್ವಃತ ಆಸ್ತಿಯಾಗಿ ಮಾಡಿಕೊಂಡು ಬಿಡುತ್ತಾನೆ. ಹೀಗೆ ಮನುಷ್ಯ ಆರಂಭದ

ಹಂತದಲ್ಲಿ ನಿಸರ್ಗದ ಒಡನಾಡಿಯಾಗಿದ್ದು, ನಂತರದ ದಿನಗಳಲ್ಲಿ ಭೋಗ ವಸ್ತುವಾಗಿ ತುಂಡಾಗಿದೆ ಎಂಬ ಅಂಶವನ್ನು ಕಾಣಬಹುದು.

"ಇಲಿಯು ಮನೆಯ ಸಾರೋದ ಕಂಡೆ
ಬೆಕ್ಕು ರೊಟ್ಟಿ ಸುಡುವುದ ಕಂಡೆ
ನಾಯಿರಾಜನ ಕಂಡೆವಯ್ಯ ಎಣಿಕೆ ಮಾಡುವುದ..."[೨೧]

ರಂಗಾರೆಡ್ಡಿಯವರು ಆರಂಭದ ಹಂತದ ನಿಸರ್ಗ ಮಾನವನ ಒಡನಾಟವನ್ನು ಈ ಜನಪದ ಗೀತೆಯ ವಿಶ್ಲೇಷಣೆಯಿಂದ ಸ್ಪಷ್ಟಪಡಿಸಿದ್ದಾರೆ. ಇಲ್ಲಿ ಪ್ರಾಣಿಗಳು ಪರಸ್ಪರ ವೈರುಧ್ಯ ಸಂಬಂಧವನ್ನು ಹೊಂದಿದವುಗಳಾದರೂ ಅನ್ಯೋನ್ಯದಿಂದ ಸಹಬಾಳ್ವೆ ಮಾಡುತ್ತವೆ ಎಂಬದನ್ನು ಇಲ್ಲಿ ಗಮನಿಸಬಹುದು. ಆದರೆ ಮನುಷ್ಯ ಮನುಷ್ಯರಲ್ಲಿ ಇಂತಹ ಸಂಬಂಧ ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗುವುದನ್ನು ನಾವು ಗಮನಿಸಬೇಕಾದ ಅಂಶವಾಗಿದೆ.

'ಕಾಯಕಯೋಗಿ: ಒಂದು ಅವಲೋಕನ' ಎಂಬ ಲೇಖನವು ರಾಘವಾಂಕ ರಚಿಸಿರುವ ಸಿದ್ಧರಾಮ ಚಾರಿತ್ರ್ಯವನ್ನು ಆಧರಿಸಿ ಲಕ್ಕಪ್ಪ ಗೌಡರು ಕಾಯಕಯೋಗಿ ಎಂಬ ನಾಟಕವನ್ನು ರಚಿಸಿದ್ದಾರೆ. ಲಕ್ಕಪ್ಪ ಗೌಡರು ನಾಟಕದಲ್ಲಿ ಸಿದ್ಧರಾಮನ ಜನಪರ ವ್ಯಕ್ತಿತ್ವವನ್ನು, ಅವನ ಕಾಯಕ ನಿಷ್ಠೆಯನ್ನು ಎದ್ದು ಕಾಣುವಂತೆ ಚಿತ್ರಿಸಿದ್ದಾರೆ. ಹಾಗೇ ಶಿವನೇ ಸಿದ್ಧರಾಮನಿಗೆ ಲಿಂಗದೀಕ್ಷೆ ನೀಡುವ ಸನ್ನಿವೇಶಗಳನ್ನು ನಾಟಕೀಯ ದೃಶ್ಯಗಳನ್ನು ಕಟ್ಟುವುದರಲ್ಲಿ ಯಶಸ್ವಿಯಾಗಿದ್ದಾರೆ. ಆದರೆ ಕರ್ಣದೇವ ವಂಶ ಪರಂಪರೆಯಿಂದ ಅಧಿಕಾರ ಸ್ವೀಕರಿಸಿದ್ದಾನೆ. ಈ ಸಂಧರ್ಭದಲ್ಲಿ ಸಿದ್ಧರಾಮನ ವರ್ತನೆಗಳು ವಂಶ ಪರಂಪರೆಯ ಅಧಿಕಾರ, ಜನಪರ ಪದವಿಯ ಮುಂದೆ ನಿಸತ್ವವೆನಿಸುತ್ತದೆ. ಎಂದು ರಂಗಾರೆಡ್ಡಿಯವರು 'ಕಾಯಕಯೋಗಿ' ನಾಟಕದ ಬಗ್ಗೆ ವಿಮರ್ಶಾತ್ಮಕವಾಗಿ ತಮ್ಮ ಅಭಿಪ್ರಾಯ ವ್ಯಕ್ತ ಪಡಿಸುತ್ತಿರುವುದನ್ನು ಈ ಕೃತಿಯ ಅಧ್ಯಯನದ ಮೂಲಕ ಗಮನಿಸಬಹುದು.

ಹೀಗೆ ರಂಗಾರೆಡ್ಡಿಯವರು 'ಸೊಲ್ಲು ಸೊಲ್ಲೆಲ್ಲ ಅಪರಂಜಿ' ಎಂಬ ವಿಮರ್ಶಾಕೃತಿಯಲ್ಲಿ ಹಲವಾರು ಹೊಸ ವಿಚಾರಗಳನ್ನು ಕುರಿತು ವಿಭಿನ್ನ ಆಲೋಚನೆಗಳ ಮೂಲಕ, ಲೇಖನಗಳಲ್ಲಿ ತಮ್ಮ

ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದು ಅವುಗಳ ಅಧ್ಯಯನದಿಂದ ಹೊಸ ವಿಚಾರಗಳ ತಿಳಿವು ನಮಗಾಗುತ್ತದೆ.

೩.೩ ಶ್ರೀ ಶ್ರೀ

ಶ್ರೀ ಶ್ರೀ ಎಂಬುವರು ತೆಲುಗಿನಲ್ಲಿ ಒಬ್ಬ ಶ್ರೇಷ್ಠ ಕವಿ. ಇವರು ಸಂಸ್ಕೃತದ ಓಜಸ್ಸನ್ನು ಅಚ್ಚ ತೆಲುಗಿನ ರಭಸಕ್ಕೆ ಮೇಳೈಸಿ ತೆಲುಗು ಕಾವ್ಯಕ್ಕೆ ಅಪೂರ್ವ ಶೋಭೆ ತಂದು ಕೊಟ್ಟಿದ್ದಾರೆ. ಇಂತಹ ಕವಿಯ ಬಗ್ಗೆ ರಂಗಾರೆಡ್ಡಿಯವರು ಶ್ರೀಶ್ರೀ ಎಂಬ ಪುಸ್ತಕದಲ್ಲಿ ಹಿಡಿದಿಟ್ಟಿದ್ದಾರೆ. ಶ್ರೀಶ್ರೀ ರವರ ಸಾಹಿತ್ಯ ಯಾವಾಗಲೂ ನಿರುದ್ದೇಶದಿಂದ ಕೂಡಿದ್ದು, ಕಲ್ಪನಾಲೋಕದಲ್ಲಿ ವಿಹರಿಸುವುದು. ಎಂಬ ಅಮೂರ್ತ ಚಿಂತನೆಗಳನ್ನು ಬುಡಮೇಲು ಮಾಡಿ ಸಾಹಿತ್ಯಕ್ಕೊಂದು ಖಚಿತವಾದ ಉದ್ದೇಶವಿದೆ, ಅದು ಶೂನ್ಯದಿಂದ ಸೃಷ್ಟಿಯಾದುದಲ್ಲ. ಬದುಕುವ ಪರಿಸರವನ್ನು ಉತ್ತಮವಾಗಿಡಲು ಸಾಹಿತ್ಯವು ಶ್ರಮಿಸಬೇಕು ಎಂಬುದನ್ನು ಸಾಧಿಸಿ ತೋರಿಸಿದಂತಹ ಕೀರ್ತಿ ಶ್ರೀಶ್ರೀ ರವರದು.

ಶ್ರೀಶ್ರೀ ರವರು ಮೊದಲಿಗೆ ಭಾವಕವಿಯಾಗಿ, ಅಭ್ಯುದಯ ಕವಿಯಾಗಿ, ಅನಂತರ ವಿಪ್ಲವ ಕವಿಯಾಗಿ ಕವಿತೆಗೆ ಪ್ರಜೆಗಳ ಮಧ್ಯೆ ಗೌರವ ಸ್ಥಾನ ತಂದುಕೊಟ್ಟಿದ್ದಾರೆ. ಕವಿತೆಗೆ ಸಂಬಂಧಿಸಿದ ಎಲ್ಲಾ ಒಳ್ಳೆಯದನ್ನು ಸ್ವೀಕರಿಸುತ್ತಾ ಚಿಕ್ಕವರಿಂದಲೂ ಕಲಿಯುತ್ತಾ, ಪ್ರೋತ್ಸಾಹಿಸುತ್ತಾ ತೆಲುಗಿನ ಕವಿತೆಗೆ ಜಗತ್ತಿನ ಸ್ಥಾನ ಕಲ್ಪಿಸುತ್ತಾ, ಬೆಳೆದ ಶ್ರೀಶ್ರೀ ಅರ್ಧಶತಮಾನಕಾಲ ತೆಲುಗು ಸಾಹಿತ್ಯವನ್ನು ಮುನ್ನಡೆಸಿದ್ದಾರೆ. ತೆಲುಗಿನಲ್ಲಿ ವೇಮನ ಅವರನ್ನು ಬಿಟ್ಟರೆ, ಅಷ್ಟೇ ಜನಾಧರಣೆಯನ್ನು ಪಡೆದ ಇನ್ನೊಬ್ಬ ಕವಿ ಶ್ರೀಶ್ರೀ ಮಾತ್ರವೇ. ಈ ಮಹಾಕವಿಯ ಜೀವನ ವಿವರಗಳಿಗಿಂತ ಅವರ ಕಾವ್ಯದಲ್ಲಿನ ಸಾಮಾಜಿಕ, ಸಾಂಸ್ಕೃತಿಕ ವಿವರಗಳು ಮತ್ತು ಒಳನೋಟಗಳು ಹೆಚ್ಚು ಪ್ರಯೋಜನಕಾರಿಯಾದವು.

ಶ್ರೀಶ್ರೀ ರವರಿಗೆ ಚಿಕ್ಕ ವಯಸ್ಸಿನಲ್ಲಿಯೇ ಸೃಜನಾತ್ಮಕ ಪ್ರತಿಭೆಗಳಿದ್ದು ಅವರ ತಂದೆ ಅವರನ್ನು ಪ್ರೋತ್ಸಾಹಿಸಿದರು. ಆದ್ದರಿಂದಲೇ ಕೇವಲ ಹತ್ತನೇ ವಯಸ್ಸಿಗೆ ಬರುವ ವೇಳೆಗೆ 'ವೀರ ಸಿಂಹ ವಿಜಯ ಸಿಂಹುಲು' ಎಂಬ ಪೂರ್ಣ ಪ್ರಮಾಣದ ಕಾದಂಬರಿಯನ್ನು ಬರೆದರು. ಇದೇ ಸಮಯದಲ್ಲಿ

'ಗೋಕುಲಾಯಿ' ಎಂಬ ಡಿಟೆಕ್ಟಿವ್ ಕಾದಂಬರಿಯನ್ನು ಬರೆದು ೧೯೧೯ ರಲ್ಲಿ 'ಜಗನ್ಮಿತ್ರ ನಾಟಕ ಸಮಾಜಂ'ನಲ್ಲಿ ಸೇರಿ ಬಾಲಕರ ಪಾತ್ರವನ್ನು ಅಭಿನಯಿಸುತ್ತಿದ್ದರಂತೆ. ಹದಿನೈದನೇ ವಯಸ್ಸಿನಲ್ಲಿ 'ಪರಿಣಯ ರಹಸ್ಯಮು' ಎಂಬ ಪತ್ತೇದಾರಿ ಕಾದಂಬರಿಯನ್ನು ಬರೆದಿದ್ದಾರೆ. 'ಸಾವಿತ್ರಿ ಸತ್ಯವಂತುಲು' ಎಂಬ ನಾಟಕವನ್ನು ಬರೆದಿದ್ದಾರೆ.

೧೯೩೨ರಲ್ಲಿ 'ಕನ್ಯಾಶುಲ್ಕಂಲೋ ಸ್ತ್ರೀ ಪಾತ್ರಾಲು' ಎಂಬ ವಿಮರ್ಶಾತ್ಮಕ ಲೇಖನವನ್ನು ಬರೆಯುವುದರ ಮೂಲಕ ವಿಮರ್ಶಕರಾಗಿಯೂ ತಮ್ಮ ವ್ಯಕ್ತಿತ್ವವನ್ನು ಪ್ರಕಟಿಸಿಕೊಂಡರು. ೧೯೩೯ರಲ್ಲಿ 'ನೇಟಿ ತೆಲುಗು ಕವಿತ' 'ಕೊತ್ತ ಪೊಕಡಲು' ಎಂಬ ವಿಶೇಷ ಪ್ರಬಂಧಗಳನ್ನು ಬರೆದಿದ್ದಾರೆ. ಚೆಕಾವ್ ಬರೆದ 'The cherry archard' ನಾಟಕವನ್ನು 'ಸಂಪಂಗ ತೋಟ' ಎಂಬ ಹೆಸರಿನಲ್ಲಿ ಅನುವಾದ ಮಾಡಿದರು. ಕಾರ್ಲ್ ಚಾಪೆಕ್ ಅವರು ರಚಿಸಿದ 'the mother' ನಾಟಕವನ್ನು 'ಅಮ್ಮಾ' ಎಂದು ಅನುವಾದಿಸಿದ್ದಾರೆ. ಹೀಗೆ ಸಾಹಿತ್ಯ ಕೃಷಿಯಲ್ಲಿ ಮಾತ್ರವಲ್ಲದೇ ರಾಜಕೀಯದಲ್ಲೂ ಪಾಲ್ಗೊಂಡು ಮೇಲ್ಮನೆಯ ಸದಸ್ಯರಾಗಿ ಶ್ರೀಶ್ರೀಯವರು ೧೪-೪-೧೯೫೩ ರಂದು ಪ್ರಮಾಣವಚನ ಸ್ವೀಕರಿಸಿದರು. ಇದರ ಜೊತೆಗೆ ಈ ಸಂಧರ್ಭದಲ್ಲಿ ಸಿನಿಮಾಹಾಡು ಮತ್ತು ಮಾತುಗಳನ್ನು ಬರೆಯುವ ಕೆಲಸವನ್ನೂ ಕೂಡ ಮಾಡುತ್ತಿದ್ದರು.

೧೯೫೪ರಲ್ಲಿ ಹೆಲ್ಸಂಕಿಯಲ್ಲಿ ಜರುಗಿದ ಪ್ರಪಂಚ ಶಾಂತಿ ಮಹಾಸಭೆಗೆ ಪ್ರತಿನಿಧಿಯಾಗಿ ಬಾಗವಹಿಸಿ ರಷ್ಯಾ, ಪ್ಯಾರಿಸ್, ಲಂಡನ್ ಮುಂತಾದ ಕಡೆ ಪ್ರವಾಸಮಾಡಿ ಬಂದಿರುವ ಶ್ರೀಶ್ರೀಯವರು ಹೈದರಾಬಾದಿನ ವಿಶಾಲಾಂಧ್ರ ಸದಸ್ಯರ ಸಭೆಯಲ್ಲಿ ಅಧ್ಯಕ್ಷರಾಗಿ ಉಪನ್ಯಾಸ ಮಾಡಿದರು. 'ಸಾಮಾಜಿಕ ಕವಿತೆ' ಎಂಬ ವಿಷಯದ ಮೇಲೆ ರೇಡಿಯೊ ಚರ್ಚಾಗೋಷ್ಠಿಯಲ್ಲಿ ಭಾಗವಹಿಸಿದ್ದರು. 'ಆರಂಭ ದೊಡ್ಡ ಅವಸ್ಥೆ' ಎಂಬ ರೇಡಿಯೋ ಪ್ರಸಂಗವನ್ನು ಕಾರ್ಯಗತಗೊಳಿಸಿದ್ದಾರೆ. ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿದ್ದಾಗ 'Three cheers for man' ಚರಮರಾತ್ರಿ ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. 'ಮಾಂಗಲ್ಯ ಬಲಂ', 'ಗಾಂಧಾರಿ ಗರ್ವ ಭಂಗಂ' ಎಂಬ ಚಲನ ಚಿತ್ರಗಳ ಹಾಡುಗಳನ್ನು ಬರೆದಿದ್ದಾರೆ. ಅಲ್ಲದೇ 'ನಾನ್ ಸೊಲ್ಲು ರಹಸಂ' ಎಂಬ ತಮಿಳು ಚಿತ್ರವನ್ನು ಡಬ್ಬಿಂಗ್ ಮಾಡಿ 'ಚವಿಲೋ ರಹಸ್ಯ' ಹೆಸರಿನಿಂದ ಬಿಡುಗಡೆ ಮಾಡಿದ್ದಾರೆ. ೧೯೬೦ ರಲ್ಲಿ ೨೦ನೇ ಶತಮಾನದ ತೆಲುಗುಸಾಹಿತ್ಯ ಎನ್ನುವ ಪ್ರಬಂಧವನ್ನು ಬರೆದಿದ್ದಾರೆ.

೧೯೭೦ರಲ್ಲಿ ಶ್ರೀಶ್ರೀಯವರು ಮೈಕೊ ವಸ್ಕಿಯವರ 'ಲೇರಿನ್' ಕಾವ್ಯವನ್ನು ತೆಲುಗಿನಲ್ಲಿ ಬರೆದರು. ಶ್ರೀಶ್ರೀ ತೆಲುಗು ಕಾವ್ಯ ಕ್ಷೇತ್ರಕ್ಕೆ ಪ್ರವೇಶಿಸುವ ಮುನ್ನ ಅಲ್ಲಿನ ಸ್ಥಿತಿಯ ಒಂದು ಚಿತ್ರಣವನ್ನು ಸಹ ಈ ಪುಸ್ತಕದಲ್ಲಿ ಕಾಣಬಹುದು. ಎಲ್ಲಾ ಭಾಷೆಗಳಲ್ಲಿ ಇದ್ದಂತೆ ತೆಲುಗು ಸಾಹಿತ್ಯದಲ್ಲಿ ಕೂಡ ರಾಜಾಶ್ರಯವಿದ್ದಿತು. ಹನ್ನೊಂದನೇ ಶತಮಾನದಲ್ಲಿ ನನ್ನಯ್ಯನೆಂಬ ಕವಿಯಿಂದ ತೆಲುಗು ಸಾಹಿತ್ಯ ಆರಂಭವಾಗಿತ್ತು. ಹಾಗೆಯೇ ಪುರಾಣ ಪ್ರಧಾನ ಸಂಗತಿಗಳೇ ಕಾವ್ಯದ ವಸ್ತುಗಳಾಗಿ ಬಳಕೆಯಾಗುತ್ತಿದ್ದವು. ಇಂತಹ ಸಂಧರ್ಭದಲ್ಲಿ ಜನತೆಯ ಕವಿಯಾದ ವೇಮನ ಮೊಟ್ಟಮೊದಲ ಬಾರಿಗೆ ಮುಕ್ತ ಛಂದಸ್ಸನ್ನು ಬಳಕೆ ಮಾಡುತ್ತಾನೆ. ಇಲ್ಲಿಂದ ಮುಂದುವರೆದು ಸಾಹಿತ್ಯ ಹಲವಾರು ಹಂತಗಳನ್ನು ಹೊಂದಿದ್ದು ಹಲವಾರು ಬದಲಾವಣೆಗಳೊಂದಿಗೆ ಸುಧಾರಣೆಗೊಂಡಿದೆ. ಮಹಾಕಾವ್ಯಗಳಿಗೆ ವಿರುದ್ಧವಾಗಿ ಬೇರೆ ಸಾಹಿತ್ಯ ಪ್ರಕಾರಗಳು ಮುಂದುವರಿಯುತ್ತಾ ಬಂದವು. ಹೀಗಾಗಿ ತೆಲುಗು ಸಾಹಿತ್ಯವು ಹಲವಾರು ಬದಲಾವಣೆಗಳೊಂದಿಗೆ ಸಾಗಿ ಬಂದು ಆಧುನಿಕ ಕಾಲದಲ್ಲೂ ಅನೇಕ ವಿಧವಾದ ಹೊಸ ಹೊಸ ಪ್ರಯೋಗಗಳಿಗೆ ಒಳಗಾಗಿದೆ ಎಂಬ ವಿಚಾರವು ಶ್ರೀಶ್ರೀ ಪುಸ್ತಕವನ್ನು ಅಧ್ಯಯನ ಮಾಡುವುದರಿಂದ ತಿಳಿಯಬಹುದು.

ತೆಲುಗು ಸಾಹಿತ್ಯದಲ್ಲಿ ಮೊದಲು ನನ್ನಯ್ಯ, ಕಂದಕೂರಿ ವಿರೇಶ ಲಿಂಗಂ ಪಂತುಲು, ಗುರುಜಾಡ ವೆಂಕಟ ಅಪ್ಪಾರಾವು, ಶ್ರೀಶ್ರೀ, ರಾಯಪ್ರೋಲು ಸುಬ್ಬಾರಾವು, ಬಹಳ ಪ್ರಮುಖರಾಗಿದ್ದರು. ಕನ್ನಡ ಸಾಹಿತ್ಯದಲ್ಲಿ ಇರುವ ಹಾಗೆ ಬಂಡಾಯ, ನವೋದಯ, ಪ್ರಗತಿಶೀಲ ಪಂಥಗಳನ್ನು ತೆಲುಗು ಸಾಹಿತ್ಯದಲ್ಲಿ ಕಾಣಬಹುದಾಗಿದೆ. ಅಷ್ಟೇ ಅಲ್ಲದೆ ಐದಾರು ದಶಕಗಳಲ್ಲಿ ವಾಲ್ಟ್‌ವಿಟಮನ್, ಕಮ್ಮಿಂಗ್ಸ್, ಪುಷ್ಕಿನ್, ಮಯ್‌ಕೋವಸ್ಕಿ, ಪಾಬ್ಲೂನೆರೂಡ, ಹರೀಂದ್ರನಾಥ ಚಟ್ಟೋಪಾಧ್ಯಾಯ, ನಿಕೋಲಾಯ್, ಸೆಕ್ರಪೋವ್, ಅಲೆಕ್ಸಾಂಡರ್ ಫ್ಲೆಮಿಂಗ್, ಲಾರಿಸಾ ವಾರ್ಸ್ಲೈವಾ, ಕೋನ್‌ಸಾಂತಿನ್, ಶಾನ್‌ಷಂಕಿನ್, ದ್ವಿತ್ರಿಕಾವಲಿಯವ್, ಆಂದ್ರೆಪೊಜ್ನೆಪೆನೆಸ್ಕಿ, ಮುಂತಾದವರ ಕವಿತೆಗಳನ್ನು ಶ್ರೀಶ್ರೀಯವರು ತೆಲುಗಿಗೆ ಅನುವಾದ ಮಾಡಿದ್ದಾರೆ. ೧೯೭೧ರಲ್ಲಿ 'ಕೊನೆಯ ಪ್ರಯಾಣ' 'ಮೊದಲ ವಿಜಯ' ಎಂಬ ವಿಪ್ಲವ ಗೀತೆಗಳನ್ನು ಬರೆದಿದ್ದಾರೆ.

ಹೀಗೆ ರಂಗಾರೆಡ್ಡಿಯವರ ಶ್ರೀಶ್ರೀ ಎಂಬ ಪುಸ್ತಕವನ್ನು ಓದಿದಾಗ ಶ್ರೀಶ್ರೀ ಎಂಬ ತೆಲುಗು ಕವಿಯ ಸಂಪೂರ್ಣ ಸಾಹಿತ್ಯವನ್ನು ತಿಳಿಯಬಹುದು. ಶ್ರೀಶ್ರೀಯವರು ಹಲವಾರು ಪತ್ರಿಕಾ ಸಂದರ್ಶನಗಳನ್ನು ನೀಡಿದ್ದಾರೆ. ಅಲ್ಲದೆ ಶ್ರೀಶ್ರೀಯವರಷ್ಟು ಪತ್ರಿಕಾ ಸಂದರ್ಶನಗಳನ್ನು ಬೇರೆ ಯಾವ ಕವಿಯೂ ನೀಡಿಲ್ಲ ಎಂಬ ಮಾಹಿತಿಯೂ ಕೂಡ ತಿಳಿದು ಬರುತ್ತದೆ. ನಂತರ ೧೯೮೩ರ ಜೂನ್ ೧೫ರಂದು ಶ್ರೀಶ್ರೀಯವರು ಎಲ್ಲಾ ಅಭಿಮಾನಿಗಳನ್ನು, ರೈತ ಕೂಲಿಕಾರರನ್ನು, ಸಮಾಜದ ವಿವಿಧ ವರ್ಗದ ಪೀಡಿತರೆಲ್ಲರನ್ನು ದುಃಖದಲ್ಲಿ ಮುಳುಗಿಸಿ ಅವರು ಇಹಲೋಕವನ್ನು ತ್ಯಜಿಸುತ್ತಾರೆ. ಒಟ್ಟಾರೆ ಶ್ರೀಶ್ರೀ ರವರ ಹುಟ್ಟಿನಿಂದ ಕೊನೆಯವರೆಗಿನ ಎಲ್ಲಾ ಸಾಧನೆಗಳ ವಿವರಗಳನ್ನು ಈ ಪುಸ್ತಕದಲ್ಲಿ ಕಾಣಬಹುದು.

'ಪ್ರಗತಿಶೀಲ ಕಾವ್ಯಕ್ಕೆ ಜೀವ ತುಂಬಿದ ಶ್ರೀರಂಗಂ ಶ್ರೀನಿವಾಸರಾವು ಭಾವ ಕವಿತಾಯುಗಕ್ಕೆ ಕೊನೆಯ ನಮಸ್ಕಾರ ಹೇಳಿದ ಸಂಧರ್ಭದಲ್ಲಿ ಹೊರಬಂದ ಮಾತುಗಳು ಅವರ ಕಾವ್ಯಧೋರಣೆಯನ್ನು, ಅಭಿವ್ಯಕ್ತಿಯನ್ನು, ಅಭಿವ್ಯಕ್ತಿಯ ಕ್ರಮವನ್ನು ವಿವರಿಸುವಂತಹುಗಳಾಗಿವೆ.

"ಮಸಣದಂಥ ನಿಘಂಟು ದಾಟಿ
ವ್ಯಾಕರಣದ ಸಂಕೋಲೆ ಕಳಚಿ
ಛಂದಸ್ಸಿನ ಸರ್ಪಾಲಿಂಗನ ತೊರೆದು
ವೇಗವಾಗಿ ಹೊಸ ಕವಿತಾ ಪ್ರವಾಹವಾಗಿ ಅವರ ರಚನೆಗಳು
ಬಂದವು"[೨೨]

ತೆಲುಗು ಸಾಹಿತ್ಯದಲ್ಲಿಯೂ ಕೂಡ ನಿಘಂಟು ಛಂದಸ್ಸುಗಳನ್ನು ಮೀರಿದ ಸರಳವಾದ ಭಾಷೆಯ ಹಾಗೂ ಹೊಸ ಸಾಹಿತ್ಯ ಪ್ರಕಾರವನ್ನು ಕಾಣುವಂತಹದ್ದುನ್ನು ನಾವು ಇಲ್ಲಿ ಗಮನಿಸಬಹುದಾಗಿದೆ.

ರಂಗಾರೆಡ್ಡಿಯವರು ಶ್ರೀಶ್ರೀ ಯವರ ಹುಟ್ಟಿನ ವಿಶೇಷತೆಯನ್ನು ಕುರಿತು ಸಹ ಈ ಪುಸ್ತಕದಲ್ಲಿ ಹೇಳಿದ್ದಾರೆ. ಶ್ರೀರಂಗಂ ಶ್ರೀನಿವಾಸ್‌ರಾವ್ ಒಂದು ಸಾಮಾನ್ಯ ಕುಟುಂಬದ ತಾಯಿಯಿಂದ ಜನಿಸಿದ್ದರು.

"ಇಪ್ಪತ್ತನೇ ಶತಮಾನದ ೧೯೧೦ನೇ ವರುಷ, ಸ್ಥಳ ವಿಶಾಖಪಟ್ಣ, ತೆಲುಗು ಕವಿತಾ ಸರಸ್ವತಿಗೆ ನೋವು ಶುರುವಾಯಿತು. ಈ ಹೊಸ ಸೃಷ್ಟಿ ಜನವರಿ ಎರಡನೇ ತಾರೀಖು ನಡೆಯಿತು. ಈ ಸರಸ್ವತಿ ಹೆತ್ತ ಶಿಶು ಹೆಸರು ಶ್ರೀನಿವಾಸರಾವು ಇವರ ಮನೆತನದ ಹೆಸರು ಶ್ರೀರಂಗದವರೆಂಬುದು. ಎರಡು ಶ್ರೀ ಅಕ್ಷರಗಳನ್ನು ಧರಿಸಿದ ಶಿಶು ಶ್ರೀರಂಗಂ ಶ್ರೀನಿವಾಸರಾವ್"[೨೩]

ಶ್ರೀಶ್ರೀರವರನ್ನು ತೆಲುಗು ಸಾಹಿತ್ಯವು ಕಂಡ ಉತ್ತಮ ಸಾಹಿತಿಗಳಲ್ಲಿ ಪ್ರತಿಭಾವಂತ ಕವಿ ಎಂಬುದರಲ್ಲಿ ಎರಡು ಮಾತಿಲ್ಲ. ಶ್ರೀಶ್ರೀ ಅತೀ ಚಿಕ್ಕವಯಸ್ಸಿನಿಂದಲೇ ಸಾಹಿತ್ಯ ರಚನೆಯಲ್ಲಿ ತೊಡಗಿದ್ದಾರೆ. ಆ ಸಂಧರ್ಭದಲ್ಲಿ ಶ್ರೀಯುತರ ತಂದೆಯವರು ಸಹ ಅವರಿಗೆ ಕವಿತಾ ರಚನೆ, ತಿದ್ದುವಿಕೆ ಇತ್ಯಾದಿಗಳಲ್ಲಿ ಸಹಕಾರಿಯಾಗಿ ನಿಂತು ಸಾಹಿತ್ಯ ರಚನೆಗೆ ಪ್ರೋತ್ಸಾಹವನ್ನು ನೀಡಿದ್ದಾರೆ. ಈ ರೀತಿ ತನ್ನ ತಂದೆ ನೀಡಿದ ಪ್ರೋತ್ಸಾಹವನ್ನು ಕುರಿತು ಹೀಗೆ ಹೇಳಿದ್ದಾರೆ. "ನಾನು ಯಾವುದೇ ಯತಿ ಪ್ರಾಸವಿಲ್ಲದ ಪದ್ಯಗಳನ್ನು ಬರೆಯುತ್ತಿರುವುದನ್ನು ಕಂಡು ನಮ್ಮ ತಂದೆಯವರು ನನಗೆ ಸುಲಕ್ಷಣ ಸಾರವನ್ನು ಒದಗಿಸಿಕೊಟ್ಟರು. ಛಂದಸ್ಸಿನ ಮೊದಲ ಪಾಠವನ್ನು ಹೇಳಿಕೊಟ್ಟರು. ಆ ಸಮಯಕ್ಕೆ ನನ್ನ ವಯಸ್ಸು ಏಳೆಂಟಿರಬಹುದು. ಆ ದಿನದಿಂದ ಎಷ್ಟು ಪದ್ಯಗಳನ್ನು ಬರೆದಿರುವೆನೋ ಗೊತ್ತಿಲ್ಲ. ಎಲ್ಲವೂ ತಪ್ಪುಗಳೇ ಆದರೂ ಒಂದು ಸಲ ಮಾಡಿದ ತಪ್ಪನ್ನು ಮತ್ತೆ ಮಾಡುತ್ತಿರಲಿಲ್ಲ. ಎಲ್ಲರೂ ನನ್ನ ತಪ್ಪುಗಳನ್ನು ತಿದ್ದುವವರೇ. ಕೆಲವು ತಪ್ಪುಗಳು ನನಗೆ ತಪ್ಪುಗಳಾಗಿ ಕಾಣುತ್ತಿರಲಿಲ್ಲ. ಅವುಗಳನ್ನು ಮಾಡುವುದು ನನ್ನ ಹಕ್ಕೆಂದು ಭಾವಿಸುತ್ತಿದ್ದೆ. ಅವುಗಳಿಂದ ನನ್ನ ವ್ಯಕ್ತಿತ್ವ ಪ್ರಭಾವಯುತವಾಗಿ ಬೆಳೆಯುತ್ತಿತ್ತೆಂದು, ತನ್ನ ರಕ್ತ ಪರಿಶುಭ್ರವಾಗುತ್ತಿತ್ತೆಂದು, ತನ್ನ ಬಲ ಹೆಚ್ಚುತ್ತಿತ್ತೆಂದು ನನಗೆ ಸ್ಪಷ್ಟವಾಗಿ ತೋಚುತ್ತಿತ್ತು"[೨೪] ಹಾಗಾಗಿ ತಂದೆಯ ಪ್ರೋತ್ಸಾಹದಿಂದ ಶ್ರೀಶ್ರೀ ಅತೀ ಚಿಕ್ಕ ವಯಸ್ಸಿನಲ್ಲೇ ಸಾಹಿತ್ಯದ ಮೇಲೆ ಹಿಡಿತವನ್ನು ಸಾಧಿಸಿ ಉತ್ತಮ ಸಾಹಿತ್ಯ ರಚಿಸುವುದನ್ನು ಮೈಗೂಡಿಸಿಕೊಂಡಿದ್ದರು.

ಶ್ರೀಶ್ರೀರವರು ಮೊದಲು ಪದ್ಯಗಳನ್ನು, ನಾಟಕಗಳನ್ನು ರಚನೆ ಮಾಡಿದರು. ಚಿಕ್ಕ ವಯಸ್ಸಿನಲ್ಲಿಯೇ ಸಂಸ್ಕೃತ ಭೂಯಿಷ್ಠವಾದ ಶೈಲಿಯಲ್ಲಿ ನಾಟಕವನ್ನು ರಚಿಸುವುದನ್ನು ರೂಡಿಸಿಕೊಂಡ ಇವರಿಗೆ ಎಲ್ಲಾ ರೀತಿಯಲ್ಲೂ ಪ್ರೋತ್ಸಾಹ ಸಿಕ್ಕಿತು. ಇಷ್ಟೆಲ್ಲಾ ಪರಿಣಿತಿಯನ್ನು ಹೊಂದಿದ ಶ್ರೀಶ್ರೀ ತೆಲಗು ಸಾಹಿತ್ಯಕ್ಕೆ ಶ್ರೇಷ್ಟ ಸಾಹಿತ್ಯವನ್ನು ನೀಡಿದ್ದಾರೆ. ಪ್ರಾರಂಭದಲ್ಲಿ ಇವರು ರಚಿಸದ ಕವಿತೆಗಳು 'ಪ್ರಭವ' ಕವನ

ಸಂಕಲನದ ಮೂಲಕ ಪ್ರಕಟವಾದವು. ಈ ಕವಿತೆಗಳ ಮುನ್ನುಡಿಯನ್ನು ಪುರಿಪಂಡಾರವರು ಬರೆದಿದ್ದು ಇದರಲ್ಲಿ ತೆಲಗು ಸಾಹಿತ್ಯದ ಸ್ಥಿತಿಯನ್ನು ಗುರುತಿಸುತ್ತಲೇ, ಶ್ರೀಶ್ರೀ ಯವರ ವಿಶಿಷ್ಟತೆಯನ್ನು ಹೇಳಿದ್ದಾರೆ. ಇಂತಹ ಒಂದು ವಿಶಿಷ್ಠ ವ್ಯಕ್ತಿಯ ಪರಿಚಯವನ್ನು ಕನ್ನಡಿಗರಿಗೆ ರಂಗಾರೆಡ್ಡಿಯವರು ತಮ್ಮ ಬರವಣಿಗೆಯ ಮೂಲಕ ಮಾಡಿಕೊಟ್ಟಿದ್ದಾರೆ.

ತೆಲುಗು ಸಾಹಿತ್ಯದಲ್ಲಿ ಮತ್ತಷ್ಟು ಪ್ರಭಾವ ಬೀರಿದ್ದು, ಅಲೆಯನ್ನು ಎಬ್ಬಿಸಿದ್ದು ಶ್ರೀಶ್ರೀ ರವರ 'ಮಹಾಪ್ರಸ್ಥಾನ' ಪುಸ್ತಕ. ಈ ಪುಸ್ತಕ ಹಲವು ಮುದ್ರಣಗಳೊಂದಿಗೆ ಒಂದು ಲಕ್ಷ ಇಪ್ಪತ್ತೈದು ಸಾವಿರಕ್ಕೂ ಹೆಚ್ಚಿನ ಪ್ರತಿಗಳ ಮಾರಾಟವಾಗಿದೆ. ಇದಕ್ಕೆ ಕಾರಣ ಅವರ ಕವಿತೆಯ ಪ್ರಭಾವ. ಶ್ರೀಶ್ರೀರವರ ಒಂದು ಕವಿತೆಯನ್ನು ರಂಗಾರೆಡ್ಡಿಯವರು ಈ ರೀತಿಯಾಗಿ ಕನ್ನಡಿಸಿದ್ದಾರೆ.

"ನಡೆಸುವುದು ನಡೆಯಗೊಡುವುದು
ಬದಲಿಸುವುದು ಬದಲಾಗುವುದು
ಹಾಡುವುದು ಹಾಡಿಸುವುದು
ಗಾಢ ನಿದ್ದೆಯಿಂದೆಬ್ಬಿಸುವುದು
ಮುಂದು ಮುಂದಕೆ ಸಾಗಿಸುವುದು
ಪೂರ್ಣ ಬದುಕನು ತುಂಬಿ ಕೊಡುವುದು
ಬೇಕಾಗಿದೆಯೋ ನವ ಕವಿತೆಗೆ"[೨೫]

ಹೊಸ ಕವಿತೆಗೆ ವಸ್ತುಗಳಿರಬೇಕು ಎಂಬುದನ್ನು ಕಾವ್ಯಾತ್ಮಕವಾಗಿ ಶ್ರೀಶ್ರೀ ಹೇಳಿರುವ ಈ ಕವಿತೆಯ ಭಾವನೆ ತುಂಬಾ ತೀಕ್ಷ್ಣವಾಗಿದ್ದು, ಅದನ್ನು ಅಷ್ಟೇ ಸ್ಪಷ್ಟವಾಗಿ ರಂಗಾರೆಡ್ಡಿಯವರು ಕನ್ನಡದಲ್ಲಿ ಅನುವಾದಿಸಿದ್ದಾರೆ. ಶ್ರೀಶ್ರೀಯವರು ಸಹ ಸಂಕಷ್ಟಗಳಿಂದ ನೋವು ಅನುಭವಿಸಿದ್ದರಿಂದ ಆ ಪರಪೀಡನೆಯಲ್ಲಿರುವ ಜನರನ್ನು ವಿಮುಕ್ತಗೊಳಿಸುವುದು ಅವರ ಉದ್ದೇಶವಾಗಿತ್ತು. ಹಾಗಾಗಿ ಈ ಅಂಶಗಳು ಅವರ ಸಾಹಿತ್ಯದಲ್ಲಿ ಕಾಣಬಹುದು. ಜೊತೆಗೆ ಹೋರಾಟದ ಮನೋಭಾವವನ್ನು ಕೂಡ ಇವರ ಸಾಹಿತ್ಯದಲ್ಲಿ ಗುರುತಿಸಬಹುದಾಗಿದೆ.

ಎಲ್ಲಾ ದೇಶಗಳ ಚರಿತ್ರೆಯನ್ನು ಕುರಿತು "ದೇಶಚರಿತ್ರಲು" ಎಂಬ ಕವನದಲ್ಲಿ ಈ ರೀತಿ ಹೇಳಿದ್ದಾರೆ

"ಯಾವ ದೇಶದ ಚರಿತ್ರೆ ನೋಡಲಿ
ಹೆಮ್ಮೆ ಪಡುವುದು ಏನಿದೆ
ಮನುಕುಲದಾ ಚರಿತೆ ತುಂಬಾ
ಪರಪೀಡನೆಯೇ ತುಂಬಿದೆ"[೨೬]

ಬೇರೆ ದೇಶಗಳ ಚರಿತ್ರೆಯನ್ನು ಗಮನಿಸಿದಾಗ ಎಲ್ಲಾ ಕಡೆಯೂ ಕಾಣುವುದು ಪರಪೀಡನೆ, ಒಬ್ಬರನ್ನು ಇನ್ನೊಬ್ಬರು ಶೋಷಿಸುವರು ಎಂಬ ಅಂಶವನ್ನು ತಿಳಿಯಬಹುದು. ಅದರ ಜೊತೆಗೆ ಕವಿತೆಯನ್ನು ಗಮನಿಸಿದಾಗ ಶೋಷಣೆಯ ವಿರುದ್ಧ ಜನರನ್ನು ಎಚ್ಚರಿಸುವ ಹೋರಾಟದ ಮನೋಭಾವವನ್ನು ಕಾಣಬಹುದು

"ಪದ್ಯ ಹೆಚ್ಚೊ ಗದ್ಯ ಹೆಚ್ಚೊ
ಎಂಬ ಸಮಸ್ಯೆ ಅಭೇಧ್ಯ
ಗಂಟಾಘೋಷವಾಗಿ ನಾನು ಹೇಳುತ್ತೇನೆ
ಈ ಎರಡೂ ನನಗೆ ನೈವೇದ್ಯ"[೨೭]

ಶ್ರೀಶ್ರೀರವರು ಗದ್ಯ ಮತ್ತು ಪದ್ಯಗಳೆರಡನ್ನು ಸಮಾನವಾಗಿ ಕಂಡಿದ್ದಾರೆ ಎಂಬುದನ್ನು ಈ ಕವನದ ಮೂಲಕ ತಿಳಿಯಬಹುದು. ಹೀಗೆ ಶ್ರೀಶ್ರೀಯವರು ಭಾವ ಕವಿಯಾಗಿ, ಅಭ್ಯುದಯ ಕವಿಯಾಗಿ ಚಲನಚಿತ್ರ ಗೀತೆಗಳು, ಪ್ರಬಂಧಗಳನ್ನು ಕೂಡ ರಚನೆ ಮಾಡಿದ್ದಾರೆ. ಶ್ರೀಶ್ರೀರವರು ತೆಲುಗು ಸಾಹಿತ್ಯದಲ್ಲಿ ಎಡಪಂಥೀಯ ಸಿದ್ಧಾಂತಕರಾಗಿದ್ದರು.

"ನನ್ನ ಮನೆಯ ಹೆಸರೇ ಪ್ರಪಂಚ
ಜನ ಸಮೂಹವೇ ಕುಟುಂಬ
ದಿಕ್ದಿಕ್ಕಿಗೆ ಚೆಲ್ಲುತ್ತಿರುವೆ
ಅಭ್ಯುದಯ ಸುಗಂಧ
ನನ್ನ ಜೀವನವಾಗ ಮಹಾಕಾವ್ಯಬಂಧ"[೨೮]

ಈ ಕವಿತೆಯಲ್ಲಿ ಶ್ರೀಶ್ರೀರವರು ತಮ್ಮ ಅಭ್ಯುದಯ ಚಿಂತನೆಯ ಮೂಲಕ ಮಾನವೀಯ ಗುಣಗಳನ್ನು ಹೊಂದಿರುವರಾಗಿ, ಎಲ್ಲಾ ಶ್ರಮಿಕರಲ್ಲಿ ಬೆರೆತ ಒಬ್ಬ ಸಾಮಾನ್ಯ ಮನುಷ್ಯರಾಗಿ ಜೀವಿಸಿದ ಒಬ್ಬ ಶ್ರೇಷ್ಠ ವ್ಯಕ್ತಿಯಾಗಿದ್ದಾರೆ. ಇಂತಹ ಶ್ರೇಷ್ಠ ವ್ಯಕ್ತಿಯ ಎಲ್ಲಾ ವಿಚಾರಗಳ ಬಗ್ಗೆ ಗಮನವರಿಸಿ ಅಧ್ಯಯನ ಮಾಡಿ ಶ್ರೀಶ್ರೀ ಎಂಬ ಉತ್ತಮ ಪುಸ್ತಕವನ್ನು ಸಾಹಿತ್ಯಕ್ಕೆ ರಂಗಾರೆಡ್ಡಿಯವರು ಕೊಡುಗೆಯಾಗಿ ನೀಡಿದ್ದಾರೆ. ನಿಜಕ್ಕೂ ರಂಗಾರೆಡ್ಡಿಯವರ ಈ ಕೆಲಸ ಬಹಳ ಉತ್ತಮವಾಗಿದೆ. ಆದ್ದರಿಂದಲೇ ಶ್ರೀಶ್ರೀ ಅಂತಹ ಶ್ರೇಷ್ಠ ವ್ಯಕ್ತಿಯ ಬಗ್ಗೆ ನಾವೆಲ್ಲರೂ ತಿಳಿದುಕೊಳ್ಳಲು ಸಾದ್ಯವಾಗಿದೆ.

೩.೪ ಗುಬ್ಬಿ ವೀರಣ್ಣ

ಕನ್ನಡ ಚಲನಚಿತ್ರ ರಂಗಕ್ಕೆ ಎಪ್ಪತ್ತೈದು ವರ್ಷಗಳು ತುಂಬುತ್ತಿರುವ ಸಂಧರ್ಭದಲ್ಲಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಮೃತ ಮಹೋತ್ಸವವನ್ನು ಆಚರಿಸಲಾಗಿತ್ತು. ಆ ಸಂಧರ್ಭದಲ್ಲಿ ಮಹೋತ್ಸವದ ಅಂಗವಾಗಿ ಎಪ್ಪತ್ತೈದು ಜನ ಚಲನಚಿತ್ರ ಸಾಧಕರನ್ನು ಕುರಿತು ಕಿರು ಪುಸ್ತಕಗಳನ್ನು ಪ್ರಕಟಿಸುವ ಯೋಜನೆ ಕೈಗೆತ್ತಿಕೊಂಡು, ದಾಖಲಾಗದ ಹಲವಾರು ಕಲಾವಿದರು ಹಾಗೂ ಸಂಗತಿಗಳನ್ನು ದಾಖಲಿಸುವ ಕೆಲಸವನ್ನು ಮಾಡಲಾಗಿದೆ. ಆ ವೇಳೆಯಲ್ಲಿ ಗುಬ್ಬಿ ವೀರಣ್ಣನವರ ಬಗ್ಗೆ ಪುಸ್ತಕವನ್ನು ಬರೆಯುವ ಕೆಲಸವು ಡಾ.ರಂಗಾರೆಡ್ಡಿ ಕೋಡಿರಾಂಪುರ ರವರು ವಹಿಸಿಕೊಂಡು 'ಗುಬ್ಬಿ ವೀರಣ್ಣ' ಎಂಬ ಉತ್ತಮ ಪುಸ್ತಕವನ್ನು ಹೊರತಂದಿದ್ದಾರೆ.

ರಂಗಭೂಮಿ ಮತ್ತು ಕನ್ನಡ ಚಲನಚಿತ್ರ ಕ್ಷೇತ್ರದಲ್ಲಿ ದಿಗ್ಗಜರಾದ ಗುಬ್ಬಿ ವೀರಣ್ಣನವರ ಬಾಲ್ಯದಿಂದ ಹಿಡಿದು ಅವರ ಎಲ್ಲಾ ಸಾಧನೆಗಳನ್ನು ಒಳಗೊಂಡ ಮಾಹಿತಿಯನ್ನು 'ಗುಬ್ಬಿ ವೀರಣ್ಣ' ಪುಸ್ತಕದಲ್ಲಿ ಕಾಣುತ್ತೇವೆ. ಗುಬ್ಬಿ ವೀರಣ್ಣನವರು ತುಮಕೂರು ಜಿಲ್ಲೆಯ ಗುಬ್ಬಿಯಲ್ಲಿ ಜನಿಸಿದರು. ಅವರ ತಂದೆ ಹಂಪಣ್ಣ. ಬಾಲ್ಯದಿಂದಲೂ ಇವರ ಜೀವನ ಮತ್ತು ಕುಟುಂಬ ಕಷ್ಟದ ಸ್ಥಿತಿಯಲ್ಲಿತ್ತು. ಅಂತಹ ಸಂಧರ್ಭದಲ್ಲಿ ಒಂದು ತುತ್ತು ಕೂಳಿಗೂ ಪರದಾಡಬೇಕಿತ್ತು. ಅದನ್ನೆಲ್ಲಾ ಅನುಭವಿಸಿದ ವೀರಣ್ಣನವರು ಛಲವನ್ನು ಹೊಂದಿದ ಧೀರ ವ್ಯಕ್ತಿಯಾದರು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿರುವಾಗ ಆಗತಾನೇ ಗುಬ್ಬಿಯಲ್ಲಿ ತಲೆ ಎತ್ತಿದ ನಾಟಕ ಮಂಡಳಿಗೆ ವೀರಣ್ಣನವರು ಸೇರಿಕೊಂಡರು.

ಗುಬ್ಬಿಯ ಆರಾಧ್ಯ ದೈವ ಶ್ರೀ ಚನ್ನಬಸವೇಶ್ವರ ಸ್ವಾಮಿ, ಆದ್ದರಿಂದ ಆ ನಾಟಕ ಕಂಪನಿಗೆ 'ಗುಬ್ಬಿ ಶ್ರೀ ಚನ್ನಬಸವೇಶ್ವರಸ್ವಾಮಿ ಕೃಪಾ ಪೋಷಿತ ನಾಟಕ ಸಂಘ' ಎಂಬ ಹೆಸರಿತ್ತು. ೧೮೮೪ರಲ್ಲಿ ಈ ನಾಟಕ ಮಂಡಳಿ ಅಸ್ತಿತ್ವಕ್ಕೆ ಬಂದ ನಂತರ ಇದರ ಮುಂದಾಳತ್ವವನ್ನು ಚಂದ್ರಣ್ಣನವರಿಗೆ ವಹಿಸಿಕೊಡಲಾಗಿತ್ತು. ಆ ಸಂಧರ್ಭದಲ್ಲಿ ಗುಬ್ಬಿ ವೀರಣ್ಣನವರು ಸಣ್ಣ ಸಣ್ಣ ಪಾತ್ರಗಳನ್ನು ಅಭಿನಯಿಸುವುದರ ಮೂಲಕ ದೊಡ್ಡ ವ್ಯಕ್ತಿಯಾಗಿ ಬೆಳೆದರು. ವೀರಣ್ಣನವರ ಅಸಾಧರಣ ನಿಷ್ಠೆ, ಕಲಾ ಸಾಮರ್ಥ್ಯ, ಶ್ರದ್ಧೆ, ಪ್ರಮಾಣಿಕತೆ ಮತ್ತು ಸೂಕ್ಷ್ಮಮತಿಗಳಾದ ವೀರಣ್ಣನವರಿಗೆ ಅಭಿನಯದ ಜೊತೆಗೆ ಸಂಘದ ಇತರ ಕಾರ್ಯಗಳನ್ನು ಕೂಡ ವಹಿಸಿದರು. ಹಲವು ವರ್ಷಗಳ ಕಾಲ ಚಂದ್ರಣ್ಣನವರು ಗುಬ್ಬಿ ಕಂಪನಿಯನ್ನು ಬೆಳೆಸಿದರು. ಅನಾರೋಗ್ಯದಿಂದ ೧೯೧೭ರಲ್ಲಿ ಮರಣವನ್ನು ಹೊಂದುತ್ತಾರೆ. ಇವರ ದೊಡ್ಡಮಗ ಪದ್ಮರಾಜಯ್ಯನನ್ನು ವೀರಣ್ಣನವರು ಕರೆದು ತಂದು ಕಂಪನಿಯ ಜವಾಬ್ದಾರಿಯನ್ನು ವಹಿಸಿದರು. ಜೊತೆಗೆ ವೀರಣ್ಣನವರು ಕೆಲವು ಕಾರಣಗಳಿಂದ ಆ ನಾಟಕ ಮಂಡಳಿಯಿಂದ ಹೊರ ಹೋಗುವ ಯೋಚನೆಯನ್ನು ಮಾಡಿದರು. ಆ ಸಂಧರ್ಭದಲ್ಲಿ ಕಂಪನಿಯಲ್ಲಿನ ಇತರರು ಇದಕ್ಕೆ ಒಪ್ಪದೆ ಎಲ್ಲಾ ಜವಾಬ್ದಾರಿಯನ್ನು ಅವರಿಗೇ ಒಪ್ಪಿಸಿದರು.

ನಂತರ ದಿನಗಳಲ್ಲಿ ವೀರಣ್ಣನವರ ಸಾರಥ್ಯದಲ್ಲಿ ನಾಟಕ ಕಂಪನಿ ೬೦೦ರೂ ಆದಾಯ ಪಡೆಯುವ ಮಟ್ಟಕ್ಕೆ ಬೆಳೆಯುತ್ತಾ ಹೋಯಿತು. ಮುಂದಾಲೋಚನೆ ಹಾಗೂ ತಾಳ್ಮೆಯ ಹೊಂದಿದ ವೀರಣ್ಣನವರ ಪ್ರಭಾವದಿಂದ ಕಂಪನಿಗೆ ಎಲ್ಲಾ ಕಡೆಯು ಗೌರವ ಸಿಕ್ಕಿತು. ಅಲ್ಲದೇ ಹಾವೇರಿ, ತೀರ್ಥಹಳ್ಳಿ, ಮಂಗಳೂರು, ಮೋಕ್ಕಾಂಗಳಲ್ಲಿ ಯಶಸ್ವಿ ಪ್ರದರ್ಶನಗಳನ್ನು ನಡೆಸಿ ಕಂಪನಿಯ ಆದಾಯ ಇನ್ನಷ್ಟು

ಹೆಚ್ಚುತ್ತಾ ಹೋಯಿತು. ಹೀಗಾಗಿ ಗುಬ್ಬಿ ವೀರಣ್ಣನವರು ಶ್ರೇಷ್ಠ ನಟರು ಮಾತ್ರವಲ್ಲ. ಉತ್ತಮ ಸಂಘಟಕರು ಹೌದು ಎಂಬುದು ಸಾಬೀತಾಯಿತು.

ಕರ್ನಾಟಕದಲ್ಲಿ ಮಾತ್ರವಲ್ಲದೆ ಹೊರರಾಜ್ಯಗಳಲ್ಲಿಯೂ ಕೂಡ ಪ್ರದರ್ಶನಗಳನ್ನು ನಡೆಸಿದರು. ಕೊಯಮತ್ತೂರು, ಕರೂರು, ತಿರುಚನಾಪಲ್ಲಿ ಇಲ್ಲಿ ಹಲವಾರು ತೊಂದರೆಗಳು ಉಂಟಾದವು. ಏನೇ ಕಷ್ಟ ಬಂದರೂ ತಕ್ಷಣ ಪ್ರತಿಕ್ರಿಯಿಸದೆ ನಿಧಾನಕ್ಕೆ ಯೋಚನೆ ಮಾಡಿ ಆ ಸಮಸ್ಯೆಗೊಂದು ಪರಿಹಾರವನ್ನು ಕಂಡು ಹಿಡಿಯುವ ಸಾತ್ವಿಕ ಧೈರ್ಯ ವೀರಣ್ಣನವರಲ್ಲಿ ಯಾವಾಗಲೂ ಇರುತ್ತಿತ್ತು. ಕಂಪನಿಯ ಪಾಲುದಾರನಲ್ಲಿ ಒಬ್ಬನಾದ ನಾಗರಾಜ ಬಂದು ಇಲ್ಲ ಸಲ್ಲದ ಆರೋಪಗಳನ್ನು ಮಾಡಿದನು. ಅವರಿಗೆ ಸ್ವಲ್ಪ ಹಣವನ್ನು ನೀಡಿ ವೀರಣ್ಣನವರೇ ಕಂಪನಿಯ ಮಾಲೀಕರಾದರು. ಇಂತಹ ಮಹಾನ್ ವ್ಯಕ್ತಿಯ ಬಗ್ಗೆ ನೀಡಿದ ಅಭಿಪ್ರಾಯಗಳನ್ನು ಈ ಪುಸ್ತಕದಲ್ಲಿ ಕಾಣಬಹುದು.

"ಒಂದು ನಾಟಕದಲ್ಲಿ ಯಾರಾದರೂ ಒಳ್ಳೆಯ ಪ್ರತಿಭೆ ತೋರಿಸಿದರೆ, ಉತ್ತಮವಾಗಿ ಅಭಿನಯಿಸಿದರೆ ಮನಸಾರೆ ಹೊಗಳುತ್ತಿದ್ದರು. ಅದು ಮುಖ್ಯ ಪಾತ್ರವಾಗಿರಬಹುದು ಇಲ್ಲವೇ ಸಾಮಾನ್ಯ ಪಾತ್ರವಾಗಿರಬಹುದು, ದೊಡ್ಡ ಹೆಸರಿನ ನಟನಾಗಿರಬಹುದು. ಅವನು ಅದ್ಭುತವಾಗಿ ಸಾಧಿಸಿದ್ದನ್ನ ಮೆಚ್ಚುತ್ತಿದ್ದರು. ಎದುರಿಗೆ ಹೊಗಳಿದರೆ ಅವರಿಗೆ ಜಂಬ ಬರುತ್ತದೆ ಎಂದು ಯಾರಾದರೂ ತಡೆದರೆ, 'ಇದ್ದ ಗುಣವನ್ನು ಹೊಗಳಿದರೆ ಏನು ತಪ್ಪು' ಎಂದು ಕೇಳುತ್ತಿದ್ದರು. ಅವರು ಕಲಾವಿದರನ್ನು ಕಾಣುತ್ತಿದ್ದ, ಆದರಿಸುತ್ತಿದ್ದ, ಗೌರವಿಸುತ್ತಿದ್ದ ರೀತಿ ನೀತಿಗಳು ಈ ಹೊತ್ತಿಗೆ ಒಂದು ಆದರ್ಶ ಎಂದು ಖ್ಯಾತ ಕಲಾವಿದ ಡಾ.ರಾಜ್‌ಕುಮಾರ್ ಸಿಂಧುವಳ್ಳಿಗೆ ಸಂದರ್ಶನ ನೀಡಿದಾಗ ಹೇಳಿರುವ ಅಭಿಪ್ರಾಯವಾಗಿದೆ."[೨೯]

ಈ ರೀತಿಯಾಗಿ ರಂಗಾರೆಡ್ಡಿಯವರು ಡಾ.ರಾಜ್‌ಕುಮಾರ್ ರವರ ಅಭಿಪ್ರಾಯವನ್ನು ನೀಡುವ ಮೂಲಕ ಗುಬ್ಬಿ ವೀರಣ್ಣನವರ ವ್ಯಕ್ತಿತ್ವವನ್ನು ಬಗ್ಗೆ ತಿಳಿಸಿಕೊಟ್ಟಿದ್ದಾರೆ. ಈ ರೀತಿಯಾಗಿ ಗುಬ್ಬಿ ವೀರಣ್ಣನವರು ಹಂತ ಹಂತವಾಗಿ ಹಲವು ತೊಂದರೆಗಳನ್ನು ಮೀರಿ ಉತ್ತಮ ಸ್ಥಾನವನ್ನು ತಲುಪಿದ್ದಾರೆ. ಅದರ ಜೊತೆಗೆ ಆಧುನಿಕ ರೀತಿಯಲ್ಲಿ ಕಂಪನಿಯಲ್ಲಿ ಸುಧಾರಣೆಗಳನ್ನು ಕೈಗೊಂಡಿದ್ದಾರೆ. ಸುಧಾರಣೆಗಳನ್ನು ತಂದ ನಂತರ ಬೆಂಗಳೂರಿನಲ್ಲಿ ನಾಟಕ ಪ್ರದರ್ಶನ ಮಾಡುವ ಉದ್ದೇಶವನ್ನು

ಇಟ್ಟುಕೊಂಡು ಬೆಂಗಳೂರಿಗೆ ಬಂದರು. ೧೯೨೧ರ ಜುಲೈ ೧೩ರಂದು 'ಸುಭದ್ರ ಕಲ್ಯಾಣ' ನಾಟಕವನ್ನು ಪ್ರದರ್ಶಿಸುವುದರ ಮೂಲಕ ಸ್ಥಾನ ಗಟ್ಟಿಗೊಳಿಸಿಕೊಂಡರು.

ವೀರಣ್ಣನವರು ಸುಭದ್ರಾ ಕಲ್ಯಾಣ, ಸದಾರಮೆ, ಪ್ರಹ್ಲಾದ ಚರಿತ್ರೆ, ಗುಲೇಬ ಕಾವಲಿ, ಶ್ರೀ ಕೃಷ್ಣಲೀಲೆ, ಪ್ರಭಾಮಣಿ ವಿಜಯ ಮುಂತಾದ ನಾಟಕಗಳನ್ನು ಪ್ರದರ್ಶಿಸಿ ತಕ್ಕ ಪ್ರತಿಫಲವನ್ನು ಪಡೆದರು. ಗುಬ್ಬಿ ವೀರಣ್ಣನವರು ಕೆಲವು ಪಾತ್ರಗಳನ್ನು ಪ್ರಭುಗಳ ಸನ್ನಿಧಿಯಲ್ಲಿ ಪ್ರದರ್ಶಿದರು. ನಾಲ್ವಡಿ ಕೃಷ್ಣರಾಜ ಒಡೆಯರು ಅದನ್ನು ಮೆಚ್ಚಿ ಸನ್ಮಾನ ನೀಡಿ ಗೌರವಿಸಿದರು. ಹೀಗೆ ಕಂಪನಿಯನ್ನು ಬೆಳೆಸುತ್ತಾ, ವಿಸ್ತರಿಸುತ್ತಾ, ಕಲಾವಿದರನ್ನು ಪೋಷಿಸಿಕೊಂಡು ಕವಿ–ನಾಟಕಕಾರರನ್ನು ಬೆಳೆಸುತ್ತಾ ಬಾಲಕರಿಗೆ ತರಬೇತಿಗಳನ್ನು ನೀಡುತ್ತಾ, ರಂಗಮಂದಿರಗಳನ್ನು ಕಟ್ಟಿಸುತ್ತಾ ಸಿನಿಮಾ ನಿರ್ಮಾಣದ ಕಡೆಗೂ ಕೈಹಾಕಿದರು. ಫಿಲಂ ಕಂಪನಿಯಲ್ಲಿ ಕೂಡ ತೊಂದರೆ, ನಷ್ಟವನ್ನು ಅನುಭವಿಸಿದರು. ಆದರೆ ಛಲ ಬಿಡದ ವೀರಣ್ಣನವರು ಹಲವಾರು ಚಿತ್ರಗಳನ್ನು ರಚಿಸಿದರು. ಇವರು ರಚಿಸಿದ ಕೊನೆಯ ಚಿತ್ರ 'ಬೇಡರ ಕಣ್ಣಪ್ಪ' ಹೀಗೆ ವೀರಣ್ಣನವರು ಎಷ್ಟೇ ಸಂಕಷ್ಟಗಳನ್ನು ಅನುಭವಿಸಿದರೂ ಜೀವನದಲ್ಲಿ ಬಹಳ ಉನ್ನತ ಮಟ್ಟಕ್ಕೇರಿ ತಮ್ಮದೇ ಆದ ಛಾಪನ್ನು ಮೂಡಿಸಿ ಹೋಗಿದ್ದಾರೆ.

ಡಾ.ರಂಗಾರೆಡ್ಡಿಯವರು ಈ ರೀತಿಯಾಗಿ ಗುಬ್ಬಿ ವೀರಣ್ಣನವರ ಬಾಲ್ಯದಿಂದ ಹಿಡಿದು ಅವರ ಸಾಧನೆಯನ್ನು ಕುರಿತ ಸಂಪೂರ್ಣ ಮಾಹಿತಿಯನ್ನು 'ಗುಬ್ಬಿ ವೀರಣ್ಣ' ಎಂಬ ಪುಸ್ತಕದಲ್ಲಿ ನೀಡುವ ಮಹತ್ವದ ಕೆಲಸ ಮಾಡಿದ್ದಾರೆ.

೩.೫ ಅಲ್ಲಮ ಪ್ರಭು

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ 'ವಚನ ಚಿಂತನ ಮಾಲೆ' ಯೋಜನೆ ಅಡಿಯಲ್ಲಿ ಪುಸ್ತಕ ಬರೆಯುವ ಅವಕಾಶ ಸಿಕ್ಕಾಗ ರಂಗಾರೆಡ್ಡಿಯವರು 'ಅಲ್ಲಮ ಪ್ರಭು' ಪುಸ್ತಕವನ್ನು ಬರೆದಿದ್ದಾರೆ.

ಹನ್ನೆರಡನೇ ಶತಮಾನದಲ್ಲಿ ಹುಟ್ಟಿಕೊಂಡ ವಚನಯುಗದಲ್ಲಿ ಭಕ್ತಿಮಾರ್ಗವು ಹುಟ್ಟಿಕೊಂಡಿತು. ಮಧ್ಯಕಾಲೀನ ಯುಗದ ರಾಜ್ಯ ವಿಸ್ತರಣಾ ಮನೋಭಾವದಿಂದ ಬೇಸತ್ತ ಜನ ಸಮುದಾಯ ಭಕ್ತಿ ಮಾರ್ಗದ ಕಡೆ ಸಾಗಿದರು. ಇದರ ಪ್ರತಿಫಲವಾಗಿ ಹೊಸದೊಂದು ಯುಗಧರ್ಮ ಉದಯವಾಯಿತು. ಇಲ್ಲಿನ ಭಾಷೆಯು ಸರಳವಾಗಿದ್ದರಿಂದ ಎಲ್ಲರೂ ಕೂಡ ಸ್ಪಂದಿಸುವಂತವರಾದರು. ಇಂತಹ ವಚನಯುಗದಲ್ಲಿ ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ, ಮಾಳಿಗೆಮಾರಯ್ಯ ಮುಂತಾದವರು ಪ್ರಮುಖ ಪಾತ್ರ ವಹಿಸಿದ್ದಾರೆ. ಅತ್ಯಂತ ಅನುಭವಿಯಾದ, ಸಮಾಜದ ಉದ್ಧಾರಕ್ಕೆ ಶ್ರಮಿಸಿದ ಮಹಾಚೇತನ, ವೈರಾಗ್ಯಮೂರ್ತಿ ಅಲ್ಲಮ ಪ್ರಭು. ಇಂತಹ ಅನುಭವಿ, ಅಮೃತ ಚಿಂತಕರಾದ ಅಲ್ಲಮ ಪ್ರಭುವಿನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕಾಣಬಹುದು.

ಹರಿಹರನು ಬರೆದಿರುವ 'ಪ್ರಭುದೇವರ ರಗಳೆ' ಅಲ್ಲಮನನ್ನು ಕುರಿತದ್ದಾಗಿದೆ. ಇಲ್ಲಿ ಸಿಗುವ ಜೀವನ ವಿವರಗಳು ಕೇವಲ ಕಾಲ್ಪನಿಕವಲ್ಲ, ಏಕೆಂದರೆ ಇವರಿಬ್ಬರ ಕಾಲಾವಧಿ ಬಹಳ ಸಮೀಪವಾದದ್ದು ಆದ್ದರಿಂದ ಎಲ್ಲಾ ವಿಚಾರಗಳು ಸತ್ಯಕ್ಕೆ ಹತ್ತಿರವಾದವುಗಳು. ಪ್ರಭುದೇವರ ರಗಳೆಯಲ್ಲಿ ಮೊದಲಿಗೆ ಅಲ್ಲಮಪ್ರಭುವಿನ ಮೇಲಿನ ಜನನ, ಬೆಳವಣಿಗೆಯ ಬಗ್ಗೆ ತಿಳಿಸಲಾಗಿದೆ. ಹಾಗೆಯೇ ಅಲ್ಲಮನು ಕಾಮಲತೆ ಎಂಬುವಳೊಂದಿಗೆ ಮದುವೆ ಕಾಮಸುಖಗಳನ್ನು ಅನುಭವಿಸುತ್ತಿರಲು ಅವಳಿಗೆ ಜ್ವರ ಬಂದು ಕಾಂತಿಹೀನಳಾಗುತ್ತಾಳೆ. ಇದರಿಂದ ಹೆಚ್ಚು ದುಃಖಗೊಂಡ ಅಲ್ಲಮನ ಪರಿಸ್ಥಿತಿಯನ್ನು ಹರಿಹರನು ಈ ರೀತಿಯಾಗಿ ಚಿತ್ರಿಸಿದ್ದಾನೆ.

"...ಬರೆದಂತೆ ಕಂಡರಸಿದಂತೆ ಕರುವಿಟ್ಟಂತೆ
ಮರುಳಂತೆ ಮರೆದಿರ್ದರಂತೆ ಮರವಟ್ಟಂತೆ
ಉರವಣಿಗೆಯ ದುಃಖದೊಳಗಾಳುತುಂ ಮುಳುಗುತಂ
ಪರಿಪರಿಯ ವಿರಹಾಗ್ನಿಯಿಂದುರಿದು ಬೇವುತುಂ..."[೩೦]

ಕಾಮಲತೆಯಿಲ್ಲದೆ ತನಗೆ ಏನೂ ಬೇಡವೆಂದು ನಿರ್ಧರಿಸಿ ಮನಸ್ಸಿನಲ್ಲಿ ವಿರಕ್ತಿಯನ್ನು ಹೊಂದಿ ಮುನ್ನಡೆಯುತ್ತಾನೆ. ಅನಿಮಿಷ್ಯನೆಂಬ ಸನ್ಯಾಸಿಯು ಇವನ ಅಂಗೈಯಲ್ಲಿ ಲಿಂಗ ಇಟ್ಟು ಪ್ರಾಣಬಿಡುತ್ತಾನೆ. ಇದರಿಂದ ಅಲ್ಲಮನಲ್ಲಿ ಹೊಸ ಚೈತನ್ಯ ಮೂಡುತ್ತದೆ. ಹಾಗೂ ಬದುಕಿನ ದಿಕ್ಕು

ಬದಲಾಗುತ್ತದೆ. ಹೀಗೆ ಲಿಂಗದೊಂದಿಗೆ ಅಲ್ಲಮಪ್ರಭು ಆಲೋಚನೆಗಳಿಂದ ಕೂಡಿ ಕಾಡನ್ನು ಪ್ರವೇಶಿಸುತ್ತಾನೆ. ಕಾಡಿನ ಪ್ರವೇಶದಲ್ಲಿನ ವರ್ಣನೆಯ ಕೆಲವು ವಿಶಿಷ್ಟ ಸಾಲುಗಳನ್ನು ಗಮನಿಸಬಹುದು.

"ಎಲೆಲೆ ಶಿವಲಿಂಗದೃಢನೀ ಬಂದನೀ ಬಂದ
ನೆಲೆಲೆ ನಿರ್ಮಳಸಿದ್ಧನೀ ಬಂದನೀ ಬಂದ
ಎಂಬಂತೆ ಕೋಗಿಲೆಗಳಲ್ಲಿ ಕರೆವುತ್ತಮಿರೆ
ಇಂಬಿನಿಂದರಗಿಳಿಗಳಡಿಗಡಿಗೆ ನುಡಿವು ತಿರೆ
ನಡೆದುದೇ ಬಟ್ಟೆಯಾದುದು ಶಿವನ ಮದಕರಿಗೆ
ನುಡಿದುದೇ ವೇದವಾದುದು ಲಿಂಗವಂತಂಗೆ..."[೩೧]

ಈ ಪದ್ಯದಲ್ಲಿ ಕಾಡು, ಕಾಡುಪ್ರಾಣಿಗಳ ವರ್ಣನೆ ಬಹಳ ಸುಂದರವಾಗಿ ಮೂಡಿಬಂದಿದೆ. ಅಡವಿಯಿಂದ ಅಲ್ಲಮನು ಮುಂದುವರೆದು ದಿಗ್ದೇಶಗಳನ್ನು ಸಂಚರಿಸಿ ಕಲ್ಯಾಣಕ್ಕೆ ಬರುತ್ತಾನೆ. ಅನುಭವ ಮಂಟಪದಲ್ಲಿ ಹಲವಾರು ಮಹತ್ತರ ಕೆಲಸಗಳನ್ನು ಕೈಗೊಳ್ಳುತ್ತಾನೆ. ಕೈಲಾಸಕ್ಕೆ ಬಂದ ನಂತರ ಶಿವನು ಗಣ ಪದವಿಯನ್ನು ನೀಡಿ ಅವನನ್ನು ಕರೆಸಿಕೊಳ್ಳುತ್ತಾನೆ. ಎನ್ನುವಂತೆ ಹರಿಹರನು ರಗಳೆಯಲ್ಲಿ ಮುಕ್ತಾಯ ಹಾಡಿದ್ದಾನೆ.

ಹನ್ನೆರಡನೇ ಶತಮಾನದ ಶರಣರ ಜೀವನ ಸಾಧನೆಯನ್ನು ಕುರಿತು ಹದಿನೈದನೇ ಶತಮಾನದ ನಂತರ ಹುಡುಕಾಟ ಪ್ರಾರಂಭವಾಯಿತು. ವಚನಗಳ ಸಂಗ್ರಹದ ಬಗ್ಗೆ ಹೆಚ್ಚು ಗಮನವನ್ನು ಹರಿಸಿದರು. ಆ ಸಂಧರ್ಭದಲ್ಲಿ ಅಲ್ಲಮನಿಗೆ ಸಿಗಬೇಕಾದ ಗೌರವ–ಸ್ಥಾನಮಾನ ಸಿಕ್ಕಿಲ್ಲ ಎಂಬ ಕಾರಣದಿಂದ ಅಲ್ಲಮನನ್ನು ವೈಭವೀಕರಿಸಿ ಶೂನ್ಯಸಂಪಾದನೆ, ಪ್ರಭುಲಿಂಗಲೀಲೆಗಳು ಮುಂತಾದ ಹೆಸರುಗಳಲ್ಲಿ ಬರೆಯಲು ಮುಂದಾದರು. ಬರವಣಿಗೆಗಳಲ್ಲಿ ಅಲ್ಲಮರನ್ನು ಅತಿಮಾನುಷ ವ್ಯಕ್ತಿಯನ್ನಾಗಿ, ಅವತಾರ ಪುರುಷನನ್ನಾಗಿ ಮಾಡಿ ಅಲ್ಲಮಪ್ರಭುವಿನ ಬಗ್ಗೆ ಚಿತ್ರಿಸಿದ್ದಾರೆ.

ಭಕ್ತಿ ಮಾರ್ಗದಲ್ಲಿ ಮೋಕ್ಷವನ್ನು ಪಡೆಯಬೇಕೆಂದರೆ ಎಲ್ಲಾ ಭೋಗ ಭಾಗ್ಯಗಳನ್ನು ತ್ಯಜಿಸಬೇಕು. ಹಾಗೆಯೇ ಆತ್ಮಜ್ಞಾನಕ್ಕೆ ವೈರಾಗ್ಯವೂ ಬಹಳ ಮುಖ್ಯ. ಈ ವಿಚಾರವನ್ನು ಕುರಿತು ಹೇಳಿರುವ ಸಾಲುಗಳನ್ನು ಇಲ್ಲಿ ಗಮನಿಸಬಹುದು.

"ಸುಳಿದು ಸುತ್ತುವ ವ್ಯವಹರಣೆ
ಉಳ್ಳನ್ನಕ್ಕರ ಅರಿಯೆನರಿಯೆ ನೆರ ಶಿವ ಪಥವ;
ಗುಹೇಶ್ವರನ ನಿಜವನರಿದ ಬಳಿಕ
ಅರಿಯೆನರಿಯೆ ನಾ ಲೋಕದ ಬಳಕೆಯ"[೩೨]

ಸುಳಿದು ಸುತ್ತುವ ವ್ಯವಹಾರವಿರುವವರೆಗೂ ನಿಜವಾದ ಶಿವಪಥವನ್ನು ಅರಿಯಲು ಸಾಧ್ಯವಿಲ್ಲ. ಗುಹೇಶ್ವರನ ನಿಜವನ್ನು ಅರಿತ ಬಳಿಕ ಲೋಕದ ಬಳಕೆಯ ಬಗ್ಗೆ ಚಿಂತಿಸಲಾಗುವುದಿಲ್ಲ ಎಂಬುದು ಅಲ್ಲಮ ಪ್ರಭುವಿನ ನಿಲುವು.

"ನಾ ದೇವನಲ್ಲದೆ ನೀ ದೇವನಾದರೆ ಎನ್ನನೇಕೆ ಸಲಹೆ?
ಆರೈದು ಒಂದು ಕುಡಿತೆ ನೀರನೆರೆವೆ
ಹಸಿದಾಗ ಒಂದು ತುತ್ತು ಓಗರವನಿಕ್ಕುವೆ
ನಾ ದೇವ ಕಾಣಾ ಗುಹೇಶ್ವರಾ"[೩೩]

ಅಲ್ಲಮ ಪ್ರಭುವಿನ ಮಾತಿನ ತೀಕ್ಷ್ಣತೆ ಹೆಚ್ಚು ಹರಿತವಾಗಿದ್ದು ಅವನು ದೇವನನ್ನೇ ಪ್ರಶ್ನಿಸುವ ದಿಟ್ಟತನವನ್ನು ಈ ಪದ್ಯದಲ್ಲಿ ಕಾಣಬಹುದು. ಅಲ್ಲದೆ ಈ ವಚನದಲ್ಲಿ ಅಲ್ಲಮ ಪ್ರಭು ದೇವರ ಕಲ್ಪನೆಯನ್ನೇ ಬದಲಾಯಿಸಿ ಬಿಡುತ್ತಾನೆ. ಹಸಿದು ಬಂದವರಿಗೆ ಒಂದು ತುತ್ತು ಅನ್ನನೀಡುತ್ತೇನೆ, ನೀರಡಿಸಿ ಬಂದವರಿಗೆ ನೀರನ್ನು ನೀಡುತ್ತೇನೆ. ನಾನು ದೇವನಲ್ಲದೇ ನೀ ದೇವನೇ? ಎಂದು ಪ್ರಶ್ನಿಸುತ್ತಾನೆ.

ಅಲ್ಲಮ ಪ್ರಭುವಿನ ವಚನಗಳಲ್ಲಿ ಸಂಸಾರದ ಪರಿಕಲ್ಪನೆಯನ್ನು ಕಾಣಬಹುದು

"ಸಂಸಾರವೆಂಬ ಹೆಣಬಿದ್ದರೆ ತಿನಬಂದ
ನಾಯ ಜಗಳವ ನೋಡಿರೇ !
ನಾಯ ಜಗಳವ ನೋಡಿ ಹೆಣನೆದ್ದು ನಗುತ್ತಿದೆ
ಗುಹೇಶ್ವರನೆಂಬ ಲಿಂಗವಲ್ಲಿಲ್ಲ ಕಾಣಿರೇ!"[೩೪]

ಸಂಸಾರವನ್ನು ಹೆಣಕ್ಕೆ ಹೋಲಿಸಿದ್ದು ಅದನ್ನು ತಿನ್ನಲು ಬಂದ ನಾಯಿಗಳ(ಜನರು) ಜಗಳವನ್ನು ನೋಡಿ ಜಡವಾದ ಹೆಣವೇ ಉಪಹಾಸ್ಯ ಮಾಡುತ್ತಿರುವುದನ್ನು ಇಲ್ಲಿ ಕಾಣಬಹುದು.

ಸಂಸಾರವೆಂಬ ಜಂಜಾಟದಿಂದ ಹೊರಬಂದಾಗ ಗುರಿಯನ್ನು ತಲುಪಲು ಅಥವಾ ಸಾಧಿಸಲು ಸಾಧ್ಯವೆಂದು ಹೇಳಿದ್ದಾರೆ. ಅಲ್ಲಮನು ನಿಜಜೀವನದಲ್ಲಿ ಹೆಂಡತಿಯನ್ನು ಕಳೆದುಕೊಂಡ ನಂತರ ಸಂಸಾರವಿಲ್ಲದೆ ಸಂಸಾರದಿಂದ ವಿಮುಖನಾದರೂ ಕೂಡ ಸಂಸಾರದ ಬಗ್ಗೆ ಹೇಳಿರುವುದನ್ನು ಕಾಣಬಹುದು.

ಅಲ್ಲಮನು ದೇಶ ಸಂಚಾರ ಮಾಡುವ ಸಂಧರ್ಭದಲ್ಲಿ ಮಹಾಮನೆಗೆ ಪಯಣವನ್ನು ಬೆಳೆಸುತ್ತಾನೆ. ಅಲ್ಲಿ ಜ್ಞಾನವೆಂಬ ಬೆಳಕೇ ತುಂಬಿದ್ದರಿಂದ ಜ್ಞಾನವನ್ನು ಸಮಾಜಕ್ಕೆ ತಿಳಿಸುವ ಉದ್ದೇಶವನ್ನು ಅಲ್ಲಮ ಪ್ರಭು ಹೊಂದಿದ್ದನು. ಮಹಾಜ್ಞಾನಿಯಾದ ಅಲ್ಲಮನ ಮಾತು ಜ್ಯೋತಿರ್ಲಿಂಗವಾಗಿ ಪರಿವರ್ತನೆಯಾಯಿತು.

ಮಹಾಮನೆಗೆ ಪಯಣ ಬೆಳೆಸಿದ ಸಂಧರ್ಭದಲ್ಲಿ ಅಲ್ಲಮನಿಗೆ ಮೊದಲು ಎದುರಾದದ್ದು ಮುಕ್ತಾಯಕ್ಕ. ಆ ಸಂಧರ್ಭದಲ್ಲಿ ಮುಕ್ತಾಯಕ್ಕ ಅಣ್ಣನನ್ನು ಕಳೆದುಕೊಂಡು ಮಹಾಜ್ಞಾನಿಯಾದ ಅಣ್ಣನನ್ನು ಯಾರೂ ಗುರುತಿಸಲ್ಲಿಲ್ಲ ಎಂದು ಬಹಳ ದುಃಖವನ್ನು ಅನುಭವಿಸುತ್ತಿರುತ್ತಾಳೆ. ಅವಳನ್ನು ಸಾಂತ್ವಾನ ಮಾಡಲು ಅಲ್ಲಮ ಮುಂದಾಗುತ್ತಾನೆ. ಅದನ್ನು ಈ ಸಾಲುಗಳಲ್ಲಿ ಗಮನಿಸಬಹುದು.

"ಅಂಗೈಯೊಳಗೊಂದು ಅರಳ್ದ ತಲೆಯ ಹಿಡಿದುಕೊಂಡು
ಕಂಗಳ ಮುತ್ತ ಪವಣಿಸುವಾಕೆ ನೀನಾರು ಹೇಳಾ?
ಸಂದ ಸಂಪಿಗೆಯರಳ ತುಂಬಿ ಬಂದುಂಬ ಭೇದವನರಿಯದೆ
ಹಂಬಲಿಸುವ ಪರಿತಾಪವೇನು ಹೇಳಾ?
ಒಂದೆಂಬೆನೆ?ಎರಡಾಗಿದೆ, ಎರಡೆಂಬೆನೆ? ಒಂದಾಗಿದೆ
ಅರಿವಿನೊಳಗಣ ಮುರಹಿದೇನು ಹೇಳಾ?
ದುಃಖವಿಲ್ಲದ ಅಕ್ಕೆ, ಅಕ್ಕೆ ಇಲ್ಲದ ಅನುತಾಪ
ನಮ್ಮ ಗುಹೇಶ್ವರ ಲಿಂಗದಲ್ಲಿ ತೋರುತ್ತಿದೆ,
ನೀನಾರೆಂದು ಹೇಳಾ ಎಲೆ ಅವ್ವಾ?[೩೫]

ಅಲ್ಲಮನು ಹಿಂದೆ ನೋಡಿದಂತೆ ದೇವರನ್ನೇ ಪ್ರಶ್ನೆ ಮಾಡಿದಂತಹವನು. ಇನ್ನು ಸಮಾಜದಲ್ಲಿಯೂ ಕೂಡ ನಿಷ್ಠೂರವಾದ ಮಾತಿನಿಂದ ಸಮಾಜದಲ್ಲಿ ಕೆಲವು ಬದಲಾವಣೆಗಳನ್ನು ತರುವ ಉದ್ದೇಶವನ್ನು ಹೊಂದಿದ್ದನು. ಅಲ್ಲಮ ಪ್ರಭು ಸಮಾಜದಲ್ಲಿ ಸಾಮಾನ್ಯರೊಡನೆ ಹೇಗಿದ್ದ ಎಂಬುದನ್ನು ಸ್ಪಷ್ಟಪಡಿಸಲು ರಂಗಾರೆಡ್ಡಿಯವರು ಶೂನ್ಯ ಸಂಪಾದನೆಯಲ್ಲಿ ಚಿತ್ರಿತವಾದ ಒಂದು ಪ್ರಸಂಗವನ್ನು ಇಲ್ಲಿ ದಾಖಲಿಸಿದ್ದಾರೆ. ಅದರ ಸಾಲುಗಳು

"ಸಾಗರದೊಳಗಿಪ್ಪ ಪ್ರಾಣಿಗಳು ಮತ್ತೊಂದೆಡೆಯಲ್ಲಿ ಇರಬಲ್ಲವೆ?
ಭವಸಾಗರದೊಳಗಿಪ್ಪ ಜೀವಿಗಳಿಗೆ ಅದೇ ಗತಿಯಲ್ಲದೆ
ಬೇರೆ ಮತ್ತೊಂದೆಡೆಯುಂಟೆ?
ಗುಹೇಶ್ವರನ ಲೀಲೆ ಜಗನ್ಮಯವಾದಡೆ ನಾನುಬೆರಗಾದೆನು"[೩೬]

ಅಲ್ಲಮ ಸಮಾಜದಲ್ಲಿರುವ ತೊಡಕುಗಳನ್ನು ಕಿತ್ತೆಸೆಯುವ ಯೋಚನೆಯಲ್ಲಿದ್ದ. ಹಾಗಾಗಿ ಕೆಲವು ಸಂದರ್ಭಗಳಲ್ಲಿ ಪ್ರಭುವಿನ ನಡವಳಿಕೆಯನ್ನು ಗಮನಿಸಿದಾಗ ಅನುಕಂಪ ತೋರುವ ಹಾಗೂ ಕಣ್ಣೀರಿಗೆ ಕರಗುವ ಮನಸ್ಥಿತಿಯಲ್ಲಿರಲಿಲ್ಲ ಎಂಬ ಅಂಶವನ್ನು ಗಮನಿಸಬಹುದಾಗಿದೆ.

ಅಲ್ಲಮ ಪ್ರಭು ಮತ್ತು ಸಮಾಜದ ನಡುವಿನ ಒಡನಾಟದ ಸಂಬಂಧವನ್ನು ಗಮನಿಸಿದ ರಂಗಾರೆಡ್ಡಿಯವರು ಮನುಷ್ಯ ಸಮಾಜದ ಎಲ್ಲಾ ವಲಯಗಳಿಂದ ಮುಕ್ತನಾಗಬೇಕು ಎಂಬುದು ಗೊತ್ತಾಗುತ್ತದೆ ಎಂದು ಹೇಳಿದ್ದಾರೆ.

ಸಮಾಜ ಮತ್ತು ಅಲ್ಲಮನ ನಡುವಿನ ಸಂಬಂಧವನ್ನು ಕುರಿತು "ಸಮಾಜಕ್ಕೂ-ವ್ಯಕ್ತಿಗೂ ಇಂಥ ಕಡೆಗಳಲ್ಲಿ ಇರುವ ಸಂಬಂಧವು ಪ್ರಭುತ್ವ ಹಾಗೂ ಅಧೀನತೆಯದು ವ್ಯಕ್ತಿಯ ಸ್ವಾತಂತ್ರ್ಯವನ್ನು ಕಿತ್ತುಕೊಂಡಿರುವಂತದ್ದು. ಇಂಥ ಸಂಬಂಧವೊಂದರಿಂದ ಬಿಡುಗಡೆ ಹೊಂದುವ ಒಂದು ಮುಖ್ಯವಾದ ಮಾರ್ಗವೆಂದರೆ ಸಮಾಜವು ರೂಪಿಸುವ ಎಲ್ಲ ಆವರಣಗಳಿಂದ ಪ್ರತ್ಯೇಕವಾಗುವುದು. ಈ ಪ್ರತ್ಯೇಕತೆಯ ಮುಖ್ಯ ಲಕ್ಷಣವೆಂದರೆ ಮನುಷ್ಯನು ತನ್ನನ್ನು ಅರಿಯುವುದೇ ಆಗಿದೆ."೩೭ ಎಂದು ಬಸವರಾಜ ಕಲ್ಗುಡಿಯವರು ಅಭಿಪ್ರಾಯ ಪಟ್ಟಿದ್ದಾರೆ.

ಅಲ್ಲಮ ವಚನಗಳಲ್ಲಿ ಕಾವ್ಯಾತ್ಮಕತೆಯನ್ನು ಕುರಿತು ಚರ್ಚಿಸುವ ಸಂಧರ್ಭದಲ್ಲಿ ರಂಗಾರೆಡ್ಡಿಯವರು ಆತ್ಮಶೋಧನೆ ಅಥವಾ ಅಂತರಂಗ ನಿರೀಕ್ಷಣೆಯ ವಚನಗಳು ಹೆಚ್ಚಾದ ಪ್ರಮಾಣದಲ್ಲಿ ಇಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ಅಲ್ಲಮ ವಚನಗಳಲ್ಲಿ ಕಾವ್ಯ ಸೌಂದರ್ಯವನ್ನು ಗಮನಿಸಬಹುದು. ಕಟ್ಟುಪಾಡುಗಳನ್ನು ಮೀರಿ ಧರ್ಮಗಳ ಚೌಕಟ್ಟನ್ನು ದಾಟುವ ಶಕ್ತಿ ಇವನ ಕಾವ್ಯಗಳಿಗಿದೆ. ರೂಪಕಗಳು ಹಾಗೂ ಹೋಲಿಕೆಗಳೊಂದಿಗೆ ತಮ್ಮ ಅನುಭವದ ವಿಚಾರಗಳನ್ನು ವಚನಗಳ ಮೂಲಕ ಕಟ್ಟಿದ್ದಾರೆ. ಅಲ್ಲಮ ಪ್ರಭುವಿನ ವಚನಗಳಲ್ಲಿ ಸಮಾಜದ ನ್ಯೂನತೆಗಳು, ಧರ್ಮ, ಆಧ್ಯಾತ್ಮಿಕ ವಿಷಯಗಳು ವಸ್ತುಗಳಾಗಿರುವುದನ್ನು ಗಮನಿಸಬಹುದು. ಹಾಗೆಯೇ ಪ್ರಕೃತಿಯಲ್ಲಿರುವ ವಸ್ತುಗಳನ್ನು ಕೂಡ ಬಳಕೆ ಮಾಡಿಕೊಂಡಿರುವುದು ಗಮನಿಸಬಹುದು.

"ಎತ್ತಣ ಮಾಮರ ಎತ್ತಣ ಕೋಗಿಲೆ
ಎತ್ತಣಿಂದೆತ್ತ ಸಂಬಂಧವಯ್ಯ!
ಬೆಟ್ಟದ ನೆಲ್ಲಿಕಾಯಿ ಸಮುದ್ರದ ಉಪ್ಪು
ಎತ್ತಣಿಂದೆತ್ತ ಸಂಬಂಧವಯ್ಯ!
ಗುಹೇಶ್ವರ ಲಿಂಗಕ್ಕೆಯೂ ಎನಗೆಯೂ
ಎತ್ತಣಿಂದೆತ್ತ ಸಂಬಂಧವಯ್ಯ."[೩೮]

ಇದು ಅಲ್ಲಮನ ಜನಪ್ರಿಯ ವಚನಗಳಲ್ಲಿ ಒಂದಾಗಿದ್ದು ಸಂಬಂಧದ ಎಳೆಗಳನ್ನು ಕುರಿತು ತಿಳಿಸುತ್ತದೆ. ಈ ವಚನದಲ್ಲಿ ನೀಡಿರುವ ಮಾಮರ-ಕೋಗಿಲೆ, ನೆಲ್ಲಿಕಾಯಿ-ಉಪ್ಪು, ಆಂತರಿಕ ಸಂಬಂಧಗಳನ್ನು ಸೂಚಿಸುತ್ತದೆ.

ರಂಗಾರೆಡ್ಡಿಯವರು ಅಲ್ಲಮ ಪ್ರಭುವಿಗೆ ಸಂಬಂಧಿಸಿದಂತೆ ಹಲವಾರು ವಿಚಾರಗಳನ್ನು 'ಅಲ್ಲಮ ಪ್ರಭು' ಪುಸ್ತಕದಲ್ಲಿ ಬಹಳ ವಿಸ್ತಾರವಾಗಿ ಹೇಳುವ ಪ್ರಯತ್ನ ಮಾಡಿದ್ದಾರೆ. ಅಲ್ಲದೇ ಅಲ್ಲಮಪ್ರಭುವಿನ ಬಗ್ಗೆ ಬಂದಿರುವ ಪ್ರಭುಲಿಂಗಲೀಲೆ, ಶೂನ್ಯ ಸಂಪಾದನೆ ಎಂಬ ಹಲವು ಕೃತಿಗಳಿಂದ ಕೆಲವೊಂದು ವಚನಗಳು, ಮಾಹಿತಿಗಳನ್ನು ದಾಖಲಿಸಿದ್ದಾರೆ. ಹಾಗೆಯೇ ಅಲ್ಲಮ ಪ್ರಭುವಿನ ವಸ್ತು,

ಕಾವ್ಯಾತ್ಮಕತೆ ಇನ್ನು ಮುಂತಾದವುಗಳನ್ನು ಕುರಿತು, ವಿವಿಧ ಬರವಣಿಗೆಕಾರರು ಬರೆದಿರುವ ಅಭಿಪ್ರಾಯಗಳನ್ನು ಒಳಗೊಂಡಂತೆ ಉತ್ತಮ ಅಂಶಗಳನ್ನು 'ಅಲ್ಲಮ ಪ್ರಭು' ಪುಸ್ತಕದಲ್ಲಿ ನೀಡಿದ್ದಾರೆ.

ಹೀಗೆ ಅಲ್ಲಮ ಪ್ರಭುವಿನ ಬಾಲ್ಯದ ಹಿನ್ನಲೆ, ವೈಯಕ್ತಿಕ ಜೀವನ, ಲಿಂಗವನ್ನು ಪಡೆದಿದ್ದು, ಅಲ್ಲಮನ ವಚನಗಳಲ್ಲಿ ಸಂಸಾರಿಕ ಪ್ರಜ್ಞೆ, ಮಹಾಮನೆಯ ಪಯಣ, ಅಲ್ಲಮ ಮತ್ತು ಸಮಾಜದೊಂದಿಗಿನ ಸಂಬಂಧ, ಅಲ್ಲಮ ವಚನಗಳಲ್ಲಿ ಕಾವ್ಯಾತ್ಮಕತೆ, ಇತರರ ದೃಷ್ಟಿಯಲ್ಲಿ ಅಲ್ಲಮ ಈ ಎಲ್ಲಾ ವಿಚಾರಗಳನ್ನು ಕುರಿತ ಸಂಕ್ಷಿಪ್ತ ಮಾಹಿತಿಯನ್ನು ಒಳಗೊಂಡ 'ಅಲ್ಲಮಪ್ರಭು' ಎಂಬ ಮಹತ್ವದ ಕೃತಿಯನ್ನು ರಂಗಾರೆಡ್ಡಿಯವರು ಕೊಡುಗೆಯಾಗಿ ನೀಡಿದ್ದಾರೆ.

ಕೊನೆ ಟಿಪ್ಪಣಿ

೧. ಡಾ.ರಂಗಾರೆಡ್ಡಿ ಕೋಡಿರಾಂಪುರ: ನನ್ನೂರ ಹಾಡು, ಶಂಬೂಕ ಪ್ರಕಾಶನ–೧೯೯೦, ಪು.ಸಂ. ೧೨

೨. ಡಾ.ರಂಗಾರೆಡ್ಡಿ ಕೋಡಿರಾಂಪುರ: ನನ್ನೂರ ಹಾಡು, ಶಂಬೂಕ ಪ್ರಕಾಶನ–೧೯೯೦, ಪು.ಸಂ. ೧೪

೩. ಡಾ.ರಂಗಾರೆಡ್ಡಿ ಕೋಡಿರಾಂಪುರ: ನನ್ನೂರ ಹಾಡು, ಶಂಬೂಕ ಪ್ರಕಾಶನ–೧೯೯೦, ಪು.ಸಂ. ೧೩

೪. ಡಾ.ರಂಗಾರೆಡ್ಡಿ ಕೋಡಿರಾಂಪುರ: ನನ್ನೂರ ಹಾಡು, ಶಂಬೂಕ ಪ್ರಕಾಶನ–೧೯೯೦, ಪು.ಸಂ. ೧೭

೫. ಡಾ.ರಂಗಾರೆಡ್ಡಿ ಕೋಡಿರಾಂಪುರ: ನನ್ನೂರ ಹಾಡು, ಶಂಬೂಕ ಪ್ರಕಾಶನ–೧೯೯೦, ಪು.ಸಂ. ೧೯

೬. ಡಾ.ರಂಗಾರೆಡ್ಡಿ ಕೋಡಿರಾಂಪುರ: ನನ್ನೂರ ಹಾಡು, ಶಂಬೂಕ ಪ್ರಕಾಶನ–೧೯೯೦, ಪು.ಸಂ. ೧೫

೭. ಡಾ.ರಂಗಾರೆಡ್ಡಿ ಕೋಡಿರಾಂಪುರ: ನನ್ನೂರ ಹಾಡು, ಶಂಬೂಕ ಪ್ರಕಾಶನ–೧೯೯೦, ಪು.ಸಂ. ೨೩

೮. ಡಾ.ರಂಗಾರೆಡ್ಡಿ ಕೋಡಿರಾಂಪುರ: ನನ್ನೂರ ಹಾಡು, ಶಂಬೂಕ ಪ್ರಕಾಶನ–೧೯೯೦, ಪು.ಸಂ. ೩೩

೯. ಡಾ.ರಂಗಾರೆಡ್ಡಿ ಕೋಡಿರಾಂಪುರ: ನನ್ನೂರ ಹಾಡು, ಶಂಬೂಕ ಪ್ರಕಾಶನ–೧೯೯೦, ಪು.ಸಂ. ೨೮

೧೦. ಡಾ.ರಂಗಾರೆಡ್ಡಿ ಕೋಡಿರಾಂಪುರ: ನನ್ನೂರ ಹಾಡು, ಶಂಬೂಕ ಪ್ರಕಾಶನ–೧೯೯೦, ಪು.ಸಂ. ೩೨

೧೧. ಡಾ.ರಂಗಾರೆಡ್ಡಿ ಕೋಡಿರಾಂಪುರ: ಪ್ರಕಟಿತ ಕವನ, ಪ್ರಜಾವಾಣಿ ಪತ್ರಿಕೆ, ೧೪–೧೦–೨೦೧೧

೧೨. ಡಾ.ರಂಗಾರೆಡ್ಡಿ ಕೋಡಿರಾಂಪುರ: ಪ್ರಕಟಿತ ಕವನ, ಪ್ರಜಾವಾಣಿ ಪತ್ರಿಕೆ, ೨೮–೧೧–೧೯೯೯

೧೩. ಡಾ.ರಂಗಾರೆಡ್ಡಿ ಕೋಡಿರಾಂಪುರ: ಪ್ರಕಟಿತ ಕವನ, ಪ್ರಜಾವಾಣಿ ಪತ್ರಿಕೆ, ೨೩–೦೨–೨೦೦೩

೧೪. ಡಾ.ರಂಗಾರೆಡ್ಡಿ ಕೋಡಿರಾಂಪುರ: ಸೊಲ್ಲು ಸೊಲ್ಲೆಲ್ಲ ಅಪರಂಜಿ, ನೆಲಮಾಲೆ ಪ್ರಕಾಶನ–೨೦೧೨, ಪು.ಸಂ. ೨೦

೧೫. ಡಾ.ರಂಗಾರೆಡ್ಡಿ ಕೋಡಿರಾಂಪುರ: ಸೊಲ್ಲು ಸೊಲ್ಲೆಲ್ಲ ಅಪರಂಜಿ, ನೆಲಮಾಲೆ ಪ್ರಕಾಶನ–೨೦೧೨, ಪು.ಸಂ. ೨೩

೧೬. ಡಾ.ರಂಗಾರೆಡ್ಡಿ ಕೋಡಿರಾಂಪುರ: ಸೊಲ್ಲು ಸೊಲ್ಲೆಲ್ಲ ಅಪರಂಜಿ, ನೆಲಮಾಲೆ ಪ್ರಕಾಶನ–೨೦೧೨, ಪು.ಸಂ. ೫೩

೧೭. ಡಾ.ರಂಗಾರೆಡ್ಡಿ ಕೋಡಿರಾಂಪುರ: ಸೊಲ್ಲು ಸೊಲ್ಲೆಲ್ಲ ಅಪರಂಜಿ, ನೆಲಮಾಲೆ ಪ್ರಕಾಶನ–೨೦೧೨, ಪು.ಸಂ. ೫೪

೧೮. ಡಾ.ರಂಗಾರೆಡ್ಡಿ ಕೋಡಿರಾಂಪುರ: ಸೊಲ್ಲು ಸೊಲ್ಲೆಲ್ಲ ಅಪರಂಜಿ, ನೆಲಮಾಲೆ ಪ್ರಕಾಶನ–೨೦೧೨, ಪು.ಸಂ. ೮೨

೧೯. ಡಾ.ರಂಗಾರೆಡ್ಡಿ ಕೋಡಿರಾಂಪುರ: ಸೊಲ್ಲು ಸೊಲ್ಲೆಲ್ಲ ಅಪರಂಜಿ, ನೆಲಮಾಲೆ ಪ್ರಕಾಶನ–೨೦೧೨, ಪು.ಸಂ. ೮೭

೨೦. ಡಾ.ರಂಗಾರೆಡ್ಡಿ ಕೋಡಿರಾಂಪುರ: ಸೊಲ್ಲು ಸೊಲ್ಲೆಲ್ಲ ಅಪರಂಜಿ, ನೆಲಮಾಲೆ ಪ್ರಕಾಶನ–೨೦೧೨, ಪು.ಸಂ. ೮೮

೨೧. ಡಾ.ರಂಗಾರೆಡ್ಡಿ ಕೋಡಿರಾಂಪುರ: ಸೊಲ್ಲು ಸೊಲ್ಲೆಲ್ಲ ಅಪರಂಜಿ, ನೆಲಮಾಲೆ ಪ್ರಕಾಶನ–೨೦೧೨, ಪು.ಸಂ. ೧೩೨

೨೨. ಡಾ.ರಂಗಾರೆಡ್ಡಿ ಕೋಡಿರಾಂಪುರ: ಶ್ರೀಶ್ರೀ,
ಕರ್ನಾಟಕ ಸಾಹಿತ್ಯ ಅಕಾಡೆಮಿ-೧೯೯೪, ಪು.ಸಂ. ೩೫

೨೩. ಡಾ.ರಂಗಾರೆಡ್ಡಿ ಕೋಡಿರಾಂಪುರ: ಶ್ರೀಶ್ರೀ,
ಕರ್ನಾಟಕ ಸಾಹಿತ್ಯ ಅಕಾಡೆಮಿ-೧೯೯೪, ಪು.ಸಂ. ೩೬

೨೪. ಡಾ.ರಂಗಾರೆಡ್ಡಿ ಕೋಡಿರಾಂಪುರ: ಶ್ರೀಶ್ರೀ,
ಕರ್ನಾಟಕ ಸಾಹಿತ್ಯ ಅಕಾಡೆಮಿ-೧೯೯೪, ಪು.ಸಂ. ೩೭

೨೫. ಡಾ.ರಂಗಾರೆಡ್ಡಿ ಕೋಡಿರಾಂಪುರ: ಶ್ರೀಶ್ರೀ,
ಕರ್ನಾಟಕ ಸಾಹಿತ್ಯ ಅಕಾಡೆಮಿ-೧೯೯೪, ಪು.ಸಂ. ೫೧

೨೬. ಡಾ.ರಂಗಾರೆಡ್ಡಿ ಕೋಡಿರಾಂಪುರ: ಶ್ರೀಶ್ರೀ,
ಕರ್ನಾಟಕ ಸಾಹಿತ್ಯ ಅಕಾಡೆಮಿ-೧೯೯೪, ಪು.ಸಂ. ೭೨

೨೭. ಡಾ.ರಂಗಾರೆಡ್ಡಿ ಕೋಡಿರಾಂಪುರ: ಶ್ರೀಶ್ರೀ,
ಕರ್ನಾಟಕ ಸಾಹಿತ್ಯ ಅಕಾಡೆಮಿ-೧೯೯೪, ಪು.ಸಂ. ೯೭

೨೮. ಡಾ.ರಂಗಾರೆಡ್ಡಿ ಕೋಡಿರಾಂಪುರ: ಶ್ರೀಶ್ರೀ,
ಕರ್ನಾಟಕ ಸಾಹಿತ್ಯ ಅಕಾಡೆಮಿ-೧೯೯೪, ಪು.ಸಂ. ೧೩೮

೨೯. ಡಾ.ರಂಗಾರೆಡ್ಡಿ ಕೋಡಿರಾಂಪುರ: ಗುಬ್ಬಿ ವೀರಣ್ಣ,
ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ-೨೦೦೯, ಪು.ಸಂ. ೩೫

೩೦. ಡಾ.ರಂಗಾರೆಡ್ಡಿ ಕೋಡಿರಾಂಪುರ: ಅಲ್ಲಮಪ್ರಭು,
ಶ್ರೀ ಬಸವ ಅಧ್ಯಯನ ಪೀಠ-೨೦೧೫, ಪು.ಸಂ. ೩೦

೩೧. ಡಾ.ರಂಗಾರೆಡ್ಡಿ ಕೋಡಿರಾಂಪುರ: ಅಲ್ಲಮಪ್ರಭು,
ಶ್ರೀ ಬಸವ ಅಧ್ಯಯನ ಪೀಠ-೨೦೧೫, ಪು.ಸಂ. ೩೪

೩೨. ಡಾ.ರಂಗಾರೆಡ್ಡಿ ಕೋಡಿರಾಂಪುರ: ಅಲ್ಲಮಪ್ರಭು,
ಶ್ರೀ ಬಸವ ಅಧ್ಯಯನ ಪೀಠ-೨೦೧೫, ಪು.ಸಂ. ೪೬

೩೩. ಡಾ.ರಂಗಾರೆಡ್ಡಿ ಕೋಡಿರಾಂಪುರ: ಅಲ್ಲಮಪ್ರಭು,
ಶ್ರೀ ಬಸವ ಅಧ್ಯಯನ ಪೀಠ–೨೦೧೫, ಪು.ಸಂ. ೪೯

೩೪. ಡಾ.ರಂಗಾರೆಡ್ಡಿ ಕೋಡಿರಾಂಪುರ: ಅಲ್ಲಮಪ್ರಭು,
ಶ್ರೀ ಬಸವ ಅಧ್ಯಯನ ಪೀಠ–೨೦೧೫, ಪು.ಸಂ. ೫೮

೩೫. ಡಾ.ರಂಗಾರೆಡ್ಡಿ ಕೋಡಿರಾಂಪುರ: ಅಲ್ಲಮಪ್ರಭು,
ಶ್ರೀ ಬಸವ ಅಧ್ಯಯನ ಪೀಠ–೨೦೧೫, ಪು.ಸಂ. ೭೧

೩೬. ಡಾ.ರಂಗಾರೆಡ್ಡಿ ಕೋಡಿರಾಂಪುರ: ಅಲ್ಲಮಪ್ರಭು,
ಶ್ರೀ ಬಸವ ಅಧ್ಯಯನ ಪೀಠ–೨೦೧೫, ಪು.ಸಂ. ೯೦

೩೭. ಡಾ.ರಂಗಾರೆಡ್ಡಿ ಕೋಡಿರಾಂಪುರ: ಅಲ್ಲಮಪ್ರಭು,
ಶ್ರೀ ಬಸವ ಅಧ್ಯಯನ ಪೀಠ–೨೦೧೫, ಪು.ಸಂ. ೯೨

೩೮. ಡಾ.ರಂಗಾರೆಡ್ಡಿ ಕೋಡಿರಾಂಪುರ: ಅಲ್ಲಮಪ್ರಭು,
ಶ್ರೀ ಬಸವ ಅಧ್ಯಯನ ಪೀಠ–೨೦೧೫, ಪು.ಸಂ. ೧೦೭

ಅಧ್ಯಾಯ: ೪

ಸಾಹಿತ್ಯೇತರ ಕ್ಷೇತ್ರದಲ್ಲಿ ಡಾ.ರಂಗಾರೆಡ್ಡಿಯವರ ಕೊಡುಗೆ

ಡಾ.ರಂಗಾರೆಡ್ಡಿಯವರು ಜಾನಪದ, ಸಾಹಿತ್ಯ ಕ್ಷೇತ್ರಗಳಲ್ಲಿ ಮಾತ್ರವಲ್ಲದೆ ಸಾಹಿತ್ಯೇತರ ಕ್ಷೇತ್ರದಲ್ಲಿ ಕೂಡ ಅಪಾರವಾದ ಸಾಧನೆಯನ್ನು ಮಾಡಿದ್ದಾರೆ. ಇವರು ತುಂಬಾ ಕ್ರಿಯಾಶೀಲ ವ್ಯಕ್ತಿಯಾಗಿ ನಾಟಕಗಳ ಮೂಲಕ ಜನರಿಗೆ ಅರಿವನ್ನು ಮೂಡಿಸುವ ಕೆಲಸ ಮಾಡಿದ್ದಾರೆ.ಇವರು ಸಮಾಜದ ಬದಲಾವಣೆಗಾಗಿ ಅನೇಕ ಚಳುವಳಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಚಳುವಳಿಯಲ್ಲಿ ಪಾಲ್ಗೊಂಡು ಶೋಷಣೆಯ ವಿರುದ್ಧ ಮತ್ತು ಶೋಷಿತರ ಪರವಾಗಿ ಬಂಡಾಯದ ಮನೋಭಾವವನ್ನು ತೋರಿದ್ದಾರೆ. ಕೇವಲ ಸಾಹಿತ್ಯಿಕ ಬರವಣಿಗೆಗೆ ಮಾತ್ರ ಸೀಮಿತಗೊಳ್ಳದೇ ಸಾಹಿತ್ಯೇತರ ಕ್ಷೇತ್ರದಲ್ಲಿಯೂ ರಂಗಾರೆಡ್ಡಿಯವರ ಪಾತ್ರ ಬಹಳ ಪ್ರಮುಖವಾದುದು.

೪.೧ ಬೀದಿ ನಾಟಕ

ಬೀದಿನಾಟಕಗಳಲ್ಲಿ ದಲಿತ ಕವಿ ಸಿದ್ಧಲಿಂಗಯ್ಯನವರ ಹಾಡುಗಳನ್ನು ಬಳಸಿಕೊಂಡರು. ಬೀದಿನಾಟಕಗಳನ್ನು ಅಭಿನಯಿಸುವ ಮೂಲಕ ಬೀದಿನಾಟಕ ಚಳುವಳಿಯನ್ನು ಗೌರಿಬಿದನೂರಿನಲ್ಲಿ ಪ್ರಾರಂಭಿಸಿದರು ಎಂದರೆ ತಪ್ಪಾಗಲಾರದು. ರಾಷ್ಟ್ರೀಯ ಸೇವಾ ಸಂಘದ ಯೋಜನಾಧಿಕಾರಿ ಆಗಿದ್ದಾಗ ಹತ್ತು ದಿನಗಳ ಕಾಲ ವಿಶೇಷ ಶಿಬಿರ ಕೈಗೊಂಡಿದ್ದರು. ಪ್ರತಿದಿನ ಸಾಯಂಕಾಲ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದರು. ಆ ಸಂದರ್ಭದಲ್ಲಿ ಮೊದಲನೇ ದಿನ ಬೀದಿನಾಟಕ ಕಾರ್ಯಕ್ರಮವನ್ನು ಹಮ್ಮಿಕೊಂಡರು. ಅದರಲ್ಲಿ 'ಬೆಳೆದವರು' ಎಂಬ ಸಮುದಾಯ ನಾಟಕವನ್ನು ಅಭಿನಯಿಸಿದರು. ಇದರಿಂದ ಆ ಊರಿನ ಜನರು ತುಂಬಾ ಸಂತೋಷಪಟ್ಟರು. ಉಪನ್ಯಾಸಕರಾಗಿ ಬೀದಿಯಲ್ಲಿ ನಾಟಕ ಮಾಡುವ ರಂಗಾರೆಡ್ಡಿಯವರ ಪ್ರತಿಭೆಯನ್ನು ಕಂಡು ಆಶ್ಚರ್ಯವನ್ನು ವ್ಯಕ್ತಪಡಿಸಿದರು. ಸಂತೋಷಪಟ್ಟು ಮತ್ತೊಂದು ದಿನ ಬೀದಿನಾಟಕಕ್ಕೆ ಊರಿನ ಜನರು ಒತ್ತಾಯ ಪಡಿಸಿದರು. ಆಗ ರಂಗಾರೆಡ್ಡಿಯವರು ಸಾರ್ವಜನಿಕ ಒತ್ತಾಯಕ್ಕೆ ಮಣಿದು ಬೀದಿನಾಟಕ ಮಾಡಲು ಒಪ್ಪಿಕೊಂಡರು. ಊರಿನ ಜನರೊಂದಿಗೆ ಊರಿನ ಸಮಸ್ಯೆಗಳನ್ನು ಕುರಿತು ಚರ್ಚಿಸಿದರು. ನಂತರ

'ಸೊಸೈಟಿ' ಬಗ್ಗೆ ಇರುವ ಸಮಸ್ಯೆಯನ್ನು ತಿಳಿದರು. ಆಗ ರಂಗಾರೆಡ್ಡಿಯವರು ನಾಟಕದ ರೂಪುರೇಖೆಯನ್ನು ತಯಾರಿಸಿಕೊಂಡು 'ಒಂದು ಸೊಸೈಟಿ ಕಥೆ' ಎಂಬ ಬೀದಿ ನಾಟಕವನ್ನು ಮಾಡಿದರು. ಈ ನಾಟಕವನ್ನು ನೋಡಿ ಊರಿನ ಜನರೆಲ್ಲರು ಈ ನಾಟಕದಲ್ಲಿದ್ದ ಎಲ್ಲಾ ವಿಚಾರಗಳು, ನಮ್ಮ ಊರಿನಲ್ಲಿರುವ ಸಮಸ್ಯೆಗಳೇ ಆಗಿವೆ ಎಂದು ಒಪ್ಪಿಕೊಂಡರು. ಆ ನಾಟಕದಲ್ಲಿ ಗೌಡ, ತಹಶೀಲ್ದಾರ, ಜನಪ್ರತಿನಿಧಿ, ಕಾಳಸಂತೆಕೋರ ಹೀಗೆ ಪಾತ್ರಗಳನ್ನು ಸೃಷ್ಟಿಸಿ, ಒಂದು ಸೊಸೈಟಿಯೇ ಬದಲಾಗುವಷ್ಟರ ಮಟ್ಟಿಗೆ ಆ ನಾಟಕ ಪ್ರಭಾವವನ್ನು ಬೀರಿತು. ಈ ನಾಟಕ ಜನರಲ್ಲಿ ಹೋರಾಟದ ಮನೋಭಾವನೆಯನ್ನು ಹುಟ್ಟುಹಾಕಿ ಹೋರಾಟದ ಬೀಜವನ್ನು ಬಿತ್ತಿತು. ಈ ನಾಟಕ ನಡೆಯುವ ಸಮಯದಲ್ಲಿ 'ವ್ಯವಸಾಯ ಸೇವಾ ಸಹಕಾರ ಸಂಘ'ದ ಕಾರ್ಯದರ್ಶಿ ಇರಲಿಲ್ಲ. ಆತ ಊರಿಗೆ ಬಂದ ನಂತರ ಆತನ ಪರವಾದ ಜನರು ಎಲ್ಲಾ ವಿಚಾರಗಳನ್ನು ಅವರಿಗೆ ತಿಳಿಸಿದರು. ಹಾಗೆಯೇ ಸಮಸ್ಯೆಯನ್ನು ಅನುಭವಿಸಿದ ಜನರು ಅವನ ವಿರುದ್ಧ ತಿರುಗಿ ಬೀಳುವಂತಾಗಿ ಅವನನ್ನು ಪ್ರಶ್ನಿಸಿದರು. ಆಗ ಎಲ್ಲಾ ವಿಚಾರವನ್ನು ತಿಳಿದುಕೊಂಡು ರಾತ್ರೋರಾತ್ರಿ ವರ್ಗಾವಣೆ ಮಾಡಿಸಿಕೊಂಡು ಪರಾರಿಯಾದನು. ಅಂದಿನಿಂದ ಊರಿನ ಸೊಸೈಟಿಗೆ ಬೇರೆ ಹೊಸ ಅಧಿಕಾರಿ ಬಂದು ಎಲ್ಲವೂ ಕೂಡ ಉತ್ತಮವಾಗಿ ನಡೆಯುತ್ತಾ ಸಾಗಿತು. ಹೀಗೆ ಸಂಪೂರ್ಣ ಒಂದು ಸೊಸೈಟಿಯೇ ಬದಲಾಗುವಂತಾಯಿತು. ನಾಟಕ ಏನೆಲ್ಲಾ ಪ್ರಭಾವ, ಪರಿಣಾಮಗಳನ್ನು ಬೀರುತ್ತದೆ ಎಂಬುದಕ್ಕೆ ಇದು ಒಂದು ಜೀವಂತ ಉದಾಹರಣೆಯಾಗಿದೆ. ಅಂದರೆ ಸಾಹಿತ್ಯದ ಒಂದು ಭಾಗವಾದ ನಾಟಕದಿಂದಲೂ, ಒಂದು ಸಮಾಜದ ಪರಿವರ್ತನೆಯನ್ನು ಮಾಡಬಹುದು. ದೃಶ್ಯ ಮಾಧ್ಯಮಕ್ಕೆ ಜನರ ಪ್ರತಿಕ್ರಿಯೆ ಯಾವ ಮಟ್ಟಕ್ಕೆ ಇರುತ್ತದೆ ಎಂಬುದನ್ನು ತಿಳಿಯಬಹುದು. ಸಮಾಜದ ಬದಲಾವಣೆಗೆ ಇಲ್ಲಿ ಸಾಹಿತ್ಯವು ಒಂದು ಸಾಕ್ಷಿಯಾಗಿದೆ.

ಇದೇ ರೀತಿಯ ಇನ್ನೊಂದು ಘಟನೆಯನ್ನು ವಿವರಿಸುವುದಾದರೆ ಎಸ್.ಎಮ್. ಕೃಷ್ಣರವರು ಮುಖ್ಯಮಂತ್ರಿಯಾಗಿದ್ದಾಗ ಎಂ.ವೈ.ಘೋರ್ಪಡೆ ಗ್ರಾಮಾಭಿವೃದ್ದಿಯ ಮಂತ್ರಿಯಾಗಿದ್ದರು ಎಸ್.ಎಂ.ಕೃಷ್ಣರವರು ಸ್ತ್ರೀ ಶಕ್ತಿ ಯೋಜನೆಗಳನ್ನು ಜಾರಿಗೆ ತಂದರು ಆ ಸಂಧರ್ಭದಲ್ಲಿ ರಂಗಾರೆಡ್ಡಿಯವರು ಅಂತಹ ಸ್ತ್ರೀ-ಶಕ್ತಿ ಯೋಜನೆಗಳ ಬಗ್ಗೆ ಒಂದು 'ಸ್ತ್ರೀಶಕ್ತಿ ಯೋಜನೆ' ಎಂಬ ಹಾಡನ್ನು ಬರೆದರು, ಅಭಿನಯದ ಮೂಲಕ ರೂಪಕ ಮಾಡಿದರು. ಇದನ್ನು ನೋಡಿದ ಘೋರ್ಪಡೆ ಅದನ್ನು ಮೆಚ್ಚಿ ೫೦೦ರೂ ಇನಾಮು ನೀಡಿದರು ನಂತರ ಅಭಿನಯಿಸಿದವರ ಪರಿಚಯವನ್ನು

ಮಾಡಿಕೊಂಡರು ಹಾಗೇ ರಂಗಾರೆಡ್ಡಿಯವರ ಪರಿಚಯವೂ ಆಯಿತು, ಪರಿಚಯದ ನಂತರ ರಂಗಾರೆಡ್ಡಿಯವರು ಒಬ್ಬ ಪ್ರೊಫೆಸರ್ ಆಗಿ ಈ ರೀತಿಯಾಗಿ ಬೀದಿಯಲ್ಲಿ ಅಭಿನಯ ಮಾಡಿದ್ದನ್ನು ಕಂಡು ಆಶ್ಚರ್ಯಚಕಿತರಾದರು. ಕಾಲೇಜಿನ ಸಮಯದ ನಂತರ ಈ ರೀತಿಯಾಗಿ ನಾಟಕ ಅಭೀನಯದಲ್ಲಿ ಪಾಲ್ಗೊಳ್ಳುವುದನ್ನು ಪ್ರಶಂಸಿಸಿ, 'ವಿದ್ಯೆ ಕೇವಲ ನಾಲ್ಕು ಗೋಡೆಗಳ ಮಧ್ಯೆ ಯಾಂತ್ರಿಕವಾಗಿ ಕಲಿಸುವಂತಹದಲ್ಲ, ಜನಗಳ ಮಧ್ಯೆಯೇ ಇದ್ದು ಅವರ ಅರಿವನ್ನು ಜಾಗೃತಗೊಳಿಸುವುದಕ್ಕೆ' ಎಂಬ ಪ್ರಶಂಸೆಯ ಮಾತುಗಳನ್ನು ಘೋರ್ಪಡೆಯವರು ರಂಗಾರೆಡ್ಡಿಯವರನ್ನು ಕುರಿತು ಮಾತನಾಡಿದರು. ನಾಟಕಾಭಿನಯದ ಮೂಲಕ ಒಂದು ಸೊಸೈಟಿಯು ಬದಲಾವಣೆಯಾದದ್ದು ಹಾಗೂ ಘೋರ್ಪಡೆಯಂತಹ ಮೇಲಾಧಿಕಾರಿ ಇನಾಮು ನೀಡಿ, ಪ್ರಶಂಸೆ ಮಾಡಿದ್ದು ರಂಗಾರೆಡ್ಡಿಯವರ ವೃತ್ತಿ ಜೀವನದಲ್ಲಿ ಮರೆಯಲಾಗದಂತಹ ಎರಡು ಘಟನೆಗಳಾಗಿ ಉಳಿದಿವೆ. ಹೀಗೆ ಊರು-ಊರು ಸುತ್ತಾಡಿ ಆ ಊರಿನಲ್ಲಿರುವ ಗೌಡರ ದರ್ಪದ ಆಳ್ವಿಕೆ, ಶೋಷಣೆ ಅಥವಾ ಇತರೆ ಸಮಸ್ಯೆಗಳು ಇದ್ದಲ್ಲಿ ಆ ಸಮಸ್ಯೆಗಳ ಕುರಿತು ನಾಟಕಗಳನ್ನು, ಹಾಡುಗಳನ್ನು ಹಾಡುತ್ತಿದ್ದರು. ಆ ಸಂಧರ್ಭದಲ್ಲಿ ಒಬ್ಬ ಭೂಮಾಲಿಕನು ಯಾರು ಆ ವ್ಯಕ್ತಿ? ಎಂದು ಪ್ರಶ್ನಿಸಿದನು. ಆಗ ದೌರ್ಜನ್ಯದಿಂದ ಅವರನ್ನು ಹೊಡೆಯಲು ಆ ಭೂಮಾಲೀಕನ ಕಡೆಯವರು ಬಂದರು. ಆಗ ಆ ವ್ಯಕ್ತಿಯನ್ನು ರಂಗಾರೆಡ್ಡಿಯವರು ತಡೆದು ನಿಲ್ಲಿಸಿ ನಾವು ಒಂದು ಹಾಡನ್ನು ಹಾಡ್ತೀವಿ ಅದನ್ನು ಕೇಳಿದ ಮೇಲೆ ಹೊಡೆಯುವೆಯಂತೆ ಎಂದು ಹೇಳಿ ಸಿದ್ಧಲಿಂಗಯ್ಯನವರ ಹಾಡನ್ನು ಪ್ರಾರಂಭಿಸಿದರಂತೆ. 'ದೊಡ್ಡಗೌಡರ ಮನೆಯ ಬಾಗಿಲಿಗೆ ನಮ್ಮ ಮೂಳೆಯೇ ತೋರಣ, ನಮ್ಮ ಜನಗಳ ಕಾಲು ಕೈ ಕಂಬ ಅವರ ಹಟ್ಟಿಗೆ' ಎಂಬ ಹಾಡನ್ನು ಕೇಳಿದ ಆ ವ್ಯಕ್ತಿಯು ನಮ್ಮ ಪರವಾಗಿಯೇ ಹಾಡನ್ನು ಹೇಳುತ್ತಿದ್ದಾರೆ ಎಂದು ತಿಳಿದು ಮನಸೋತು ಕರಗಿಹೋಗಿ, ಏನನ್ನು ಮಾತನಾಡದೆ ರಂಗಾರೆಡ್ಡಿಯವರಿಗೆ ಕೈಮುಗಿದು ಹೋದರಂತೆ. ಆದ್ದರಿಂದ ಹಾಡು-ಹಾಡಿನ ಪರಿಣಾಮ ಜನಗಳ ಮನಸ್ಸನ್ನು ಹೇಗೆ ಬದಲಾಯಿಸುತ್ತದೆ ಎಂಬುದನ್ನು ಮತ್ತು ಅದರ ಪ್ರಭಾವವನ್ನು ಇಲ್ಲಿ ಕಾಣಬಹುದು. ಸಾಹಿತ್ಯವನ್ನು ಕ್ರಿಯಾರೂಪಕ್ಕೆ ಇಳಿಸಿದಾಗ ಅದರ ಪ್ರಭಾವ ಉತ್ತಮವಾದ ಪರಿಣಾಮ, ಫಲಿತಾಂಶವನ್ನು ಸೂಚಿಸುತ್ತದೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ.

ಎಸ್.ಎಂ.ಕೃಷ್ಣರವರು ಸ್ತ್ರೀಶಕ್ತಿ ಯೋಜನೆಗಳನ್ನು ಜಾರಿಗೆ ತಂದರು. ಆ ಸಂದರ್ಭದಲ್ಲಿ ಡಾ.ರಂಗಾರೆಡ್ಡಿಯವರು ಸ್ತ್ರೀಶಕ್ತಿ ಯೋಜನೆಗಳ ಬಗ್ಗೆ 'ಸ್ತ್ರೀಶಕ್ತಿ ಯೋಜನೆ' ಎಂಬ ಹಾಡನ್ನು ಬರೆದಿದ್ದಾರೆ. ಈ ಹಾಡು '೧೭-೧೨-೨೦೦೦ರಲ್ಲಿ ಪ್ರಜಾವಾಣಿ' ಸಂಚಿಕೆಯಲ್ಲಿ ಪ್ರಕಟವಾಗಿದೆ. ಸ್ತ್ರೀಶಕ್ತಿ ಯೋಜನೆ ಸಾಲುಗಳನ್ನು ಇಲ್ಲಿ ಗಮನಿಸಬಹುದು.

"ಸ್ತ್ರೀ ಶಕ್ತಿ ಯೋಜನೆಯು
ಬಂದಿದೆ ನಮ್ಮನೆ ಬಾಗಲಿಗೆ
ನಮ್ಮ ದುಡಿಮೆ ನಮ್ಮ ಕೈಗೆ
ಬಂದಂಥ ಲಾಭ ನಮಗೆ"

"ಕಲಿಕಾ ಕೇಂದ್ರಕ್ಕೋಗಿ ನಮ್ಮ
ಅಜ್ಞಾನ ಕಳೆದುಕೊಂಡು
ಅಕ್ಷರವ ಕಲಿತು ಕೊಂಡು
ಬೆಳಕಿನೆಡೆಗೆ ಸಾಗುವಂಥ ಸ್ತ್ರೀಶಕ್ತಿ"[೧]

೪.೨ ದಲಿತ ಚಳುವಳಿ

ದಲಿತರ ಬಗ್ಗೆ ಹೆಚ್ಚು ಕಾಳಜಿಯನ್ನು ಹೊಂದಿರುವ ರಂಗಾರೆಡ್ಡಿಯವರು ದಲಿತರ ಪರವಾಗಿ ಹೋರಾಡಿದ್ದಾರೆ. ಶೋಷಣೆಯಿಂದ ವಿಮುಕ್ತರನ್ನಾಗಿ ಮಾಡಲು ದಲಿತ ಚಳುವಳಿಯಲ್ಲಿ ಪಾಲ್ಗೊಂಡಿದ್ದಾರೆ. ಬೇರೆಯವರ ಮನೆಗಳಲ್ಲಿ ಜೀತ ಮಾಡುತ್ತಿದ್ದ ದಲಿತ ಮಕ್ಕಳನ್ನು ತಂದು ತಮ್ಮ ಮನೆಯಲ್ಲಿ ಇಟ್ಟುಕೊಂಡಿದ್ದರು. ಅಲ್ಲದೆ ತಮ್ಮ ಚಳುವಳಿಯಲ್ಲಿ ಅವರನ್ನು ಸೇರಿಕೊಂಡು ಸೈಕಲ್ ಜಾಥಗಳನ್ನು ಮಾಡುತ್ತಿದ್ದರು. ದಲಿತ ಚಳುವಳಿಯಲ್ಲಿ ಎಪ್ಪತ್ತೈದು ದಲಿತ ಕುಟುಂಬಗಳಿಗೆ ಸ್ವತಂತ್ರ ನೆಲೆಯನ್ನು ಕಲ್ಪಿಸಿಕೊಟ್ಟಿದ್ದು ಒಂದು 'ಪರಮಾವಧಿ ಘಟ್ಟ'ವಾಗಿದೆ. ದೊಡ್ಡ ದೊಡ್ಡ ಜಮೀನ್ದಾರರ ಮನೆಗಳಲ್ಲಿ ಜೀತ ಮಾಡುತ್ತಿದ್ದ ಎಪ್ಪತ್ತೈದು ದಲಿತ ಕುಟುಂಬಗಳನ್ನು ಹೊರತಂದು ಜೀತಪದ್ಧತಿಯಿಂದ ವಿಮುಕ್ತಿಗೊಳಿಸಿ, ನೆಲೆಯನ್ನು ಕಲ್ಪಿಸಿಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ದೊಡ್ಡ ಹೋರಾಟವನ್ನು

ನಡೆಸಿ ಸರ್ಕಾರಕ್ಕೆ ಸೇರಿದ್ದ ಈಚಲು ವನವನ್ನು ಆಕ್ರಮಣ ಮಾಡಿದರು. ಈಚಲು ವನವನ್ನು ಧ್ವಂಸಗೊಳಿಸಿ ಗುಡಿಸಲುಗಳನ್ನು ನಿರ್ಮಾಣ ಮಾಡಿ ಅವರಿಗೆ ಆಶ್ರಯ ಭದ್ರತೆಯನ್ನು ಮಾಡಿಕೊಡಲಾಯಿತು. ಅದು ಈಗ ಗೌರಿಬಿದನೂರಿನ ನಾಗಸಂದ್ರದ ಶಂಬೂಕನಗರವಾಗಿದೆ. ಆಶ್ರಯ ದೊರಕಿಸಿಕೊಟ್ಟ ನಂತರ ಅವರು ನೇಯ್ಗೆ, ಕುಂಬಾರಿಕೆ, ಬಟ್ಟೆ ಹೊಲಿಯುವಿಕೆ, ಹಪ್ಪಳ ಮಾಡುವುದು ಮುಂತಾದ ಗುಡಿ ಕೈಗಾರಿಕೆಗಳ ಕೆಲಸಗಳನ್ನು ಕಲಿತು ಸ್ವಾತಂತ್ರ ಜೀವನವನ್ನು ರೂಪಿಸಿಕೊಳ್ಳುವಲ್ಲಿ ರಂಗಾರೆಡ್ಡಿಯವರು ಪ್ರಮುಖ ಪಾತ್ರವನ್ನು ವಹಿಸಿದ್ದಾರೆ. ಈ ಸಂದರ್ಭದಲ್ಲಿ ಎಂ.ಎಲ್.ಎ.ಆಗಿದ್ದ ಮುಖ್ಯಮಂತ್ರಿ ಚಂದ್ರುರವರು ಸಹ ಇದಕ್ಕೆ ಸಹಕಾರವನ್ನು ನೀಡಿದರು.

೪.೩ ಮರಳು ಉಳಿಸುವ ಹೋರಾಟ

ಮರಳು ದಂಧೆಯಿಂದ ಸಾಕಷ್ಟು ತೊಂದರೆಗಳಿವೆ. ಆದ್ದರಿಂದ ತಕ್ಷಣವೆ ಮರಳು ದಂಧೆ ವ್ಯವಹಾರವನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂದು, ರಂಗಾರೆಡ್ಡಿಯವರು ಮರಳು ಉಳಿಸುವ ಹೋರಾಟವನ್ನು ಮಾಡಿದರು. ಅಲ್ಲಿಯೂ ಕೂಡ ನಾಟಕಗಳನ್ನು ಮಾಡುವುದು, ಅದರ ಮೂಲಕ ಜನಜಾಗೃತಿಯನ್ನು ಮೂಡಿಸುವುದು ಇವರ ಉದ್ದೇಶವಾಗಿತ್ತು. ಮರಳು ಉಳಿಸುವ ಹೋರಾಟದ ಬಗ್ಗೆ ಮಾಡಿದ ನಾಟಕ 'ಉಸಿರು ನಿಂತ ಹೊಳೆ'. ಈ ನಾಟಕವನ್ನು ಹೊಳೆದಂಡೆಯಲ್ಲಿರುವ ಎಲ್ಲಾ ಊರುಗಳಲ್ಲಿ ಬೀದಿನಾಟಕವನ್ನು ಪ್ರದರ್ಶಿಸಿ ಜನಜಾಗೃತಿಯನ್ನು ಮೂಡಿಸಿದರು. ಇದರ ಪ್ರಭಾವದಿಂದ ಕೆಲವರು ಮರಳು ದಂಧೆಯನ್ನು ನಿಲ್ಲಿಸಿದರು, ಕೆಲವರು ನಿಲ್ಲಿಸಲಿಲ್ಲ. ಕೆಲವರು ಪ್ರಭಾವಿ ವ್ಯಕ್ತಿಗಳ ಸಹಾಯದಿಂದ ದಂಧೆಯನ್ನು ಮುಂದುವರೆಸಿದರು. ಈ ಹೋರಾಟ ಸ್ವಲ್ಪಮಟ್ಟಿಗೆ ಸಫಲತೆಯನ್ನು ಕಂಡಿತು. ಈ ರೀತಿಯಾಗಿ ಮರಳು ಉಳಿಸುವ ಹೋರಾಟದಲ್ಲಿಯೂ ಪ್ರಮುಖವಾದ ಪಾತ್ರವನ್ನು ಡಾ.ರಂಗಾರೆಡ್ಡಿಯವರು ವಹಿಸಿದ್ದಾರೆ.

೪.೪ ಸಾಕ್ಷರತಾ ಆಂದೋಲನ

ಕೇಂದ್ರಸರ್ಕಾರದಿಂದ ಸಾಕ್ಷರತಾ ಆಂದೋಲನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಒಂದು ಆಂದೋಲನಕ್ಕೆ ಸಂಬಂಧಿಸಿದಂತೆ 'ಕೋಲಾರ ಜಿಲ್ಲೆ ಸಾಕ್ಷರತಾ ಸಂಸ್ಥೆ' ಅಡಿಯಲ್ಲಿ

'ಕಾರ್ಯಕಾರ್ಯಸಮಿತಿಯ ಸದಸ್ಯ'ರಾಗಿ ರಂಗಾರೆಡ್ಡಿಯವರನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಕೋಲಾರ ಜಿಲ್ಲೆಯಲ್ಲಿ ಸಾಕ್ಷರತೆಯ ಕುರಿತು ಆರು ವರ್ಷಗಳ ಕಾಲ, ನಿರಂತರವಾಗಿ ಕೆಲಸವನ್ನು ಮಾಡಿ ಹಲವಾರು ಸಾಕ್ಷರತಾ ಹಾಡುಗಳನ್ನು ಡಾ.ರಂಗಾರೆಡ್ಡಿಯವರು ಬರೆದರು. ಅವುಗಳನ್ನು ಹಾಡುವುದರ ಮೂಲಕ ಜನರಲ್ಲಿ ಅರಿವನ್ನು ಉಂಟುಮಾಡುತ್ತಿದ್ದರು. ಇದರ ಪರಿಣಾಮವಾಗಿ ಇದೇ ಅವಧಿಯಲ್ಲಿ ಅಲ್ಲಿನ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಎರಡು ವರ್ಷಗಳ ಕಾಲ, ಯಾವುದೇ ಭ್ರಷ್ಟಾಚಾರವಿಲ್ಲದೆ ಕೆಲಸಗಳು ಆಗಿದ್ದವು. ಈ ಸಂಧರ್ಭದಲ್ಲಿ ಜನರಿಗೆ ಅರಿವನ್ನು ಮೂಡಿಸಲು ರಂಗಾರೆಡ್ಡಿಯವರು ಹೆಚ್ಚು ಶ್ರಮ, ಕಾಳಜಿಯನ್ನು ವಹಿಸಿದ್ದಾರೆ. ಹಾಗೆಯೇ ಸಂಪನ್ಮೂಲ ವ್ಯಕ್ತಿಯಾಗಿ, ಪುಸ್ತಕ ಬರೆಯುವ ಯೋಜನೆಯಲ್ಲಿಯೂ ಶ್ರೀಯುತರು ತಮ್ಮನ್ನು ತೊಡಗಿಸಿಕೊಂಡಿದ್ದರು.

೪.೫ ವಿದುರಾಶ್ವತ್ಥ ಅಭಿವೃದ್ಧಿ

ವಿದುರಾಶ್ವತ್ಥದಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಒಂಭತ್ತು ಜನ ವೀರ ಹುತಾತ್ಮರ ಸಮಾಧಿಗಳು ಅಲ್ಲಿವೆ. ಆದರೆ ಅವುಗಳ ಬಗ್ಗೆ ಯಾರೂ ಸಹ ಗಮನ ಹರಿಸದೆ ತುಂಬಾ ಹೊಲಸಿನ ತಾಣವಾಗಿತ್ತು. ಇಂತಹ ಸಂಧರ್ಭದಲ್ಲಿ ಡಾ.ರಂಗಾರೆಡ್ಡಿಯವರು ಅದರ ಅಭಿವೃದ್ಧಿಯ ಬಗ್ಗೆ ಚಿಂತನೆಯನ್ನು ಮಾಡಿದರು. ಆ ಪ್ರಾಂತ್ಯದ ಆಗಿನ ಎಂ.ಎಲ್.ಎ. ಸಹಾಯದಿಂದ, ಆ ಸ್ಥಳವನ್ನು ಅಭಿವೃದ್ಧಿ ಪಡಿಸುವ ಕೆಲಸಕ್ಕೆ ಕೈ ಹಾಕಿದರು. ಇದರ ಫಲವಾಗಿ ಹೊಲಸಿನಿಂದ ಕೂಡಿದ್ದ ಹುತಾತ್ಮರ ಸಮಾಧಿಗಳ ತಾಣ ಒಂದು ಸುಂದರ ಉಧ್ಯಾನವನವಾಗಿ ಮಾರ್ಪಟ್ಟಿದೆ. ಹೀಗೆ ಅದರ ಅಭಿವೃದ್ಧಿಯ ಬೀಜವನ್ನು ಶ್ರೀಯುತರು ಹಾಕಿದ್ದು, ಇದರ ಬಗ್ಗೆ ಎಂ.ಎಲ್.ಎ.ಶಿವಶಂಕರರೆಡ್ಡಿ ಅವರಿಗೆ ಸಲಹೆ ನೀಡಿ ಅವರ ಸಹಕಾರದಿಂದ ಉದ್ಯಾನವನ ನಿರ್ಮಾಣವಾಯಿತು. ಈಗಲೂ ಕೂಡ ರಂಗಾರೆಡ್ಡಿಯವರು ವಿದುರಾಶ್ವತ್ಥ ಅಭಿವೃದ್ಧಿ ಮಂಡಳಿ ಸದಸ್ಯರಾಗಿದ್ದಾರೆ. ಅಲ್ಲಿ ಎರಡು ರಂಗಮಂದಿರಗಳಿವೆ ಹಾಗೂ ಒಂದು ದೊಡ್ಡ ಸುಂದರ ಉದ್ಯಾನವನವಿದೆ. ನಿತ್ಯ ಅದರ ಸ್ವಚ್ಛತೆ ಕಾಪಾಡಲು ಹಾಗೂ ನಿತ್ಯ ಹೂ ಇಡಲು ಒಬ್ಬ ವ್ಯಕ್ತಿಯನ್ನು ನೇಮಕ ಮಾಡಲಾಗಿದೆ. ಸಮಾಧಿಯು ಪರಿಶುದ್ಧತೆಯಿಂದ ಕೂಡಿದ್ದು, ಸುಂದರ ಉದ್ಯಾನವನದಲ್ಲಿ ಹುತಾತ್ಮರ ಸಮಾಧಿಯ ಚೌಕವಾಗಿ ಮಾರ್ಪಟ್ಟಿದೆ. ಇಲ್ಲಿ ಎರಡು ಕಟ್ಟಡಗಳಿವೆ. ಅದರಲ್ಲಿ ಒಂದು ಸ್ವಾತಂತ್ರ್ಯ ವೀರಸೌಧವಾಗಿದ್ದು, ಅದರ ಒಳಭಾಗದಲ್ಲಿ ಸ್ವಾತಂತ್ರ್ಯ

ಸಂಗ್ರಾಮದ ಚಿತ್ರಪಟಗಳ ಗ್ಯಾಲರಿಯನ್ನು ಹೊಂದಿದೆ. ಇನ್ನೊಂದು ಕಟ್ಟಡದಲ್ಲಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಂಬಂಧಿಸಿದ ಒಂದು ಗ್ರಂಥಾಲಯವನ್ನು ಅಭಿವೃದ್ಧಿಪಡಿಸಲಾಗಿದೆ. ಇವೆಲ್ಲದರ ಅಭಿವೃದ್ಧಿಯಲ್ಲಿ ರಂಗಾರೆಡ್ಡಿಯವರ ಪಾತ್ರ ಬಹಳ ಪ್ರಮುಖವಾದುದು, ಹಾಗೂ ಮಹತ್ವಯುತವಾದದು. ಹೀಗೆ ವಿದುರಾಶ್ವತ್ಥದ ಅಭಿವೃದ್ಧಿಯ ಚಿಂತನೆಯು ರಂಗಾರೆಡ್ಡಿಯವರ ಸಾಹಿತ್ಯೇತರ ಸಾಧನೆಗಳಲ್ಲಿ ಒಂದಾಗಿದೆ.

ಶೋಷಣೆ, ದೌರ್ಜನ್ಯ, ಅನ್ಯಾಯ ಕಂಡ ಕಡೆ ಅವರು ಜನಪರ ಹೋರಾಟಗಳಲ್ಲಿ ಪಾಲ್ಗೊಳ್ಳುತ್ತಾರೆ. ಇಷ್ಟೆಲ್ಲಾ ಚಳುವಳಿ ಹೋರಾಟಗಳಲ್ಲಿ ಭಾಗವಹಿಸಿದ ಅವರು ಸ್ವಂತ ಜೀವನದಲ್ಲಿ ಅದೇ ರೀತಿಯಲ್ಲಿ ನಡೆದುಕೊಳ್ಳುತ್ತಾರೆ. ಅಂದರೆ 'ಹೇಳುವುದನ್ನೇ ಮಾಡುತ್ತಾರೆ, ಮಾಡುವುದನ್ನೇ ಹೇಳುತ್ತಾರೆ' ಇವರ ವಿಚಾರಗಳನ್ನು ಗಮನಿಸಿದಾಗ ಇವರು ಪುರೋಹಿತ ವರ್ಗದ ವಿರೋಧಿಗಳೆಂದೇ ಹೇಳಬಹುದು. ಏಕೆಂದರೆ ಪುರೋಹಿತರು ಸಂಪೂರ್ಣ ಶೋಷಣೆ ಮಾಡುವವರೆಂದು ರಂಗಾರೆಡ್ಡಿಯವರು ಹೇಳುತ್ತಾರೆ. ಇದಕ್ಕೆ ರಂಗಾರೆಡ್ಡಿಯವರ ವೈಯಕ್ತಿಕ ವಿಷಯವನ್ನು ಇಲ್ಲಿ ಉದಾಹರಣೆಯಾಗಿ ನೋಡಬಹುದು. ಪುರೋಹಿತ ವರ್ಗವನ್ನು ವಿರೋಧಿಸುವ ಶ್ರೀಯುತರು ಪುರೋಹಿತರಿಲ್ಲದೆ ಮದುವೆಯಾಗಿರುವುದು ಇದಕ್ಕೆ ಸಾಕ್ಷಿಯಾಗಿದೆ. ಬರವಣಿಗೆಯಲ್ಲಿ ಹೇಳಿದ್ದೇ ತಮ್ಮ ವೈಯಕ್ತಿಕ ಜೀವನದಲ್ಲಿ ಸಾಧಿಸಿ ತೋರಿಸಿದ್ದಾರೆ. ಹೀಗೆ ಡಾ.ರಂಗಾರೆಡ್ಡಿ ಕೋಡಿರಾಂಪುರರವರು ಕೇವಲ ಸಾಹಿತ್ಯಕ್ಕೆ ಮಾತ್ರ ಸೀಮಿತವಾಗಿರದೆ ಸಾಹಿತ್ಯೇತರ ಕ್ಷೇತ್ರದಲ್ಲಿಯೂ ಜನಪರವಾದ ಹೋರಾಟ, ಚಳುವಳಿಗಳಲ್ಲಿ ಭಾಗವಹಿಸಿ ಪ್ರಮುಖವಾದ ಪಾತ್ರ ವಹಿಸಿದ್ದಾರೆ. ಅದೇ ರೀತಿ ಜನಪ್ರಿಯತೆಯನ್ನು ಸಹ ಗಳಿಸಿದ್ದಾರೆ. ಬೀದಿನಾಟಕ, ದಲಿತ ಪರ ಹೋರಾಟ, ಸಾಕ್ಷಾರತಾ ಆಂದೋಲನ, ಮರಳು ದಂಧೆಯ ವಿರುದ್ಧ ಹೋರಾಟಗಳಿಂದ ಜನಸಮಾಜದ ಮೇಲೆ ಕೂಡ ಅಪಾರವಾದ ಪ್ರಭಾವವನ್ನು ಬೀರಿದ್ದಾರೆ.

ಕೊನೆಟಿಪ್ಪಣಿ

೧. ಡಾ.ರಂಗಾರೆಡ್ಡಿ ಕೋಡಿರಾಂಪುರ: ಪ್ರಕಟಿತ ಸ್ತ್ರೀಶಕ್ತಿ ಹಾಡು,
ಪ್ರಜಾವಾಣಿ ಪತ್ರಿಕೆ-೧೭-೧೨-೨೦೦೦

ಅಧ್ಯಾಯ: ೫

ರಂಗಾರೆಡ್ಡಿಯವರ ಕುರಿತು

೫.೧ ಡಾ.ರಂಗಾರೆಡ್ಡಿ ಕೋಡಿರಾಂಪುರ ಅವರ ಪರಿಚಯ

ಜನ್ಮ ದಿನಾಂಕ:೦೮-೧೦-೧೯೫೨

ಸೇವೆಗೆ ಸೇರಿದ ದಿನಾಂಕ:೦೮-೧೨-೧೯೭೮

ನಿವೃತ್ತಿಯಾದ ದಿನಾಂಕ:೩೧-೧೦-೨೦೧೨

ವಿದ್ಯಾರ್ಹತೆ:

ಎಂ.ಎ(ಕನ್ನಡ) ಪ್ರಥಮ ದರ್ಜೆ-೫ನೇರ‍್ಯಾಂಕ್, ಮೈಸೂರು ವಿಶ್ವವಿದ್ಯಾಲಯ ೧೯೭೫

ಡಾಕ್ಟರ್ ಆಫ್ ಫಿಲಾಸಫಿ(ಪಿಎಚ್.ಡಿ) ಕುವೆಂಪು ವಿಶ್ವವಿದ್ಯಾಲಯ ೧೯೯೭

ಅ) ಸ್ನಾತಕ ಅನುಭವ

೧೯೭೮ರಿಂದ ಖಾಯಂ ಉಪನ್ಯಾಸಕ

೧೯೮೬ರಿಂದ ಹಿರಿಯ ಶ್ರೇಣಿ ಉಪನ್ಯಾಸಕ(ರೀಡರ್)

೧೯೯೪ರಿಂದ ಆಯ್ಕೆ ಶ್ರೇಣಿ ಉಪನ್ಯಾಸಕ (ಪ್ರಾಧ್ಯಾಪಕ)

ಕನ್ನಡ ವಿಭಾಗ, ಎ.ಇ.ಎಸ್. ನ್ಯಾಷನಲ್ ಪದವಿ ಕಾಲೇಜು

ಗೌರಿಬಿದನೂರು-೫೬೧೨೦೮

ಆ) ಸ್ನಾತಕೋತ್ತರ ಅನುಭವ

೧. ೨೦೦೫ ರಿಂದ ಜಾನಪದ ಲೋಕದ ಡಿಪ್ಲಮೋ ತರಗತಿಗಳ ಅತಿಥಿ ಉಪನ್ಯಾಸಕ

೨. ೨೦೧೩ ರಿಂದ ಎಂ.ಇ.ಎಸ್. ಕಾಲೇಜಿನ ಕನ್ನಡ ಸ್ನಾತಕೋತ್ತರ ಕೇಂದ್ರದ ಸಂಯೋಜಕ

ಪ್ರಕಟಣೆಗಳು:

ಅ) ಸ್ವಂತ ಕೃತಿಗಳು

೧. ಲಿಖಿತ ಜಾನಪದ (೧೯೭೯) ಲೇಖನ ಸಂಕಲನ.

೨. ನನ್ನೂರ ಹಾಡು (೧೯೯೦) ಕವನ ಸಂಕಲನ.

೩. ಸಾಧನೆಗಳು_ಯೋಜನೆಗಳು (೧೯೯೩).

೪. ಶ್ರೀ ಶ್ರೀ (೧೯೯೪) ತೆಲುಗು ಕವಿ ಶ್ರೀ ಶ್ರೀ ಬದುಕು ಬರಹ.

೫. ಬಂಡಾಯ ಜಾನಪದ (೧೯೯೫) ಗುಂಡ್ಮಿ ಜಾನಪದ ಪ್ರಶಸ್ತಿ ಪಡೆದ ಲೇಖನ ಸಂಕಲನ.

೬. ಕೋಲಾರ ಜಿಲ್ಲೆಯ ಜನಪದ ಕಲೆಗಳ ಅಧ್ಯಯನ (೧೯೯೭).

೭. ತೇರು ಹರಿದಾವು (೧೯೯೮) ಜಾನಪದ ಅಕಾಡೆಮಿ ಬೆಳೆದು ಬಂದದಾರಿ.

೮. ಗಂಧದ ಮಡುವ ಕಲಕೂತ (೨೦೦೩) ಲೇಖನ ಸಂಕಲನ.

೯. ಗುಬ್ಬಿ ವೀರಣ್ಣ (೨೦೦೯) ಜೀವನ ಸಾಧನೆ.

೧೦. ಜನಪದ ಸಂಸ್ಕೃತಿ (೨೦೧೦) ಲೇಖನ ಸಂಕಲನ.

೧೧. ಸೊಲ್ಲು ಸೊಲ್ಲೆಲ್ಲ ಅಪರಂಜಿ (೨೦೧೨) ವಿಮರ್ಶಾ ಸಂಕಲನ.

೧೨. ನೆಲದೊಡಲ ಪ್ರೀತಿ (೨೦೧೪) ಜಾನಪದ ಲೇಖನಗಳ ಸಂಕಲನ

೧೩. ಅಲ್ಲಮ ಪ್ರಭು (೨೦೧೫) ವಿಶ್ಲೇಷಣೆ.

೧೪. ಒಣ ಭೂಮಿ ಭತ್ತ (ಅಚ್ಚಿನಲ್ಲಿ) ನವ ಸಾಕ್ಷರರ ಪುಸ್ತಕ.

ಆ) ಸಂಪಾದಿತ ಕೃತಿಗಳು:

೧. ಶಿಕ್ಷಣ ಮತ್ತು ವೈಚಾರಿಕತೆ (೧೯೮೩) ಲೇಖನ ಸಂಕಲನ.

೨. ಕಮಲಾಭಿನಂದನ (೧೯೮೫) ಅಭಿನಂದನಾ ಗ್ರಂಥ.

೩. ಜಾನಪದ ಗಂಗೋತ್ರಿ (೧೯೮೯) ಲೇಖನ ಸಂಕಲನ.

೪. ಜಾನಪದ ೧೯೯೩ (೧೯೯೫) ೯೩ನೇ ಸಾಲಿನ ಲೇಖನ ಸಂಕಲನ.

೫. ವಿಚಾರ ದರ್ಶನ (೨೦೦೧) ಎರಡನೇ ಬಿ.ಎ. ಪಠ್ಯ.

೬. ಜಾನಪದ ಸಿದ್ಧಾಂತಗಳು (೨೦೦೩) ಲೇಖನ ಸಂಕಲನ.

೭. ಜಾನಪದ ಅನ್ವಯಿಕತೆ (೨೦೦೩) ಲೇಖನ ಸಂಕಲನ.

೮. ಕಲ್ಲರಳಿ ಹೂವಾಗಿ (೨೦೦೩) ಸಾಕ್ಷರತಾ ಪ್ರೇರಕರ ಕೈಪಿಡಿ.

೯. ತತ್ವ ಪದಗಳು (೨೦೦೫).

೧೦. ಹೊಸಗನ್ನಡ ಕವಿತೆ (೨೦೦೫) ಎರಡನೇ ಬಿ.ಎ. ಪಠ್ಯ.

೧೧. ಸಾಹಿತ್ಯ ಸಂವಾದ (೨೦೦೭) ಪ್ರಥಮ ಬಿ.ಎಸ್ಸಿ. ಪಠ್ಯ.

೧೨. ಸಾಹಿತ್ಯ ಸಂವಾದ (೨೦೦೮) ದ್ವಿತೀಯ ಬಿ.ಎಸ್ಸಿ. ಪಠ್ಯ.

೧೩. ಸಾಹಿತ್ಯ ಸಮನ್ವಯ (೨೦೧೦) ಪ್ರಥಮ ಸೆಮ್ ಬಿ.ಎ. ಪಠ್ಯ.

೧೪. ಸಾಹಿತ್ಯ ಸಮನ್ವಯ (೨೦೧೧) ದ್ವಿತೀಯ ಸೆಮ್ ಬಿ.ಎ. ಪಠ್ಯ.

೧೫. ಬಯಲು ಸೀಮೆ ಭಾಷಾವೈವಿಧ್ಯ (೨೦೧೧).

೧೬. ಕರ್ನಾಟಕ ಸಂಗಾತಿ (೨೦೧೨).

೧೭. ಕನ್ನಡರಾಮ.

೧೮. ಕೋಲಾರ ಜಿಲ್ಲಾ ಗ್ರಾಮ ಚರಿತ್ರ ಕೋಶ (ಅಚ್ಚಿನಲ್ಲಿ).

ಭಾಗವಹಿಸಿದ ಹಲವಾರು ರಾಜ್ಯ ಮತ್ತು ರಾಷ್ಟ್ರ ಮಟ್ಟದ ವಿಚಾರ ಸಂಕಿರಣಗಳು

೧. ಮೈಸೂರು, ಬೆಂಗಳೂರು, ಕುವೆಂಪು ವಿಶ್ವವಿದ್ಯಾಲಯಗಳ ಹಲವಾರು ವಿಚಾರ ಸಂಕಿರಣಗಳಲ್ಲಿ ಪ್ರಬಂಧ ಮಂಡನೆ.

೨. ಕರ್ನಾಟಕ ಸಾಹಿತ್ಯ ಅಕಾಡೆಮಿ, ಜಾನಪದ ಅಕಾಡೆಮಿ, ನಾಟಕ ಅಕಾಡೆಮಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಹಲವಾರು ವಿಚಾರ ಸಂಕಿರಣಗಳಲ್ಲಿ ಪ್ರಬಂಧ ಮಂಡನೆ.

೩. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ ಕನ್ನಡ ಸಾಹಿತ್ಯ ಸಂಘಟನೆಗಳ ಹಲವಾರು ಕಾರ್ಯಕ್ರಮ/ವಿಚಾರ ಸಂಕಿರಣಗಳಲ್ಲಿ ಪ್ರಬಂಧ ಮಂಡನೆ.

೪. ವಿಶ್ವ ಕನ್ನಡ ಸಮ್ಮೇಳನ, ದಸರಾ ಕವಿ ಸಮ್ಮೇಳನ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಪ್ರಬಂಧ ಮಂಡನೆ/ಕವನ ವಾಚನ.

೫. ಆಕಾಶವಾಣಿ ಬೆಂಗಳೂರು, ಭದ್ರಾವತಿ, ಮೈಸೂರು ನಿಲಯಗಳಲ್ಲಿ ಚಿಂತನ, ಪುಸ್ತಕ ವಿಮರ್ಶೆ, ಚರ್ಚೆಗಳಲ್ಲಿ ಸಹಭಾಗಿತ್ವ.

೬. ಪದವಿ ತರಗತಿಗಳ ಪಠ್ಯಪುಸ್ತಕ ಸಮಿತಿ, ಕನ್ನಡ ಅಧ್ಯಯನ ಮಂಡಳಿ, ಕನ್ನಡ ಪರೀಕ್ಷಾ ಮಂಡಳಿಗಳ ಸದಸ್ಯ.

೭. ಪಿ.ಯು.ಸಿ. ಪಠ್ಯದ ಕರುಡು ಪರಿಶೀಲನಾ ಕಾರ್ಯಗಾರದಲ್ಲಿ ಸಹಭಾಗಿತ್ವ.

೮. ನ್ಯಾಷನಲ್ ಎಜುಕೇಷನ್ ಸೊಸೈಟಿಯ ಎಫ್.ಐ.ಪಿ. ಆಯ್ಕೆ ಸಮಿತಿ ಸದಸ್ಯ
(೧೯೯೯ ಮತ್ತು ೨೦೦೪)

ಪ್ರಶಸ್ತಿ-ಬಹುಮಾನ

೧. ತುಮಕೂರು ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ (೨೦೧೨)

೨. ಕರ್ನಾಟಕ ನಾಟಕ ಅಕಾಡೆಮಿಯ "ಸುವರ್ಣ ಕರ್ನಾಟಕ ಪ್ರಶಸ್ತಿ" (೨೦೦೭೦

೩. ೧೯೯೫ರ ಸಾಲಿನ ಉತ್ತಮ ಪುಸ್ತಕ "ಬಂಡಾಯ ಜಾನಪದ "
ಕೈ ಗುಂಡ್ಮಿ ಜಾನಪದ ಪ್ರಶಸ್ತಿ (೧೯೯೫೦

೪. ಮೈಸೂರು ವಿಶ್ವವಿದ್ಯಾಲಯದ ಪ್ರಬಂಧ ಸ್ಪರ್ಧೆಯಲ್ಲಿ
"ಹೊನ್ನ ಶೆಟ್ಟಿ ಪ್ರಶಸ್ತಿ"(೧೯೭೫)

೫. ಸಮಗ್ರ ಸಾಧನೆಗಾಗಿ ಬಯಲು ಸೀಮೆ ಜಾನಪದ ಪ್ರಶಸ್ತಿ (೨೦೦೩)

೬. ಬೆಸ್ಟ್ ಸಿಟಿಜನ್ ಆಫ್ ಇಂಡಿಯಾ ಪ್ರಶಸ್ತಿ (೨೦೦೬)

೭. ೨೦೧೪ರ ಸಾಲಿನ ಉತ್ತಮ ಪುಸ್ತಕ "ನೆಲದೊಡಲ ಪ್ರೀತಿ"ಗೆ
ಸೈಯದ್ ಜಮೀರುಲ್ಲಾ ಷರೀಫ್ ಸಾಹಿತ್ಯ ಪ್ರಶಸ್ತಿ (೨೦೧೬)

೮. ೨೦೧೫ರ ಸಾಲಿನ ಉತ್ತಮ ಪುಸ್ತಕ "ಅಲ್ಲಮ ಪ್ರಭು"ಗೆ ಸರ್.ಎಂ.ವಿಶ್ವೇಶ್ವರಯ್ಯ
ರಾಷ್ಟ್ರೀಯ ಪ್ರಶಸ್ತಿ(೨೦೧೬)

ವಿಳಾಸ :

ಡಾ.ರಂಗಾರೆಡ್ಡಿ ಕೋಡಿರಾಂಪುರ
ನಂ.೩೯, 'ಇರುವಂತೆ'
೧ನೇ ಮುಖ್ಯರಸ್ತೆ, ಪಾರ್ವತಿ ನಗರ
ಲಗ್ಗೆರೆ, ಬೆಂಗಳೂರು-೫೬೦೦೫೮
ದೂರವಾಣಿ: ೯೪೪೮೩೨೧೧೪೯

೫.೨ ಡಾ.ರಂಗಾರೆಡ್ಡಿರವರೊಂದಿಗಿನ ಮಾತುಕತೆ

೧) ನಿಮ್ಮ ಸಾಹಿತ್ಯ ರಚನೆಗೆ ಪ್ರೇರಣೆಯಾದ ವಸ್ತು ಯಾವುದು?

ನನ್ನ ಸಾಹಿತ್ಯ ರಚನೆಗೆ ಪ್ರೇರಣೆಯ ವಸ್ತು ಇಂತಹದ್ದೇ ಎಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಇಡೀ ಪ್ರಕೃತಿಯೇ ಪ್ರೇರಣೆಯ ವಸ್ತು ಎಂದು ಹೇಳಬಹುದು.

೨) ಮೊದಲಿಗೆ ಬರವಣಿಗೆಯನ್ನು ಹೇಗೆ ರೂಢಿಸಿಕೊಳ್ಳಲಾಯಿತು?

ನಮ್ಮೂರಿನಲ್ಲಿ ನಾನು ಚಿಕ್ಕವನಿದ್ದಾಗ ಜ್ಯೋಗೆರ ಆಟ, ದೊಂಬರ ಆಟ, ಬಯಲಾಟ ನಡೆಯುತ್ತಿದ್ದವು. ಈ ರೀತಿಯ ನಾಟಕಗಳನ್ನು ನೋಡಿ, ಅದನ್ನು ನಾವು ಏಕೆ ಮಾಡಬಾರದು? ಎಂದು ಯೋಚನೆಮಾಡಿ, ಎಲ್ಲಿ ಏನೇ ನೋಡಿದರು ಅದನ್ನು ನಾನು ಮಾಡಿ ನೋಡುತ್ತಿದ್ದೆ. ಈ ರೀತಿಯಾಗಿ ನಾನು ಕತ್ತಿ ತಿರುಗಿಸುವ ಕತ್ತಿವರಸೆಯನ್ನು ಕಲಿತುಕೊಂಡೆ. ಹಾಗೆಯೇ ನಾನು ಹತ್ತನೇ ತರಗತಿಯಲ್ಲಿದ್ದಾಗ ಬರಗೂರು ರಾಮಚಂದ್ರಪ್ಪನವರು ನಮ್ಮ ಗುರುಗಳಾಗಿದ್ದರು. ಅವರು ಕವನಗಳನ್ನು ಬರೆಯುತ್ತಿದ್ದರು. ಅದನ್ನು ನೋಡಿ ನಾನು ಕವನಗಳನ್ನು ರಚನೆ ಮಾಡುವುದನ್ನು ಕಲಿತು ಆಗಲೇ ೩/೪ ಮಾತ್ರೆಗಳ ಭಾಮಿನಿ ಶೈಲಿಯಲ್ಲಿ ಕವನವನ್ನು ರಚಿಸಿದ್ದೆ. ಬರೆದ ಕವನಗಳು ಪ್ರಕಟಣೆಗೊಂಡವು. ಆಗ ಬರೆಯುವಂತಹ ಆತ್ಮ ವಿಶ್ವಾಸ ಇನ್ನಷ್ಟು ಹೆಚ್ಚಾಗಿ ಹೀಗೆ ಬರವಣಿಗೆಯನ್ನು ರೂಢಿಸಿಕೊಳ್ಳುತ್ತಾ ಬಂದೆ.

೩) ನಿಮ್ಮ ಬರವಣಿಗೆ ರೂಪುಗೊಳ್ಳುವುದರ ಹಿಂದೆ ಯಾರದಾದರೂ ಪ್ರಭಾವವಿದೆಯಾ?

ಮೊದಲಿಗೆ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ನನ್ನ ಗುರುಗಳಾದ ವಿ.ಆರ್.ದೊಡ್ಡ ರಾಮಣ್ಣನವರು ನಮ್ಮ ಭಾಷೆಯ ಬಗ್ಗೆ ಅಭಿಮಾನವನ್ನು ಮೂಡಿಸಿದರು. ನಂತರ ಪ್ರೌಢಶಾಲೆಯಲ್ಲಿ ಬರಗೂರು ರಾಮಚಂದ್ರಪ್ಪ ನವರು ನನ್ನ ಗುರುಗಳಾಗಿದ್ದರು. ಅವರು ನಾನು ಬರೆಯುತ್ತಿದ್ದ ಬರವಣಿಗೆಯ ಶೈಲಿಯನ್ನು ನೋಡಿ ಇಷ್ಟಪಟ್ಟು ನನ್ನನ್ನು ಮತ್ತಷ್ಟು ಪ್ರೋತ್ಸಾಹಿಸಿದರು. ನಾನು ಬಿ.ಎ. ಓದುತ್ತಿದ್ದಾಗ ಬರಗೂರು ರಾಮಚಂದ್ರಪ್ಪನವರ ಗುರುಗಳಾದ ಎಚ್.ಜಿ.ಸಣ್ಣ ಗುಡ್ಡಯ್ಯನವರು ನನ್ನ ಗುರುಗಳಾಗಿದ್ದರು. ಅವರೂ ಕೂಡ ಹೆಚ್ಚಿನ ಪ್ರೋತ್ಸಾಹವನ್ನು ನೀಡಿದರು. ಇವರ ಪ್ರಭಾವ ನನ್ನ ಬರವಣಿಗೆಯ ಮೇಲಾಗಿದೆ ಎಂದು ಹೇಳಬಹುದು.

೪) ನೀವು ಜಾನಪದ ಸಾಹಿತ್ಯಕ್ಕೆ ಹೆಚ್ಚು ಗಮನ ಹರಿಸಲು ಕಾರಣವೇನು?

ನಾನು ಹುಟ್ಟಿ ಬೆಳೆದದ್ದು ಗ್ರಾಮೀಣ ಪರಿಸರದಲ್ಲಿ ಹಾಗೂ ಜನಪದ ಹುಟ್ಟುವುದೇ ಗ್ರಾಮೀಣ ಪ್ರದೇಶದಲ್ಲಿ. ಅಲ್ಲದೆ ಜನಪದ ಸಾಹಿತ್ಯದಲ್ಲಿ 'ಸಾಮೂಹಿಕ ಹಿತಾಸಕ್ತಿ' ಇರುತ್ತದೆ. ಇಲ್ಲಿ ಒಬ್ಬರ ಹಿತಾಸಕ್ತಿಯಿರುವುದಿಲ್ಲ. ಆದ್ದರಿಂದ ನನಗೆ ಜನಪದವೆಂದರೆ ಬಹಳ ಆಸಕ್ತಿ. ಹಳ್ಳಿಯಲ್ಲಿ ಕಳೆದ ಸಮಯ, ಆಡಿದ ಆಟ, ನೆನಪುಗಳು, ನೋಡಿದ, ಅನುಭವಿಸಿದ ಅನುಭವಗಳೇ ಸಾಹಿತ್ಯವಾಗಿ ಬಂದಿರುವುದು.

೫) ಗ್ರಾಮೀಣ ಹಿನ್ನಲೆ ನಿಮ್ಮ ಸಾಹಿತ್ಯದ ಮೇಲೆ ಹೇಗೆ ಪ್ರಭಾವ ಬೀರಿದೆ?

ಊರಿನ ಹಬ್ಬದ ಆಚರಣೆಗಳು, ಗ್ರಾಮದೇವತೆಯ ಆಚರಣೆ, ದೇವರ ಮೆರವಣಿಗೆ ಇವುಗಳಲ್ಲಿ ನನಗೆ ತುಂಬಾ ಆಸಕ್ತಿ. ಅಲ್ಲದೆ ಹಬ್ಬದ ಆಚರಣೆಗಳಲ್ಲಿನ ವೀರಗಾಸೆಆಟ, ಕತ್ತಿವರಸೆ, ಕೋಲಾಟ, ಕಂಸಾಳೆ, ಬಯಲಾಟಗಳು ನನಗೆ ತುಂಬಾ ಆಕರ್ಷಣೀಯ ಸಂದರ್ಭಗಳು. ಹಾಗಾಗಿ ಸಂಸ್ಕೃತಿ, ಕಲೆಗಳನ್ನು ಒಳಗೊಂಡ ಗ್ರಾಮೀಣ ಹಿನ್ನಲೆ ನನ್ನ ಸಾಹಿತ್ಯದ ಮೇಲೆ ಪ್ರಭಾವ ಬೀರಿದೆ.

೬) ನಿಮ್ಮ ಪ್ರಕಾರ ಶಿಷ್ಟ ಮತ್ತು ಜನಪದ ಸಾಹಿತ್ಯಗಳಿಗಿರುವ ವ್ಯತ್ಯಾಸವೇನು?

ಶಿಷ್ಟ ಸಾಹಿತ್ಯವು ಒಬ್ಬ ವ್ಯಕ್ತಿಯಿಂದ ಬರೆಯುವುದಾಗಿದೆ. ಅಲ್ಲದೆ ಒಬ್ಬ ವ್ಯಕ್ತಿಯ ವೈಯಕ್ತಿಕ ನೆಲೆ ಮತ್ತು ಅನುಭವಗಳನ್ನು ಶಿಷ್ಟಸಾಹಿತ್ಯ ಒಳಗೊಂಡಿರುತ್ತದೆ. ಅದನ್ನು ಬೇರೆಯವರು ಬದಲಿಸಲು ಸಾಧ್ಯವಿಲ್ಲ. ಜನಪದ ಸಾಹಿತ್ಯ ಒಬ್ಬ ವ್ಯಕ್ತಿಯಿಂದ ರಚನೆಯಾದುದಲ್ಲ, ಎಲ್ಲರಿಗೂ ಸಂಬಂಧಿಸಿದ್ದಾಗಿದೆ. ಜನಪದ ಸಾಹಿತ್ಯ ಬದಲಾಗುವ ಗುಣವನ್ನು ಹೊಂದಿದೆ. ಸಾಮೂಹಿಕ ಹಿತಾಸಕ್ತಿ ಹೊಂದಿದ ಈ ಸಾಹಿತ್ಯವನ್ನು ಯಾರು ಬೇಕಾದರು ಬದಲಿಸಬಹುದು ಹಾಗೂ ಯಾರು ಬೇಕಾದರೂ ಅರ್ಥ ಮಾಡಿಕೊಳ್ಳಬಹುದು.

೭) ಶಿಷ್ಟ ಸಾಹಿತ್ಯ ಮತ್ತು ಜನಪದ ಸಾಹಿತ್ಯಗಳೆರಡು ಹೇಗೆ ನಿಮ್ಮ ಸಾಹಿತ್ಯದಲ್ಲಿ ಸಮ್ಮಿಳಿತಗೊಂಡಿವೆ?

ಪೇಟೆಯ ಹೊಸವಿಚಾರಗಳು, ಹಳ್ಳಿಯ ಹಳೆಯ ವಿಚಾರಗಳು, ಎರಡೂ ಕೂಡ ನನ್ನ ಸಾಹಿತ್ಯದಲ್ಲಿ ಬಳಕೆಯಾಗಿ ಶಿಷ್ಟ ಮತ್ತು ಜಾನಪದಗಳೆರಡು ಮಿಳಿತವಾಗಿದೆ.

೮) ಅಧ್ಯಾಪಕ ವೃತ್ತಿ ನಿಮಗೆ ತೃಪ್ತಿ ನೀಡಿದೆಯೇ?

ನೂರಕ್ಕೆ ನೂರರಷ್ಟು ತೃಪ್ತಿಯನ್ನು ನೀಡಿದೆ. ಪ್ರತಿಯೊಬ್ಬ ಅಧ್ಯಾಪಕನು ಸಮಾಜದ ಜವಾಬ್ದಾರಿಯುತ ವ್ಯಕ್ತಿಯಾಗಿರಬೇಕು. ನಮ್ಮ ಅನುಭವಗಳನ್ನು, ನಮ್ಮ ಪ್ರತಿಭೆಯನ್ನು ಹೊರಹಾಕಲು ಮೊದಲಿಗೆ ವೇದಿಕೆಯನ್ನು ಒದಗಿಸಿಕೊಟ್ಟದ್ದೇ ಅಧ್ಯಾಪಕ ವೃತ್ತಿ. ಅಧ್ಯಾಪಕನು ಕೇವಲ ಪುಸ್ತಕದಲ್ಲಿನ ಪಾಠವನ್ನು ಮಾತ್ರ ಭೋದಿಸುವುದಲ್ಲ, ನಮ್ಮ ಸುತ್ತಲು ನಡೆಯುವಂತಹ ಮಹತ್ವದ ವಿಚಾರಗಳನ್ನು ಚರ್ಚಿಸಬೇಕು. ಯಾವುದೇ ಉನ್ನತ ಅಧಿಕಾರಿಯಾಗಿದ್ದರೂ, ಇಷ್ಟು ತೃಪ್ತಿ ಪಡೆಯಲು ಸಾಧ್ಯವಿರಲಿಲ್ಲ.

೯) ಯಾವ ಸಾಹಿತ್ಯ ಪ್ರಕಾರ ನಿಮಗೆ ಇಷ್ಟ?

ನನಗೆ ಇಷ್ಟವಾದ ಸಾಹಿತ್ಯ ಕವನಗಳು. ಏಕೆಂದರೆ ಎಲ್ಲರೂ ಸರಳವಾಗಿ ಅರ್ಥಮಾಡಿಕೊಳ್ಳಬಹುದು. ಲಯ, ಹಾಡಿನ ಧಾಟಿ ಇರುವುದರಿಂದ ನಾಲ್ಕಾರು ಜನರ ನಾಲಿಗೆಯ ಮೇಲೆ ಹರಿದಾಡುತ್ತವೆ.

೧೦) ನಿಮ್ಮ ಬರವಣಿಗೆಯಲ್ಲಿ ನಿಮಗೆ ಇಷ್ಟವಾದುದು ಯಾವುದು?

ನನ್ನ ಬರವಣಿಗೆಯಲ್ಲಿ ನನಗೆ ಎಲ್ಲವೂ ಇಷ್ಟ. ಅದರಲ್ಲಿಯೂ ಭೂಮಿತೂಕದ ಹೆಣ್ಣು, ನನ್ನೂರಹಾಡು, ಮರಮರದ ಬಯಕೆ ಈ ಕವನಗಳು ನನಗೆ ಅತ್ಯಂತ ಪ್ರಿಯವಾದುವುಗಳು.

೧೧) ನಿಮ್ಮ ಮುಂದಿನ ಸಾಹಿತ್ಯ ಬರವಣಿಗೆ ಯಾವ ರೀತಿ ಸಾಗುತ್ತಿದೆ?

ಸಾಹಿತ್ಯ ಬರವಣಿಗೆ ಸಾಗುತ್ತಿದೆ. ಒಂದು ನಾಟಕವನ್ನು ಬರೆಯಬೇಕೆಂಬ ಯೋಚನೆಯಲ್ಲಿದ್ದೀನಿ. ಅಲ್ಲದೆ ಹಲವಾರು ಹೊಸ ಕವನಗಳು ಪತ್ರಿಕೆಗಳಲ್ಲಿಯೂ ಪ್ರಕಟಗೊಂಡಿವೆ. ಹಾಗೂ ಒಂದು ಕವನ ಸಂಕಲನ ಮಾಡುವಷ್ಟು ಕವನಗಳನ್ನು ಬರೆದಿದ್ದೇನೆ.

೧೨) ನಿಮ್ಮ ಈ ಸಾಧನೆಯ ಹಿಂದೆ ಇನ್ನೂ ಯಾರ್ಯಾರಿದ್ದಾರೆ?

ನನ್ನ ಸಾಧನೆಯ ಹಿಂದೆ ಇಡೀ ಪರಿಸರವಿದೆ. ನನ್ನ ಗ್ರಾಮ, ಗ್ರಾಮದ ಜನರು, ಸಂಬಂಧಿಗಳು ಇದ್ದಾರೆ. ಅಲ್ಲದೆ ನನ್ನ ಬರವಣಿಗೆಯ ಪ್ರತಿ ಸಂದರ್ಭದಲ್ಲು ಸಂತೋಷ ಪಟ್ಟು ನನ್ನನ್ನು ಪ್ರೋತ್ಸಾಹಿಸಿದವರು ನನ್ನ ಅಜ್ಜಿ ಹಾಗೂ ನನ್ನ ತಂದೆ-ತಾಯಿಗಳು. ನನ್ನ ಬರವಣಿಗೆ, ಓಡಾಟದ ಸಂದರ್ಭದಲ್ಲಿ ಸಂಪೂರ್ಣ ಸಹಕಾರವನ್ನು ನೀಡಿದವರು ನನ್ನ ಶ್ರೀಮತಿ ಮತ್ತು ನನ್ನ ಮಕ್ಕಳು.

೧೩) ಹೆಚ್ಚು ಜನಪ್ರಿಯರಾಗಿದ್ದ ನಿಮಗೆ ರಾಜಕೀಯ ಕ್ಷೇತ್ರದ ಬಗ್ಗೆ ಆಸಕ್ತಿ ಇರಲಿಲ್ಲವೇ?

ರಾಜಕೀಯದಲ್ಲಿ ಆಸಕ್ತಿಯಿತ್ತು. ಏಕೆಂದರೆ ಅಧಿಕಾರದಲ್ಲಿದ್ದಾಗ ನಾಲ್ಕು ಒಳ್ಳೆಯ ಕೆಲಸಗಳನ್ನು ಮಾಡಿಸಬಹುದು. ಜೊತೆಗೆ ಅಧಿಕಾರದಲ್ಲಿದ್ದಾಗ ಹೆಚ್ಚು ಸಾಧಿಸಲು ಅವಕಾಶವಿರುತ್ತದೆ. ಬರವಣಿಗೆಯಿಂದ ಯೋಚನೆ ಹೊರಬರುತ್ತದೆ. ಆದರೆ ಅಧಿಕಾರವಿದ್ದಾಗ ಯೋಚನೆ ಕ್ರಿಯೆಯಾಗಿ ಹೊರಬರುತ್ತದೆ. ಜನಗಳ ಒತ್ತಾಯಕ್ಕೆ ಮಣಿದು ಎಂ.ಎಲ್.ಎ. ಸ್ಥಾನಕ್ಕೆ ನಾಮಪತ್ರ ಸಲ್ಲಿಕೆ ಮಾಡಲಾಗಿತ್ತು. ಆದರೆ ಕಾರಣಾಂತರಗಳಿಂದ ಅದನ್ನು ಹಿಂದುರುಗಿ ಪಡೆಯಲಾಯಿತು. ಆದರೆ ಇಂದಿನ ರಾಜಕೀಯವನ್ನು ನೋಡಿದಾಗ ಎಲ್ಲಾ ಕಡೆ ಭ್ರಷ್ಟಾಚಾರವೇ ತುಂಬಿಕೊಂಡಿದೆ. ನಮ್ಮಂತವರಿಗೆ ಈ ರಾಜಕೀಯ ಅಷ್ಟು ಸೂಕ್ತವಲ್ಲ. ಇಡೀ ಜಗತ್ತಿನಲ್ಲಿ ಭಾರತದಲ್ಲಿ ಇರುವಷ್ಟು ಕೆಟ್ಟ ರಾಜಕೀಯ ಇನ್ನೆಲ್ಲಿಯೂ ಇಲ್ಲ.

೫.೩ ವಿಮರ್ಶಕರ ದೃಷ್ಟಿಯಲ್ಲಿ ಡಾ.ರಂಗಾರೆಡ್ಡಿ ಕೋಡಿರಾಂಪುರ ರವರು

೧) ಬೆನಕನಹಳ್ಳಿ ಜಿ. ನಾಯಕ:-

ರಂಗಾರೆಡ್ಡಿ ಕೋಡಿರಾಂಪುರ ಅವರು ಬಂಡಾಯ ಸಮುದಾಯ, ದಲಿತ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತ ಬಂದಿರುವ ಬದ್ಧ ವ್ಯಕ್ತಿಯಾದರೂ ಅವರ ಪದ್ಯಗಳಲ್ಲಿ ಆಕ್ರೋಶಕ್ಕಿಂತ ವಸ್ತುಸ್ಥಿತಿಯನ್ನು, ಅದರ ಸಾಮಾಜಿಕ ರಾಜಕೀಯ ಹಿನ್ನಲೆಯಲ್ಲಿ ಗ್ರಹಿಸಿರುವ ಕಲಾತ್ಮಕ ಅಭಿವ್ಯಕ್ತಿಯಿದೆ. 'ನನ್ನೂರಹಾಡು', ಸ್ವಾತಂತ್ರ್ಯ', 'ಕೆರೆ ತುಂಬ ಕೆನ್ನೀರು', 'ಮುದುಕಿ ಹೇಳಿದ್ದು' ಮುಂತಾದ ಕವನಗಳು ನೋವಿನ ಪದರುಗಳನ್ನು ಬಿಚ್ಚುತ್ತಲೇ ಅದಕ್ಕೆ ಕಾರಣವಾಗಿರುವ ಸ್ಥಿತಿಯನ್ನು ವಿಶ್ಲೇಷಿಸುವ ಶೋಧನಾತ್ಮಕ ಗುಣವನ್ನು ಒಳಗೊಂಡಿವೆ. 'ಮರಮರದ ಬಯಕೆ', 'ಬುರುಖದೊಳಗಿನ ಬಾಲೆ', 'ಜಂಬೂ ಸವಾರಿ' ಮುಂತಾದ ಕವನಗಳು ಜಾನಪದದ ಲಯಗೇಯತೆಯನ್ನು ಬಳಸಿಕೊಳ್ಳುತ್ತಲೇ ಪ್ರತಿಮೆಗಳ ಮೂಲಕ ಅನುಭವವನ್ನು ಕಟ್ಟಿಕೊಡುತ್ತವೆ. ತೀರ ಸಾಮಾನ್ಯವಾದ ಸಂಗತಿಗಳ ಬಗ್ಗೆಯೂ ತುಂಬಾ ಆತ್ಮೀಯವಾಗಿ ಬರೆಯುವ ಇವರ ಸಂಕಲನದಲ್ಲಿ ಹರಳುಗಟ್ಟಿದ ನೋವು, ವಿಷಾದ, ಜೀವನ ಪ್ರೀತಿ ಎದ್ದು ಕಾಣುತ್ತವೆ.

೨) ಡಾ.ಕೃಷ್ಣಮೂರ್ತಿ ಹನೂರು:-

ಪ್ರಿಯ ಗೆಳೆಯರಾದ ಡಾ.ರಂಗಾರೆಡ್ಡಿ ಕೋಡಿರಾಂಪುರ ಅವರು ಕನ್ನಡ ಜಾನಪದ ಲೋಕದ ಅನೇಕ ಮಗ್ಗಲುಗಳನ್ನು 'ಗಂಧದ ಮಡುವ ಕಲಕೂತ' ಕೃತಿಯಲ್ಲಿ ಕಲಕಿ ನೋಡಿದ್ದಾರೆ. ಹಾಗೆ ಕಲಕ್ಕಿದರ ಪರಿಣಾಮವಾಗಿ ಓದುಗರಿಗೆ ಜಾನಪದ ಕುರಿತಂತೆ ಒಳ್ಳೆಯ ಅರ್ಥ ವಿಸ್ತಾರಗಳು ದೊರಕಿದೆಯೆಂತಲೇ ನಾನು ಒಬ್ಬ ಓದುಗನಾಗಿ ಸ್ಪಷ್ಟ ಪಡಿಸಿ ಮುಂದಿನ ಸಂಗತಿಯನ್ನು ಗಮನಿಸುತ್ತಿದ್ದೇನೆ. ಹಾಗೆ ನೋಡಿದರೆ ರಂಗಾರೆಡ್ಡಿಯವರು ಎರಡು ಮೂರು ದಶಕಗಳಿಂದಲೇ ಸಾಹಿತ್ಯವನ್ನು, ಜನಪದ ಸಾಹಿತ್ಯವನ್ನು ಕ್ರಮಬದ್ಧವಾಗಿ ಆಸಕ್ತಿಯಿಂದ ಅಭ್ಯಾಸಮಾಡಿಕೊಂಡು ಬಂದವರು. ಅಲ್ಲದೆ ಅವರು ಜಾನಪದವನ್ನು ಭಾವುಕವಾಗಿಯೇನು ನೋಡುವವರಲ್ಲ. ಅದರ ವ್ಯಾಪಕತೆಯನ್ನು ವಿಶ್ಲೇಷಣಾತ್ಮಕವಾಗಿಯೇ ನೋಡುತ್ತ ಗುಣವನ್ನು ಗ್ರಹಿಸುವವರಾಗಿದ್ದಾರೆ. ಜಾನಪದದ ಆಧುನಿಕ ಸ್ವರೂಪಗಳ ಬಗ್ಗೆ ಮೊದಲಿನಿಂದಲೂ ಕುತೂಹಲ ಬೆಳೆಸಿಕೊಂಡಿರುವ ರಂಗಾರೆಡ್ಡಿ ಕೋಡಿರಾಂಪುರ ಅವರಿಗೆ ಅದು ನಿರಂತರ ಚಲನಶೀಲ

ಗುಣವುಳ್ಳದ್ದು, ಬದಲಾವಣೆ ಪಡೆಯುತ್ತಲೇ ಮರು ಹುಟ್ಟು ಕಾಣುವಂತದ್ದು ಎಂಬುದರಲ್ಲಿ ನಂಬಿಕೆಯಿರುವವರು, ಜಾನಪದವೆಂಬುದು ಕೇವಲ ಹಾಡು ಕುಣಿತವಲ್ಲ, ಅದು ಜೀವನದ ಸಮಸ್ತ ಅಂಗವನ್ನು ವ್ಯಾಪಿಸಿರುವಂತದ್ದು ಎಂದು ತಿಳಿಯುವುದಾದರೆ ಲೇಖಕರ ಅಭಿಪ್ರಾಯ ಸರಿ ಎನಿಸುತ್ತದೆ.

೩) ಸುಮತೀಂದ್ರ ನಾಡಿಗ:-

ರಂಗಾರೆಡ್ಡಿ ಕೋಡಿರಾಂಪುರ ಅವರ ಮೊದಲ ಕವನ ಸಂಕಲನ 'ನನ್ನೂರ ಹಾಡು' ಕವಿಗೆ ತಾವು ಹಿಡಿದ ಜಾಡು ಯಾವುದು ಮತ್ತು ಅದನ್ನೇಕೆ ಹಿಡಿಯಬೇಕಾಯಿತು ಎನ್ನುವುದು ಗೊತ್ತಿದೆ. 'ಸಮೂಹದ ಜೊತೆ ಗುರುತಿಸಿಕೊಳ್ಳುವಾಗ ಅನಿವಾರ್ಯವಾಗಿ ಲಯ ಮತ್ತು ಗೇಯ ಗುಣಗಳನ್ನು ಅಳವಡಿಸಿಕೊಳ್ಳಬೇಕಾಯಿತು' ಎಂದು ಅವರು ಹೇಳಿದ್ದಾರೆ. ಹೋರಾಟದಿಂದ ಸಾಹಿತ್ಯಕ್ಕೆ ಸಾಹಿತ್ಯದಿಂದ ಹೋರಾಟಕ್ಕೆ ಏನು ಪ್ರಯೋಜನವಾಗುತ್ತದೆನ್ನುವುದನ್ನು ಈ ಕವಿ ಕಂಡು ಕೊಂಡಿದ್ದಾರೆ. ಕಾವ್ಯ ವಾಚನದಿಂದ ವಿದ್ಯುತ್ ಸಂಚಾರದಂಥ ಪರಿಣಾಮ ಉಂಟಾಗುತ್ತದೆ, ಪದ್ಯಗಳು ರಕ್ತದಲ್ಲಿ ಹರಿದಾಡುತ್ತವೆ ಎನ್ನುವುದನ್ನು ಅವರು ಗಮನಿಸಿದ್ದಾರೆ ಈ ರೀತಿಯಾಗಿ ಕಾವ್ಯದ ಬಗ್ಗೆ ಅಭಿಪ್ರಾಯಗಳನ್ನು ಈ ಕಾಲದಲ್ಲಿ ಇಟ್ಟುಕೊಂಡಿರುವ ಕವಿ ಇವರೊಬ್ಬರೆ. ಇವರ ಈ ಕಾವ್ಯತತ್ವ ಇವರ ರಚನೆಗಳನ್ನು ಪ್ರಭಾವಿಸಿದ್ದಕ್ಕೆ 'ತಂಗಟೆ ಗಿಡ' ಎನ್ನುವ ಕವಿತೆಯು ಸಾಕ್ಷಿಯಾಗಿದೆ. ರೈತನಿಗೆ ಚಿರಪರಿಚಿತವಾದ ತಂಗಟೆಯ ಗಿಡದ ಬಗೆಗೆ ಇದು ಮೊದಲ ಕನ್ನಡ ಕವಿತೆ ಎಂದು ಕಾಣುತ್ತದೆ. ಈ ಕವಿತೆಯ ಹಾಡಿನಗುಣ, ಲಯದ ಏರಿಳಿತ, ಅನಾಯಾಸವಾಗಿ ಬಂದಂತೆ ಕಾಣುವ ಪ್ರಾಸಾನುಪ್ರಾಸ, ಆರುಸಾಲಿನ ಬಂಧ, ಪರಿಸರದ ಆತ್ಮೀಯ ಚಿತ್ರಣ ತನ್ನ ತನವನ್ನು ಇಟ್ಟುಕೊಂಡು ಇನ್ನೊಂದರಲ್ಲಿ ಬೆರೆತು ಹೋಗಬೇಕಾದ ಬದುಕಿನ ಅನಿವಾರ್ಯತೆ–ಈ ಎಲ್ಲವನ್ನೂ ಮೈಗೂಡಿಸಿಕೊಂಡು ಈ ಕವಿತೆ ಓದುವವರಿಗೆ ಮತ್ತು ಕೇಳುವವರಿಗೆ ಸಂತೋಷವನ್ನು ಕೊಡುತ್ತದೆ. ಇಂಥದೇ ಗುಣವುಳ್ಳ 'ನನ್ನೂರಹಾಡು', 'ಬರಗಾಲದ ಹಾಡು', 'ಸ್ವಾತಂತ್ರ್ಯ', 'ಕಾದುಕುಂತವರು' ಮೊದಲಾದ ಕವಿತೆಗಳು ರಂಗಾರೆಡ್ಡಿ ಕೋಡಿರಾಂಪುರ ಅವರದ್ದು ವಿಶಿಷ್ಟವಾದ ಧ್ವನಿ ಎನ್ನುವುದನ್ನು ಸೂಚಿಸುತ್ತದೆ. ಆದರೆ ಈ ಕವಿ ಕೆಲವೊಮ್ಮೆ ಕಾವ್ಯ ರಚನೆಯಲ್ಲಿದ್ದಾಗ ಮೊದಲ ಸಾಲು ಸೂಚಿಸಿದ ಲಯವನ್ನು, ಧಾಟಿಯನ್ನು, ಕಾವ್ಯಾನುಭವದ ವಿವರಗಳನ್ನು ಹಿಡಿಯುವಾಗ ಅದಕ್ಕೆ ಸಂಬಂಧವಿಲ್ಲದ ಪ್ರತಿಮೆಗಳು, ಮಾತುಗಳು, ಪ್ರಾಸಗಳು ನುಗ್ಗಿ ಬರುತ್ತವೆ. ಹೀಗೆ ಬಂದ ಆಗುಂತಕ

ಪದಗಳನ್ನು ಮತ್ತೊಮ್ಮೆ ಪರಿಶೀಲಿಸಿ ಸುಮ್ಮನೆ ಮೋಜು ನೋಡಲು ಬಂದ ಪದಗಳನ್ನು ದೂರವಿಟ್ಟು, ಕೆಲಸ ಮಾಡುವವರಂತೆ ನಟಿಸುತ್ತ ಏನೂ ಕೆಲಸ ಮಾಡದ ಮೈಗಳ್ಳ ಪದಗಳನ್ನೂ ದೂರವಿಟ್ಟು, ಹಾಡುತ್ತಿದ್ದರೂ, ಕೆಲಸದ ಲಯಕ್ಕೆ ಸರಿಯಾಗಿ ಹಾಡುವ, ಕೆಲಸ ಮಾಡುವ ಪದಗಳನ್ನು ಕರೆತರಬೇಕಾಗುತ್ತದೆ. ಕಾವ್ಯ ಕರ್ಮದಲ್ಲಿ ಶ್ರದ್ಧೆಯಿರುವ ಕೋಡಿರಾಂಪುರ ಅವರ ಕಾವ್ಯ ಅವರ ಬೆಳವಣಿಗೆಯಲ್ಲಿ ಭರವಸೆಯನ್ನು ಹುಟ್ಟಿಸುತ್ತದೆ.

೪) ಎಸ್.ಎಸ್.ಹಿರೇಮಠ:-

ಇತಿಹಾಸವನ್ನು ನೋಡುವ ಸಮಾಜವಾದೀ ದೃಷ್ಟಿಕೋನ ರಂಗಾರೆಡ್ಡಿ ಕೋಡಿರಾಂಪುರ ಅವರ 'ನನ್ನೂರ ಹಾಡಿ'ನಲ್ಲಿ ನಿಚ್ಚಳವಾಗಿ ಆಕಾರ ಪಡೆದಿದೆ. ಹಳ್ಳಿಯ ಪರಿಸರ, ಬೆಳಕಿನ ಸೌಂದರ್ಯವನ್ನು ವರ್ಣಿಸುತ್ತಲೇ ಆ ಸೌಂದರ್ಯದ ಪರಿಧಿಯಲ್ಲಿ ಎಲ್ಲ ನೋವನ್ನು ಮರೆತು ದುಡಿವ ಜನಸಮೂಹದ ವರ್ಣನೆಯನ್ನು ಮಾಡಿ 'ಜಂತೆ ಜಂತೆಗೆ ಕಟ್ಟಿರುವ ಜೇಡಬಲೆ ಕತ್ತಲೆಗೆ! ಕನ್ನವಿಕ್ಕುವ ಹೈದ ಬೆಳಕ ತರುವನು ಎಂದಿಗೆ' ಎಂಬ ವಿಷಾದದ ಧ್ವನಿಯನ್ನು ತುಂಬುತ್ತಾರೆ. 'ಮಾರಾಜರು ಹೋದರೂ ನಾಯಕರು ಬಂದರೂ! ಗುಡಿಸಲಿನ ಗರಿ ಕುಣಿದು ಹಾರಲಿಲ್ಲ' ಎಂಬ ಸಾಲು ವಾಸ್ತವತೆಯ ಒಡಲಿನಲ್ಲಿ ಹೊಸೆದುಕೊಂಡ ಚರಿತ್ರೆಯ ಒಳನೋಟವನ್ನು ಧ್ವನಿಸುತ್ತದೆ. 'ನನ್ನೂರಹಾಡು' ಹೆಸರಿನ ಸಂಕಲನದಲ್ಲಿನ ಸಮಾನತೆಗಾಗಿ ಆಶಿಸುವ 'ಸ್ವಾತಂತ್ರ್ಯ', ಕೆರೆ ತುಂಬ ಕೆನ್ನೀರು', 'ಬರಗಾಲದ ಹಾಡು', 'ಕೆಂಪು ಭಾನು', 'ಜಿಗಣೆಗಳು' ಮುಂತಾದ ಕವನಗಳು ತಮ್ಮ ಜಾನಪದೀಯ ಸತ್ವದಿಂದ, ಗೇಯ ಗುಣದಿಂದ, ವಿನೂತನ ಪ್ರತಿಮೆಗಳಿಂದ ಗಮನ ಸೆಳೆಯುತ್ತವೆ. 'ಮರಮರದ ಬಯಕೆ' ಕವನದ 'ಮದಿಸಿದಂಥ ಗೂಳಿ ದೊರೆಯ ಕೌದಿಯೊಳಗೆ ಜನರ ಜೀವ' ಎಂಬ ಸಾಲಂತೂ ಹೊಚ್ಚಹೊಸದಾದ ಕಲ್ಪನೆ.

೫) ನಳಿನಿ ವೆಂಕಪ್ಪ:-

ಶ್ರೀ ರಂಗಾರೆಡ್ಡಿಯವರು ಮಧುಗಿರಿ ತಾಲ್ಲೂಕಿನ(ತುಮಕೂರು ಜಿಲ್ಲೆ) ಕೋಡಿರಾಂಪುರದವರು. ಹುಟ್ಟಿದ್ದು ೦೮-೧೦-೧೯೫೨ರಲ್ಲಿ ಕನ್ನಡ ಎಂ.ಎ. ಪರೀಕ್ಷೆಯಲ್ಲಿ ಐದನೇ ರ್‍ಯಾಂಕ್ ಪಡೆದು ಪದವೀಧರರಾಗಿದ್ದಾರೆ. ವಿದ್ಯಾರ್ಥಿಯಾಗಿದ್ದಾಗಲೇ(೧೯೭೫) ವಿಶ್ವವಿದ್ಯಾಲಯ ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ 'ಹೊನ್ನಶೆಟ್ಟಿ' ಪ್ರಶಸ್ತಿ ಗಳಿಸಿದ್ದಾರೆ. ಕೃತಿಗಳು 'ನನ್ನೂರಹಾಡು', 'ಲಿಖಿತ ಜಾನಪದ', 'ಕಮಲಾಭಿನಂದನ', 'ಇದು ನಮ್ಮ ಶಿಕ್ಷಣ ಪದ್ಧತಿ' ಕೊನೆವೆರಡು ಸಂಪಾದಿತ ಕೃತಿಗಳು. ಶ್ರೀಯುತರಿಗೆ ಕವನ, ಕತೆ ಬರೆಯುವುದಲ್ಲದೆ ನಾಟಕಗಳಲ್ಲಿ ಅಭಿನಯಿಸುವ ಮತ್ತು ನಿರ್ದೇಶಿಸುವ ಹವ್ಯಾಸ ಉಂಟು. ಬೆಂಕಿ ಮತ್ತು ಕೋಟೆ ಎಂಬ ಚಲನಚಿತ್ರಗಳಲ್ಲೂ ಅಭಿನಯಿಸಿರುತ್ತಾರೆ. ಬೀದಿನಾಟಕ ಚಳುವಳಿ, ದಲಿತ ಚಳುವಳಿ, ರೈತ ಚಳುವಳಿ, ಮತ್ತು ವಿಜ್ಞಾನ ಚಳುವಳಿಗಳಲ್ಲಿ ಸಕ್ರಿಯರಾಗಿ ಭಾಗವಹಿಸಿರುತ್ತಾರೆ. ಬೆಂಗಳೂರು ವಿಶ್ವವಿದ್ಯಾಲಯ ಕಾಲೇಜು ಅಧ್ಯಾಪಕರ ಸಂಘದ ಜಂಟಿಕಾರ್ಯದರ್ಶಿಯಾಗಿದ್ದಾರೆ. ಎರಡು ಬಾರಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿರುತ್ತಾರೆ. ಹತ್ತಾರು ಕಮ್ಮಟ, ಗೋಷ್ಠಿಗಳಲ್ಲಿ ಭಾಗವಹಿಸಿರುತ್ತಾರೆ. ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರವಾಸ ಅನುದಾನ ಯೋಜನೆಯಲ್ಲಿ ಆಯ್ಕೆಯಾಗಿ, ಪಶ್ಚಿಮ ಬಂಗಾಳದಲ್ಲಿ ಪ್ರವಾಸಮಾಡಿ ಅಲ್ಲಿನ ಸಾಹಿತ್ಯ ನಾಟಕ, ಜಾನಪದ ಮುಂತಾದ ಕ್ಷೇತ್ರದ ಪರಿಚಯ ಪಡೆದಿದ್ದಾರೆ.

೬) ಡಾ.ಬರಗೂರು ರಾಮಚಂದ್ರಪ್ಪ:-

ಕನ್ನಡ ಚಿತ್ರರಂಗಕ್ಕೆ ಅಡಿಪಾಯ ಹಾಕಿದ ಕೆಲ ಪ್ರಮುಖರಲ್ಲಿ ಶ್ರೀ ಗುಬ್ಬಿ ವೀರಣ್ಣನವರನ್ನು ಮರೆಯುವಂತಿಲ್ಲ. ಕನ್ನಡ ರಂಗಭೂಮಿಯನ್ನು ಹೊರರಾಜ್ಯಗಳಿಗೂ ವಿಸ್ತರಿಸಿದ ಹೆಗ್ಗಳಿಕೆ ಅವರದು. ಮೂಕಿಯಿಂದ ಟಾಕಿಯವರೆಗೆ ಚಿತ್ರರಂಗದಲ್ಲಿ ತೊಡಗಿಸಿಕೊಂಡ ನಿರ್ಮಾತೃ ಮತ್ತು ನಟರಾದ ಗುಬ್ಬಿ ವೀರಣ್ಣನವರು ಚಿತ್ರಗಳನ್ನಷ್ಟೇ ಅಲ್ಲ ತಮ್ಮ ನಾಟಕ ಕಂಪನಿಯಿಂದ ಕಲಾವಿದರನ್ನೂ ಕೊಟ್ಟರು. ಜನಪದ ತಜ್ಞರಾದ ಡಾ.ರಂಗಾರೆಡ್ಡಿ ಕೋಡಿರಾಂಪುರ ಅವರು ವೀರಣ್ಣನವರ ಸಾಧನೆಯನ್ನು ಕಟ್ಟಿಕೊಡುವಲ್ಲಿ ಸಂಕ್ಷಿಪ್ತತೆಯಲ್ಲೇ ಸಮಗ್ರತೆಯನ್ನು ಸಾಧಿಸಿದ್ದಾರೆ.

೫.೪ ಛಾಯಾಚಿತ್ರಗಳು



ಡಾ.ರಂಗಾರೆಡ್ಡಿಯವರೊಂದಿಗೆ ಸಂದರ್ಶನದ ಸಂದರ್ಭ.



ಸಾಕ್ಷರತಾ ಕಾರ್ಯಕರ್ತರ ಜೊತೆ ಸಂಪನ್ಮೂಲ ವ್ಯಕ್ತಿಯಾಗಿ ರಂಗಾರೆಡ್ಡಿಯವರು.



ಜನಪದ ಕರಕುಶಲ ಶಿಲ್ಪಿಗಳ ಕಾರ್ಯಾಗಾರದಲ್ಲಿ ಡಾ.ರಂಗಾರೆಡ್ಡಿಯವರು.



ಜಿಲ್ಲಾ ಸಾಕ್ಷರತಾ ಸಮಿತಿ ಕೋಲಾರ ಇಲ್ಲಿ ಹಾಡು, ರೂಪಕ, ನಾಟಕ ರಚನೆ ಕಾರ್ಯಾಗಾರದ ನಿರ್ದೇಶಕರಾಗಿ ರಂಗಾರೆಡ್ಡಿಯವರು



ಎಂ.ಪಿ. ಪ್ರಕಾಶ್‌ರವರೊಂದಿಗೆ ಡಾ.ರಂಗಾರೆಡ್ಡಿಯವರು



ಗೌರಿಬಿದನೂರಿನ ಯುಗಾದಿ ಕವಿಗೋಷ್ಠಿಯಲ್ಲಿ ರಂಗಾರೆಡ್ಡಿಯವರು.



ರಾಯಚೂರಿನ ಜಿಲ್ಲಾ ರಂಗೋತ್ಸವದ 'ಹವ್ಯಾಸಿ ನಾಟಕಗಳಲ್ಲಿ ಜನಪದ ಸತ್ವ' ಉಪನ್ಯಾಸದಲ್ಲಿ ರಂಗಾರೆಡ್ಡಿಯವರು.



ಸರ್ಕಾರಿ ಜೂನಿಯರ್ ಕಾಲೇಜು ಕುಣಿಗಲ್ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭದಲ್ಲಿ ಡಾ.ರಂಗಾರೆಡ್ಡಿಯವರು.



ನ್ಯಾಷನಲ್ ಕಾಲೇಜು ಗೌರಿಬಿದನೂರು ಡಾ.ಎಚ್.ಎನ್. ಅವರಿಗೆ ಗೌರವಾರ್ಪಣೆಯ ಸಂದರ್ಭ.



ತುಮಕೂರಿನ ಸ್ನಾತಕೋತ್ತರ ಕೇಂದ್ರದಿಂದ ಸೆನೆಟ್ ಸದಸ್ಯತ್ವದ ಸಂದರ್ಭದಲ್ಲಿ ಸನ್ಮಾನ ಸ್ವೀಕಾರ ಮಾಡುತ್ತಿರುವ ರಂಗಾರೆಡ್ಡಿಯವರು.

ಅಧ್ಯಾಯ: ೬

ಸಮಾರೋಪ

'ಡಾ.ರಂಗಾರೆಡ್ಡಿ ಕೋಡಿರಾಂಪುರ ಅವರ ಸಾಹಿತ್ಯ ಅಧ್ಯಯನ' ಎಂಬ ಈ ಕಿರು ಪ್ರಬಂಧವನ್ನು ನನ್ನ ಎಂ.ಫಿಲ್. ಅಧ್ಯಯನದ ವಿಷಯವಾಗಿ ಆಯ್ಕೆ ಮಾಡಿಕೊಂಡಿದ್ದೇನೆ. ಹಾಗಾಗಿ ನಾನು ಇದನ್ನು ಒಂದು ಸವಾಲಾಗಿ ಸ್ವೀಕರಿಸಿದ್ದೇನೆ. ಆದ್ದರಿಂದ ಹಲವಾರು ಜವಾಬುಗಳ ಹುಡುಕಾಟದಿಂದ ಆರಂಭಗೊಂಡು, ರಂಗಾರೆಡ್ಡಿಯವರ ಚಿಂತನೆಯ ಹಾದಿಯನ್ನು ಅರ್ಥೈಸಿಕೊಂಡು, ನ್ಯಾಯವನ್ನು ಒದಗಿಸುವ ಇಂಗಿತದಿಂದ ನನ್ನ ಅಧ್ಯಯನದ ಮೂಲಕ ರಂಗಾರೆಡ್ಡಿಯವರ ಸಾಹಿತ್ಯದ ಸಾಧನೆಗಳು ಹಾಗೂ ಸಾಹಿತ್ಯದಲ್ಲಿನ ಹೊಸ ವಿಚಾರಗಳನ್ನು ಹೊರ ತರುವ ಪ್ರಯತ್ನ ಮಾಡಿದ್ದೇನೆ.

ಯಾವುದೇ ಕೃತಿಯ ಬರಹದ ಹಿಂದೆ ಉತ್ತಮ ಆಲೋಚನೆಯನ್ನು ಹೊಂದಿರುವ ಸಾಮಾಜಿಕ, ರಾಜಕೀಯ ಚಿಂತನೆ ಅದರಲ್ಲಿನ ವಸ್ತುವನ್ನು ನಿರ್ಮಿಸಲ್ಪಟ್ಟಿರುತ್ತದೆ. ಪ್ರಸ್ತುತವಾಗಿ ಈ ಅಧ್ಯಯನದಲ್ಲಿ ರಂಗಾರೆಡ್ಡಿಯವರ ಜಾನಪದ ಕೃತಿಗಳಾದ ಲಿಖಿತ ಜಾನಪದ, ಬಂಡಾಯ ಜಾನಪದ, ಗಂಧದ ಮಡುವ ಕಲಕೂತ, ನೆಲದೊಡಲ ಪ್ರೀತಿ, ಜನಪದ ಸಂಸ್ಕೃತಿ, ತೇರು ಹರಿದಾವು ಎಂಬ ಕೃತಿಗಳ ವಿಶ್ಲೇಷಣೆಯನ್ನು ಮಾಡಲಾಗಿದೆ. ನಂತರ ಸಾಹಿತ್ಯೇತರ ಸಾಧನೆಗಳಾದ ಬೀದಿನಾಟಕ, ದಲಿತ ಚಳುವಳಿ, ಮರಳು ಉಳಿಸುವ ಹೋರಾಟ, ಸಾಕ್ಷರತಾ ಆಂದೋಲನ, ವಿದುರಾಶ್ವತ್ಥ ಅಭಿವೃದ್ಧಿ ಮತ್ತು ಹೋರಾಟಗಳನ್ನು ವಿವರಿಸುವ ಪ್ರಯತ್ನ ಮಾಡಿದ್ದೇನೆ.

ಜಾನಪದವು ಮನುಷ್ಯನ ಸರ್ವಾಂಗೀಣ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಸಾಮಾಜಿಕ ಪ್ರಜ್ಞೆ ಮತ್ತು ಮನುಷ್ಯನ ವ್ಯಕ್ತಿತ್ವಕ್ಕೆ ಅನೇಕ ವಿಭಿನ್ನ ಆಯಾಮಗಳು ಮೂಡಿಸುತ್ತದೆ. ಡಾ.ರಂಗಾರೆಡ್ಡಿಯವರ ಜಾನಪದ ಕೃತಿಗಳಿಂದ ಸಾಮಾನ್ಯರಿಗೂ ತಿಳಿಯುವಂತೆ ಸಾಹಿತ್ಯ ಕಟ್ಟಿಕೊಡುವುದರಲ್ಲಿ ಬಹುಮಟ್ಟಿಗೆ ಸಫಲೀಕೃತವಾಗಿದೆ. ಡಾ.ರಂಗಾರೆಡ್ಡಿಯವರ ಸಾಹಿತ್ಯದ ಬರಹಗಳನ್ನು ನೋಡಿದಾಗ ಇವರ ಆದ್ಯತೆಯ ಕ್ಷೇತ್ರ ಜಾನಪದ ಲೋಕ. ಜಾನಪದ ವೈಭವೀಕರಣದಲ್ಲಿ ನೆಲೆನಿಲ್ಲದೆ ಶಿಷ್ಟ ಸಾಹಿತ್ಯದಲ್ಲಿ ಕಂಡುಬರುವ ಗ್ರಾಮೀಣ ಸಂಸ್ಕೃತಿಯ ಸಂದರ್ಭಗಳನ್ನು ಒರೆಗೆ ಹಚ್ಚುವ ಕೆಲಸವನ್ನು

ಮಾಡಿದ್ದಾರೆ. ಈ ಸಾಮರ್ಥ್ಯ ಇವರಲ್ಲಿ ಇದ್ದದ್ದರಿಂದ ಶ್ರಮ ಮತ್ತು ಸಂಸ್ಕೃತಿಗಳ ಅಂತರ್ ಸಂಬಂಧವನ್ನು ಶೋಧಿಸುವ ಬರವಣಿಗೆಯನ್ನು ಸಾಹಿತ್ಯಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಇವರ ಪದ್ಯಗಳಲ್ಲಿ ಹಾಗೂ ವಿಮರ್ಶೆಗಳಲ್ಲಿ, ಜಾನಪದ ವಿಷಯಕ ಬರಹಗಳಲ್ಲಿ ಸಂಸ್ಕೃತಿ ಚಿಂತನೆ ಒಂದು ಪ್ರಮುಖ ಕೇಂದ್ರವಾಗಿರುವುದನ್ನು ಗಮನಿಸಬಹುದು.

ಒಟ್ಟಾರೆ ಅವರ ಲೇಖನಗಳು ಎಡಪಂಥೀಯ ವಿಚಾರಧಾರೆಯ ಜೊತೆಗೆ ವಾಸ್ತವದ ಸತ್ಯಗಳನ್ನು ಓದುಗರಿಗೆ ಮನವರಿಕೆ ಮಾಡಿಕೊಡುತ್ತವೆ. ಒಟ್ಟಿನಲ್ಲಿ ಜಾನಪದದ ಪ್ರಮುಖ ವಿದ್ವಾಂಸರಲ್ಲಿ ಒಬ್ಬರಾದ ರಂಗಾರೆಡ್ಡಿ ಕೋಡಿರಾಂಪುರರವರು ಬಹುಮುಖ ಪ್ರತಿಭೆಯ ವ್ಯಕ್ತಿತ್ವವುಳ್ಳವರೆಂದು ಹೇಳಬಹುದು.

ಸಾಹಿತ್ಯ, ಜಾನಪದ, ರಂಗಭೂಮಿ ಇವೇ ಮುಂತಾದ ಕ್ಷೇತ್ರಗಳನ್ನು ಕಟ್ಟಿ ಬೆಳೆಸುವ ಕೆಲಸ ಮಾಡಿದ ರಂಗಾರೆಡ್ಡಿಯವರು ಸದಾ ಕ್ರಿಯಾಶೀಲರು. ಇವರು ಬರೆದಿರುವ ಜಾನಪದಕ್ಕೆ ಸಂಬಂಧಿಸಿದ ಬರಹಗಳು ತುಂಬಾ ಆಸಕ್ತಿದಾಯವಾಗಿವೆ.

ಲಿಖಿತ ಜಾನಪದದ ಬಗ್ಗೆ ಬರೆದು ದಿಟ್ಟ ಪ್ರತಿಭಟನೆ ಮಾಡಿದ ಪ್ರತಿಭಾವಂತ ಜಾನಪದ ತಜ್ಞರು ಇವರಾಗಿದ್ದಾರೆ. ಇವರ ಬರಹಗಳಲ್ಲಿ ಪ್ರೇರಣೆ, ಪ್ರಾಮಾಣಿಕತೆ, ನಿರಾಡಂಬರದ ವಾಸ್ತವಿಕತೆ ಕಂಡು ಬರುತ್ತದೆ. ಜಾನಪದ ಸಾಹಿತ್ಯದಲ್ಲೂ ಹೋರಾಟದ, ಬಂಡಾಯದ ಮನೋಭಾವವನ್ನು ತುಂಬಿ ಜನಪದರದ ಮೇಲೆ ಆಧುನಿಕ ಪ್ರಭಾವದ ಎಳೆಯನ್ನು ಗುರುತಿಸುತ್ತಾರೆ. ಹಾಗೆಯೇ ಸಾಹಿತ್ಯದಲ್ಲಿ ಅಸ್ಪೃಶ್ಯತೆ, ಶೋಷಣೆಯ ಸಮಾಜ ಮತ್ತು ಜನಪದ ಸಾಹಿತ್ಯದಲ್ಲಿ ಪ್ರತಿ ಸಂಸ್ಕೃತಿಯ ನೆಲೆಯನ್ನು ಗುರುತಿಸಿದ್ದಾರೆ.

ಜನಪದ ನೆಲೆಯಲ್ಲಿ ಹುಟ್ಟಿದ, ಜನಪದ ನೆಲೆಯಲ್ಲಿ ಬೆಳೆದ, ಜನಪದದ ಸವಿಯನ್ನುಂಡ ರಂಗಾರೆಡ್ಡಿಯವರು ಜನಪದ ಸಂಸ್ಕೃತಿಯನ್ನು ಅಗೆದು ಹದಗೊಳಿಸಿದ್ದಾರೆ. ಕಥಾನಕೀರ್ಥನೆಕಾರರು, ದೊಂಜಿದಾಸರು, ನಟುವರು, ಬುರಕ್ರಥಾ ಮುಂತಾದುವುಗಳ ಬಗ್ಗೆ ಹೆಚ್ಚಿನ ಅಧ್ಯಯನವನ್ನು ಕೈಗೊಂಡು, ಅವುಗಳ ರೀತಿ–ನೀತಿ ಸ್ವರೂಪ ರೂಪುರೇಷೆಗಳನ್ನು ತಮ್ಮ ಕೃತಿಗಳಲ್ಲಿ ದಾಖಲಿಸಿದ್ದಾರೆ.

ಇವುಗಳಲ್ಲದೆ ಆಟೋಗ್ರಾಫ್ ಮತ್ತು ಗೋಡೆಬರಹಗಳ ಮೂಲಕ ಹೊಸ ಲಿಖಿತ ಜಾನಪದವನ್ನು ಸೃಷ್ಟಿಸಿರುವುದು ತುಂಬಾ ವಿಶಿಷ್ಟವಾಗಿದೆ. ಇದು ರಂಗಾರೆಡ್ಡಿಯವರ ಹೊಸ ಆಲೋಚನೆ ಅವರ ಕಾಳಜಿ, ಸೃಜನಶೀಲತೆಯನ್ನು ಗುರುತಿಸುತ್ತದೆ. ಗಂಧದ ಮಡುವ ಕಲಕೂತ ಈ ಕೃತಿ ಕೆಲವು ಕಡೆ ಮಂಡಿಸಿದ ಹಲವು ವಿಚಾರ ಸಂಕೀರ್ಣಗಳ ಪ್ರಬಂಧಗಳನ್ನು ಕೂಡಿಸಿ ಬರೆದ ಪುಸ್ತಕವಾಗಿದೆ. ಜನಪದ ಕಲೆಗಳು, ಸಂಸ್ಕೃತಿಗಳು, ಧರ್ಮಗಳು, ಜಾಗತೀಕರಣ ಮತ್ತು ಸಂಸ್ಕೃತಿ, ಕಾಡುನಾಡಿನ ಸಂಘರ್ಷ ಮತ್ತು ಸಂಬಂಧ, ಕೋಲಾರ ಜಿಲ್ಲೆಯ ಜಾನಪದದ ಅಧ್ಯಯನಗಳನ್ನು ಇಲ್ಲಿ ಚರ್ಚಿಸಲಾಗಿದೆ. ಜಾನಪದಕ್ಕೆ ಸಂಬಂಧಿಸಿದ ಪ್ರಾಣಿ ಪರಿಸರ, ದೈವ ವಸತಿ, ಸಂಸ್ಕೃತಿ–ಉಪಸಂಸ್ಕೃತಿ ಪರಿಕಲ್ಪನೆ, ಗ್ರಾಮದೇವತೆ ಸ್ವಾರಮ್ಯ ಮುಂತಾದ ಲೇಖನಗಳಲ್ಲಿನ ವಿಚಾರಗಳನ್ನು ಚರ್ಚಿಸಿರುವುದಷ್ಟೆ ಅಲ್ಲ, ವಿಮರ್ಶಕರ ಅಭಿಪ್ರಾಯಗಳನ್ನು ಸಹ ಸಂಗ್ರಹಿಸಿದ್ದೇನೆ.

ಜಾನಪದ ಅನ್ವಯಿಕತೆಯಲ್ಲಿ ರಂಗಾರೆಡ್ಡಿಯವರು ನಮ್ಮ ನೆಲಕ್ಕೆ ಒಗ್ಗುವ ಸಿದ್ಧಾಂತಗಳನ್ನು ಹೇಗೆ ನಮ್ಮ ದೇಶೀಯ ವಿದ್ವಾಂಸರು ಅನ್ವಯಿಸಿಕೊಂಡಿದ್ದಾರೆ ಎಂಬುದನ್ನು ಚರ್ಚಿಸಿದ್ದಾರೆ. ಕೇವಲ ವಿಷಯ, ವಸ್ತು, ವ್ಯಕ್ತಿಗೆ ಮಾತ್ರ ಸಂಬಂಧಿಸಿರದೆ ಅನೇಕ ವಿಚಾರಗಳನ್ನು ಒಳಗೊಂಡ ಒಂದು ಸಂಪಾದನಾ ಕೃತಿಯು ಇದಾಗಿದೆ. ಈ ಕೃತಿಯ ಜ್ಞಾನದ ಕೊಡುಗೆ ಡಾ.ರಂಗಾರೆಡ್ಡಿಯವರಿಂದ ಕನ್ನಡ ಸಾಹಿತ್ಯಕ್ಕೆ ಸಂದಿದೆ. ಜಾನಪದ ಕೃತಿಗಳಲ್ಲಿ ಜಾನಪದ ಹಿನ್ನಲೆಯಲ್ಲಿ ಮೂಡಿದ ಸಮಾಜಮುಖಿ ಚಿಂತನೆಗಳ ಸತ್ವ ಅಡಗಿದೆ. ನೈಜ ಸತ್ವಗಳನ್ನು ಯಾರ ಹಂಗು ಇಲ್ಲದೆ ನೇರವಾಗಿ ದಾಖಲಿಸಿರುವುದು ಬರಹಗಳಲ್ಲಿ ಎದ್ದು ಕಾಣುತ್ತದೆ. ಸಮಾಜದಲ್ಲಿ ಹಾಗೆಯೇ ಉಳಿದಿರುವ ಜಾತಿ, ಅಸ್ಪೃಶ್ಯತೆ, ವರ್ಗಗಳ ನಡುವಿನ ಹೋರಾಟ ಇವುಗಳನ್ನು ದಿಕ್ಕರಿಸಿ ಮುನ್ನೆಡೆದು ಹೊಸ ಬದಲಾವಣೆಯತ್ತ ಕಾಯುವ ಆಶಯ ಬರವಣಿಗೆಗಳಲ್ಲಿ ದಾಖಲಿಸಿರುವುದು ಬಹಳ ಮುಖ್ಯವೆನಿಸುತ್ತದೆ.

ಸಮಾಜದಲ್ಲಿ ಸಾಮಾನ್ಯ ವಸ್ತು ವಿಷಯವನ್ನು ಆಧರಿಸಿದ, ಸರಳ ಸುಂದರ ಭಾಷೆಯನ್ನು ಹೊಂದಿದ, ಹಾಡಿನ ಲಯ ಅವರ ಕವನಗಳಲ್ಲಿ ಕಾಣುತ್ತದೆ. ನನ್ನೂರ ಹಾಡು ಕವನಸಂಕಲನದ ನಂತರ ಹಲವಾರು ಕವನಗಳು ಪತ್ರಿಕೆಗಳಲ್ಲಿ ಪ್ರಕಟಣೆಗೊಂಡಿವೆ. ಆದಾಗ್ಯೂ ಮತ್ತೊಂದು ಕವನ ಸಂಕಲನವಾಗುವಷ್ಟು ಕವಿತೆಗಳ ಸಾಹಿತ್ಯ ಅವರಲ್ಲಿದೆ ಹಾಗಾಗಿ ಅವರ ಸಾಹಿತ್ಯ ಅಪಾರವಾದುದು.

'ಸೊಲ್ಲು ಸೊಲ್ಲೆಲ್ಲ ಅಪರಂಜಿ' ಎನ್ನುವ ವಿಮರ್ಶಾ ಲೇಖನದಲ್ಲಿ ಸಾಹಿತ್ಯ ಕೇವಲ ಸಾಹಿತ್ಯವಾಗದೆ, ಕಲೆ ಮತ್ತು ಕಾಲದ ನಡುವೆ ಕವಿಮಾಡುವ ಗುದ್ದಾಟ ಎಂಬ ತಾತ್ವಿಕ ಹಿನ್ನಲೆಯಿದೆ. ಕವಿಯ ವೈಯಕ್ತಿಕ ವೈರುಧ್ಯಗಳು ಸಾಮಾಜಿಕ ವೈರುಧ್ಯಗಳ ಜೊತೆ ಘರ್ಷಣೆಗಿಳಿದಾಗ ಮೂಡಿಬಂದ ಫಲಿತಗಳು ಎಂಬುದರ ಕಡೆ ಮುಖಮಾಡಲಾಗಿದೆ. ಆಯಾ ಕಾಲಘಟ್ಟದ ರಾಜಕೀಯ-ಆರ್ಥಿಕ ಏರುಪೇರುಗಳು ಸಾಹಿತ್ಯವನ್ನು ಪ್ರಭಾವಿಸುತ್ತಿರುವುದು ಈ ಕೃತಿಯ ಮೂಲಕ ಗುರುತಿಸಬಹುದಾಗಿದೆ.

'ಗುಬ್ಬಿವೀರಣ್ಣ' ಕೃತಿಯಲ್ಲಿ ಗುಬ್ಬಿವೀರಣ್ಣನವರ ಬಾಲ್ಯ ಜೀವನ, ವೃತ್ತಿಜೀವನ, ನಡೆದು ಬಂದ ಹಾದಿ, ಪಟ್ಟಪಾಡು ಇವೆಲ್ಲವನ್ನು ಕಾಣಬಹುದು. ಸಂದ ಸನ್ಮಾನಗಳು, ನಾಟಕ ಕಂಪನಿಯ ಅಭಿವೃದ್ಧಿಯಲ್ಲಿ ಗುಬ್ಬಿ ವೀರಣ್ಣನವರ ಸಾಧನೆ, ಅವರ ಇಡೀ ಜೀವನ ಚಿತ್ರವನ್ನು ರಂಗಾರೆಡ್ಡಿಯವರ ಈ ಕೃತಿಯು ನಮಗೆ ತಿಳಿಸಿಕೊಡುತ್ತದೆ. ವ್ಯಕ್ತಿ ಕೇಂದ್ರಿತವಾಗಿದ್ದರೂ ಕೂಡ ಅದನ್ನು ಮೀರಿದ, ಆ ಕಾಲ ಘಟ್ಟದ ಚರಿತ್ರೆಯ ಕ್ಷಣಗಳನ್ನು ಮತ್ತೊಮ್ಮೆ ನಮ್ಮ ಕಣ್ಮುಂದೆ ತರುತ್ತದೆ. ವೃತ್ತಿ ರಂಗಭೂಮಿಯಲ್ಲಿ ಹೆಚ್ಚಿನ ಸಾಧನೆಯನ್ನು ಮಾಡಿದ ಗುಬ್ಬಿ ವೀರಣ್ಣನವರ ಬಗ್ಗೆ ತಿಳಿಯುವುದು ಆಸಕ್ತಿದಾಯಕ ಹಾಗೂ ಮಹತ್ವವಾದುದಾಗಿದೆ.

ಮಧ್ಯಕಾಲೀನ ಸಾಹಿತ್ಯದಲ್ಲಿ ಅಸ್ಪೃಶ್ಯತೆ ಎನ್ನುವ ಲೇಖನದಲ್ಲಿ ಮೇಲು-ಕೀಳು ವರ್ಗಗಳ ಅಂತರವನ್ನು ಕುರಿತು ಹೇಳುತ್ತಾ, ಸುಮಾರು ಹತ್ತು, ಹನ್ನೆರಡು, ಹದಿನಾರನೇ ಶತಮಾನದಲ್ಲಿ ಉದಯವಾದ ಪಂಪಯುಗ, ವಚನಯುಗ, ಕೀರ್ತನೆಯುಗದಲ್ಲಿ ಸಮಾಜದಲ್ಲಿನ ಅಂಕುಡೊಂಕುಗಳನ್ನು ಹೇಗೆ ಹೋಗಲಾಡಿಸಿದರು ಎಂಬುದನ್ನು ತಿಳಿಸುತ್ತಾರೆ. ಒಟ್ಟಾರೆ ಸಮಾಜದಲ್ಲಿನ ಅಸ್ಪೃಶ್ಯತೆಯ ನಿರ್ಮೂಲನೆ ಹಾಗೂ ಅದರ ವಿರುದ್ಧ ಹೋರಾಟವೇ ಇವರ ಉದ್ದೇಶವಾಗಿದೆ.

'ನನ್ನೂರ ಹಾಡು' ಕವನ ಸಂಕಲನದ ಮೂಲಕ ಈ ವಿದ್ವಾಂಸರು ಕವಿಯಾಗಿ ಕಾಣಿಸಿಕೊಂಡಿದ್ದಾರೆ. ಅಲ್ಲಿನ ಅವರ ಕವಿತೆಗಳಲ್ಲಿ ಹೋರಾಟ ಮನೋಭಾವವು ತೀಕ್ಷ್ಣವಾದ ರೀತಿಯಲ್ಲಿ ಕಂಡು ಬರುತ್ತದೆ. ರಂಗಾರೆಡ್ಡಿಯವರು ಬರವಣಿಗೆಯಲ್ಲಿ ಕುವೆಂಪುರವರ ವೈಚಾರಿಕತೆಯನ್ನು ಒಪ್ಪಿಕೊಂಡು ಅವರ ಹಾದಿಯಲ್ಲಿ ಮುನ್ನಡೆದಿದ್ದಾರೆ ಎಂದು ಹೇಳಬಹುದು. ಏಕೆಂದರೆ ರಂಗಾರೆಡ್ಡಿಯವರು ಸಹ ವಾಸ್ತವ ಸಮಾಜದಲ್ಲಿನ ಸಮಸ್ಯೆಗಳನ್ನು, ವಿಚಾರಗಳನ್ನು ಅಹಿಂಸಾತ್ಮಕವಾಗಿ,

ನಯವಾಗಿ ಬಂಡಾಯ ಧೋರಣೆಯ ಮೂಲಕ ಅಭಿವ್ಯಕ್ತಪಡಿಸಿದ್ದಾರೆ. ತೇರು ಹರಿದಾವು ಎಂಬ ಪುಸ್ತಕವು ಕೇವಲ ಒಣಕಲು ವರದಿಯಾಗದೆ ಒಂದು ಆಸಕ್ತಿಯುತ ಬರಹವಾಗಿದೆ. ಇದು ಕೂಡ ರಂಗಾರೆಡ್ಡಿಯವರ ಬರವಣಿಗೆಯ ವಿಶಿಷ್ಟತೆಯನ್ನು ಗುರುತಿಸುವಂತಿದೆ.

ವೈದಿಕ ವಿರೋಧಿಯಾದ ಇವರು ಎಲ್ಲಾ ಕಡೆ ಹಾಗೂ ಬರವಣಿಗೆಯಲ್ಲಿ ಅವರ ಶೋಷಣೆಯನ್ನು ಖಂಡಿಸುತ್ತಾರೆ. ಯಾವುದನ್ನು ಬರವಣಿಗೆಯಲ್ಲಿ ಖಂಡಿಸಿದರೂ ಅದನ್ನು ತಮ್ಮ ವೈಯಕ್ತಿಕ ಜೀವನದಲ್ಲಿಯೂ ಖಂಡಿಸಿದರು. ಹಾಗಾಗಿ ಹೇಳಿದನ್ನೇ, ಬರೆದಿದ್ದನ್ನೇ ಮಾಡಿ ತೋರಿಸುವ ಪ್ರಯೋಗಾತ್ಮಕ, ಪರಿಣಾಮಾತ್ಮಕ ವ್ಯಕ್ತಿಯಾಗಿದ್ದಾರೆ. ಒಟ್ಟಾರೆ ಕನ್ನಡ ಸಾಹಿತ್ಯದಲ್ಲಿ ಜಾನಪದ ಕ್ಷೇತ್ರ, ಸಾಹಿತ್ಯ ಕ್ಷೇತ್ರ ಹಾಗೂ ಸಾಹಿತ್ಯೇತರ ಕ್ಷೇತ್ರದಲ್ಲಿ ಅಪಾರ ಕಾರ್ಯನಿರ್ವಹಿಸಿ, ಅಧ್ಯಯನವನ್ನು ಕೈಗೊಂಡು ಹಲವಾರು ಕೃತಿಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಹಾಗೆಯೇ ಒಬ್ಬ ಕವಿಯಾಗಿ ವಿಮರ್ಶಕರಾಗಿ, ಒಬ್ಬ ವಿದ್ವಾಂಸರಾಗಿ, ಉತ್ತಮ ಪ್ರಭಾವಿ ಚಿಂತಕರಾಗಿ ಕನ್ನಡ ಸಾಹಿತ್ಯದ ಆಧುನಿಕ ಯುಗದಲ್ಲಿ ಹೆಚ್ಚು ಜನಪ್ರಿಯತೆಯನ್ನು ಗಳಿಸಿದ್ದಾರೆ. ಕೇವಲ ವೃತ್ತಿಯನ್ನು ಮಾತ್ರವಲ್ಲದೆ ಇತರೆ ಸಂಸ್ಥೆಗಳಲ್ಲಿ ಸದಸ್ಯರಾಗಿ, ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯವನ್ನು ನಿರ್ವಹಿಸಿ, ಬರವಣಿಗೆಯಲ್ಲಿ ತೊಡಗಿಕೊಂಡು ಹಲವು ಪ್ರಶಸ್ತಿಗಳನ್ನು ಪಡೆದುಕೊಂಡು, ಪ್ರಖ್ಯಾತಿಯನ್ನೂ ಪಡೆದಿದ್ದಾರೆ.

ಆಧಾರ ಗ್ರಂಥಗಳು

೧. ಡಾ.ರಂಗಾರೆಡ್ಡಿ ಕೋಡಿರಾಂಪುರ : ಲಿಖಿತ ಜಾನಪದ, ಅಖಿಲ ಭಾರತ ಮುಂಡಾಲ ಸಮಾಜ ಸಂಘ(ನೋಂ), ೧೯೭೯

೨. ಡಾ.ರಂಗಾರೆಡ್ಡಿ ಕೋಡಿರಾಂಪುರ : ಬಂಡಾಯ ಜಾನಪದ,ಅಖಿಲ ಭಾರತ ಮುಂಡಾಲ ಸಮಾಜ ಸಂಘ(ನೋಂ), ೨೦೦೯

೩. ಡಾ.ರಂಗಾರೆಡ್ಡಿ ಕೋಡಿರಾಂಪುರ : ಗಂಧದ ಮಡುವ ಕಲಕೂತ, ತಳಗವಾದಿ ಪ್ರಕಾಶನ,೨೦೦೩

೪. ಡಾ.ರಂಗಾರೆಡ್ಡಿ ಕೋಡಿರಾಂಪುರ : ನೆಲದೊಡಲ ಪ್ರೀತಿ, ಸಿವಿಜಿ ಇಂಡಿಯಾ,೨೦೧೪

೫. ಡಾ.ರಂಗಾರೆಡ್ಡಿ ಕೋಡಿರಾಂಪುರ : ಜನಪದ ಸಂಸ್ಕೃತಿ, ಕನ್ನಡ ಸಾಹಿತ್ಯ ಪರಿಷತ್ತು, ೨೦೧೦

೬. ಡಾ.ರಂಗಾರೆಡ್ಡಿ ಕೋಡಿರಾಂಪುರ : ತೇರು ಹರಿದಾವು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,೧೯೯೮

೭. ಡಾ.ರಂಗಾರೆಡ್ಡಿ ಕೋಡಿರಾಂಪುರ : ನನ್ನೂರ ಹಾಡು, ಶಂಬೂಕ ಪ್ರಕಾಶನ, ೧೯೯೦

೮. ಡಾ.ರಂಗಾರೆಡ್ಡಿ ಕೋಡಿರಾಂಪುರ : ಸೊಲ್ಲು ಸೊಲ್ಲೆಲ್ಲ ಅಪರಂಜಿ, ನೆಲಮಲೆ ಪಬ್ಲಿಷಿಂಗ್ ಹೌಸ್,೨೦೧೨

೯. ಡಾ.ರಂಗಾರೆಡ್ಡಿ ಕೋಡಿರಾಂಪುರ : ಶ್ರೀಶ್ರೀ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೪

೧೦. ಡಾ.ರಂಗಾರೆಡ್ಡಿ ಕೋಡಿರಾಂಪುರ : ಗುಬ್ಬಿ ವೀರಣ್ಣ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ,೨೦೦೯

೧೧. ಡಾ.ರಂಗಾರೆಡ್ಡಿ ಕೋಡಿರಾಂಪುರ : ಬಯಲು ಸೀಮೆ ಭಾಷಾ ವೈವಿಧ್ಯ, ಕನ್ನಡ ಅಭಿವೃದ್ಧಿ ಪ್ರಾಧಿಕಾರ,೨೦೧೧

೧೨. ಡಾ.ರಂಗಾರೆಡ್ಡಿ ಕೋಡಿರಾಂಪುರ : ಅಲ್ಲಮ ಪ್ರಭು, ಶ್ರೀ ಬಸವ ಅಧ್ಯಯನ ಪೀಠ. ೨೦೧೫

೧೩. ಡಾ.ರಂಗಾರೆಡ್ಡಿ ಕೋಡಿರಾಂಪುರ : ಜಾನಪದ ಆನ್ವಯಿಕತೆ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ೨೦೦೩

೧೪. ಡಾ.ರಂಗಾರೆಡ್ಡಿ ಕೋಡಿರಾಂಪುರ : ಜಾನಪದ ಸಿದ್ಧಾಂತಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೨೦೦೩

೧೫. ಡಾ.ರಂಗಾರೆಡ್ಡಿ ಕೋಡಿರಾಂಪುರ : ಜಾನಪದ ಸಿದ್ಧಾಂತಗಳು-೨, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ೨೦೦೩

ಪರಾಮರ್ಶನ ಗ್ರಂಥಗಳು

೧. ಜೀ.ಶಂ.ಪರಮಶಿವಯ್ಯ : ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು, ಅಭಿನವ ಪ್ರಕಾಶಕರು-೨೦೧೨

೨. ಡಾ.ಸಿ.ಬಿ ಹೊನ್ನಯ್ಯ. : ಕನ್ನಡ ಸಾಹಿತ್ಯ ಸಂಸ್ಕೃತಿ ಮೀಮಾಂಸೆ, ಜೈ ಭೀಮ್ ಪ್ರಕಾಶನ-೨೦೦೮

೩. ರಾಜಪ್ಪ ದಳವಾಯಿ. : ಕನ್ನಡ ಸಾಹಿತ್ಯ ಕೋಶ, ದಳವಾಯಿ ಪ್ರಕಾಶನ-೨೦೧೦

೪. ಡಾ.ಸಿ.ಎಸ್. ರಾಮಚಂದ್ರನ್. : ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ-೧೯೮೯

೫. ಡಾ.ಚಂದ್ರಶೇಖರ ಕಂಬಾರ. : ಜಾನಪದ ವಿಶ್ವಕೋಶ, ಕನ್ನಡ ಸಾಹಿತ್ಯ ಪರಿಷತ್ತು-೧೯೮೫

೬. ಪ್ರೊ.ಡಿ.ಲಿಂಗಯ್ಯ. : ಜಾನಪದ ಸ್ವರೂಪ ಮತ್ತು ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು-೨೦೦೬